ಮಾಸ್ತಿಯವರ ಸಣ್ಣ ಕಥೆಗಳ ಸಾಂಸ್ಕೃತಿಕ ಅಧ್ಯಯನ

ಎಂ. ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರಬಂಧ.

ಸಂಶೋಧಕರು
ಅಶೋಕ ಕುಮಾರ ರಂಜೇರೆ

ಮಾರ್ಗದರ್ಶಕರು
ಡಾ|| ಕರೀಗೌಡ ಬೀಚನಹಳ್ಳಿ

ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ
ಹಂಪಿ-583 211

ಮಾರ್ಚ್ ೧೯೯೪

65

ಮಾಸ್ತಿಯವರ ಸಣ್ಣ ಕಥೆಗಳ ಸಾಂಸ್ಕೃತಿಕ ಅಧ್ಯಯನ

ಎಂ. ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರಬಂಧ.

ಸಂಶೋಧಕರು

ಅಶೋಕ ಕುಮಾರ ರಂಜೇರೆ

ಮಾರ್ಗದರ್ಶಕರು

ಡಾ|| ಕರೀಗೌಡ ಬೀಚನಹಳ್ಳಿ

ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ
ಹಂಪಿ-583 211

ಮಾರ್ಚ್ ೧೯೯೪

ಮಾಸ್ತಿಯವರ ಸಣ್ಣ ಕಥೆಗಳ ಸಾಂಸ್ಕೃತಿಕ ಅಧ್ಯಯನ

ಎಂ. ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪ್ರಬಂಧ.

ಸಂಶೋಧಕರು

ಅಶೋಕ ಕುಮಾರ ರಂಜೇರೆ

ಮಾರ್ಗದರ್ಶಕರು

ಡಾ|| ಕರೀಗೌಡ ಬೀಚನಹಳ್ಳಿ

ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ
ಹಂಪಿ-583 211

ಮಾರ್ಚ್ ೧೯೯೪

:: ದೃಢೀಕರಣ ಪತ್ರ ::

ಶ್ರೀ ಅಶೋಕ ಕುಮಾರ ಇವರು 'ಮಾಸ್ತಿಯವರ ಸಣ್ಣ ಕಥೆಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಶೀರ್ಷಿಕೆಯ ಈ ಸಂಶೋಧನ ಪ್ರಬಂಧವನ್ನು ನನ್ನ ಜೊತೆ ಸಮಾಲೋಚಿಸಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವನ್ನು ಅಥವಾ ಪ್ರಬಂಧದ ಯಾವುದೇ ಭಾಗವನ್ನು ಅಶೋಕ ಕುಮಾರ ಅವರು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ.

ದಿನಾಂಕ:

ಸ್ಥಳ : ಹಂಪಿ.

(ಡಾ::ಕರೀಗೌಡ ಬೀಚನಹಳ್ಳಿ)
ಮಾರ್ಗದರ್ಶಕರು
ರೀಡರ್
ಕನ್ನಡ ವಿಶ್ವವಿದ್ಯಾಲಯ
ಹಂಪಿ-583211.

ಪ್ರಮಾಣ ಪತ್ರ

"ಮಾಸ್ತಿಯವರ ಸಣ್ಣ ಕಥೆಗಳ ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯ ಈ ಪ್ರಬಂಧವನ್ನು ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು ಡಾ:: ಕರೀಗೌಡ ಬೀಚನಹಳ್ಳಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲೀ ಅಥವಾ ಯಾವುದೇ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ಘೋಷಿಸುತ್ತೇನೆ.

ದಿನಾಂಕ:

ಸ್ಥಳ : ಹಂಪಿ.

(ಅಶೋಕ ಕುಮಾರ ರಂಜೇರೆ)

ಎಂ.ಫಿಲ್. ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾಲಯ
ಹಂಪಿ–583211.

:: ಕೃತಜ್ಞತೆಗಳು ::

ಸೇವಾ ಅವಧಿಯಲ್ಲಿ ಎಂ.ಫಿಲ್. ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಟ್ಟ ಕನ್ನಡ ವಿಶ್ವವಿದ್ಯಾಲಯಕ್ಕೆ.

ಮಾರ್ಗದರ್ಶಕರಾಗಿ ಅಧ್ಯಯನದ ಎಲ್ಲ ಹಂತದಲ್ಲೂ ಸೂಕ್ತ ಸಲಹೆ ನೀಡಿ ಪ್ರೋತ್ಸಾಹಿಸಿದ ಡಾ:: ಕರೀಗೌಡ ಬೀಚನಹಳ್ಳಿ ಅವರಿಗೆ.

ಅಧ್ಯಯನದ ಪ್ರಾರಂಭದಿಂದ ಕೊನೆಯವರೆಗೆ ಹಲವಾರು ವಿಧದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಉಪಯುಕ್ತ, ಸಲಹೆ, ಸಹಕಾರ ನೀಡಿದ ಪ್ರೀತಿಯ ಮೇಷ್ಟ್ರುಗಳಾದ ಎಚ್.ಎಸ್.ಆರ್., ಕೆ.ವಿ.ಎನ್., ಎಚ್.ಎಸ್.ಎಸ್., ಮುಂತಾದವರಿಗೆ.

ಪ್ರಬಂಧದ ಸಿದ್ಧತೆಯಲ್ಲಿ ಸಹಕರಿಸಿದ ಚಲಪತಿ, ಗೋವಿಂದರಾಜು ಅವರಿಗೆ ಮತ್ತು ಅನನ್ಯ ಗೆಳೆಯರಿಗೆ.

ಪರೋಕ್ಷವಾಗಿ ಸಹಕಾರ ಕೊಟ್ಟ ಅಮರೇಶ್, ಯೂಜಿ, ಶಶಿ, ರಮೇಶ್ ಮುಂತಾದ ಸ್ನೇಹಿತರಿಗೆ

ಕಡಿಮೆ ಸಮಯದಲ್ಲಿ ಅಚ್ಚುಕಟ್ಟಾಗಿ ಬೆರಳಚ್ಚು ಮಾಡಿಕೊಟ್ಟ ಆಂಜನೇಯ ಅವರಿಗೆ

ಹೃತ್ಪೂರ್ವಕ ಕೃತಜ್ಞತೆಗಳು.

ದಿನಾಂಕ:

ಸ್ಥಳ : ಹಂಪಿ.

(ಅಶೋಕ ಕುಮಾರ ರಂಜೇರೆ)
ಯೋಜನಾ ಸಹಾಯಕ
ಕನ್ನಡ ವಿಶ್ವವಿದ್ಯಾಲಯ
ಹಂಪಿ-583211.

ಮಾಸ್ತಿಯವರ ಸಣ್ಣ ಕಥೆಗಳ ಸಾಂಸ್ಕೃತಿಕ ಅಧ್ಯಯನ

o o o o

ಅಧ್ಯಾಯ : 1 ಪೀಠಿಕೆ

ಅಧ್ಯಯನದ ಸ್ವರೂಪ

ಪೀಠಿಕೆ

ಮಾಸ್ತಿ ವೆಂಕಟೇಶ ಅಯ್ಯಂಗಾರರು ('ಶ್ರೀನಿವಾಸ') ಜ್ಞಾನಪೀಠ ಪ್ರಶಸ್ತಿ ಪಡೆದ ಐದು ಜನ ಕನ್ನಡ ಲೇಖಕರಲ್ಲಿ ಒಬ್ಬರು. ಕಥೆ, ಕಾದಂಬರಿ, ಕಾವ್ಯ ನಾಟಕ, ವಿಮರ್ಶೆ, ಅನುವಾದ ಹೀಗೆ ಹತ್ತು ಹಲವು ಸಾಹಿತ್ಯ ಪ್ರಕಾರಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರೂ ಮಾಸ್ತಿಯವರ ಸೃಜನಶೀಲ ಪ್ರತಿಭೆ ಸಣ್ಣ ಕಥೆಗಳಿಗೆ ಹೆಚ್ಚು ಮೀಸಲು. ಕನ್ನಡ ಸಣ್ಣ ಕಥಾ ಕ್ಷೇತ್ರದಲ್ಲಿ ಪಂಜೆಯವರು ಕಥೆಗಳನ್ನು ಬರೆಯಲು ಪ್ರಾರಂಭಿಸಿದ ಮೊದ-ಲಿಗರು ಎಂದರೂ ಕಥಾ ಸಾಹಿತ್ಯಕ್ಕೆ ಒಂದು ಖಚಿತವಾದ ಆಕಾರವನ್ನು ಕೊಟ್ಟಿದ್ದು ಮಾಸ್ತಿಯವರೇ ಎಂಬುದು ನಿಸ್ಸಂದೇಹ.

ಮಾಸ್ತಿ ಅವರು ಕಥೆ ಬರೆಯಲು ಪ್ರಾರಂಭಿಸಿದ ದಿನಗಳಿಂದ ಇಲ್ಲಿಯವರೆಗೆ ಕಥಾ ಚೌಕಟ್ಟಿನಲ್ಲಿ ತಂತ್ರ, ಶೈಲಿ, ಭಾಷಾ ಬಳಕೆ ಹೀಗೆ ವಿವಿಧ ಹಂತಗಳಲ್ಲಿ ಮಾರ್ಪಾಡು ಪಡೆದಿವೆ. (ನವೋದಯ, ನವ್ಯ, ಪ್ರಗತಿಶೀಲ, ದಲಿತ – ಬಂಡಾಯ) ಆದರೂ ಈಗಲೂ ಮಾಸ್ತಿ ಕಥೆಗಳು ಸಂಕೀರ್ಣವಾಗಿರದೆ, ಸರಳವಾಗಿವೆ. ಮೊದಲನೇ ಬಾರಿಗೆ 'ಓದುಗನಿಗೆ ಭಾವನಾತ್ಮಕವಾಗಿ ಹಿಡಿದಿಡಬಲ್ಲ, ಆಕರ್ಷಿಸುವ ಶಕ್ತಿಯುಳ್ಳವಾಗಿವೆ. ತಾನು ಬರೆದ ಇಂಥ ಕಥೆಗಳಲ್ಲಿ ಮಾಸ್ತಿ ತಾವು ನಂಬಿದ, ಆಶಿಸುವ ಭಾರತೀಯ ಸಂಸ್ಕೃತಿ ಹೇಗೆ ಹಾಸುಹೊಕ್ಕಿದೆ ಎನ್ನುವುದನ್ನು ಚರ್ಚಿಸುವುದು ಈ ಪ್ರಬಂಧದ ಪ್ರಧಾನ ಆಶಯ. ಸಂಸ್ಕೃತಿಯನ್ನು ಅರ್ಥೈಸಿಕೊಳ್ಳಲು ಮುಖ್ಯ ಮಾರ್ಗಗಳಾದ ಸಮಾಜ, ಧರ್ಮ, ನಂಬಿಕೆ–ದೈವ ಆಚರಣೆಗಳು, ವಿವಾಹ ಸಂಬಂಧಗಳು, ಆಡಳಿತ, ನ್ಯಾಯ ಇವುಗಳನ್ನು ರೂಪಿಸಿಕೊಂಡ ಮನುಷ್ಯ, ಆತನ ಕ್ರಿಯೆ ಮತ್ತು ಯೋಚನೆಗಳ ಮೂಲಕ ವಿವರಿಸಲು ಪ್ರಯತ್ನಿಸಿದೇನೆ. ಮಾಸ್ತಿಯವರು ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರಿಂದ ಈ ಪ್ರಬಂಧ ಅವರ ಸಣ್ಣ ಕಥೆಗಳಿಗೆ ಮಿತಿಗೊಳಿಸಿಕೊಂ-ಡಿದೇನೆ. ಪ್ರತ್ಯೇಕ ಕಥೆಗಳ ಚರ್ಚೆಗೆ ಹೋಗಿಲ್ಲ. ಬದಲಾಗಿ ಒಟ್ಟು ಕಥೆಗಳ ಹಿನ್ನೆಲೆಯಲ್ಲಿ ಕೆಲವು ಪ್ರಮುಖ ಕಥೆಗಳ ಮೂಲಕ ನನ್ನ ಕೆಲವು ಅಭಿಪ್ರಾಯಗಳನ್ನು ಮಂಡಿಸಲು ಯತ್ನಿಸಿದೇನೆ.

ಇದುವರೆಗೆ ಮಾಸ್ತಿಯವರ ಕಥೆಗಳ ಬಗ್ಗೆ ಅಪಾರವಾಗ ವಿಮರ್ಶೆ ಬಂದರೂ ಅದು ಕನ್ನಡ ಕಥಾ ಪರಂಪರೆಯನ್ನು ಗುರುತಿಸುವಾಗ ಅಥವಾ ಸಣ್ಣ ಕಥೆಗಳ ಬಗ್ಗೆ ಮಾತನಾಡುವಾಗ ಇಲ್ಲವೇ ಪ್ರತ್ಯೇಕ ಕಥೆಗಳಿಗೆ ಸಂಬಂಧಿಸಿದವುಗಳಾಗಿವೆ. [ಎಂ.ಜಿ.ಕೃಷ್ಣಮೂರ್ತಿ, ಯು.ಆರ್.ಅನಂತಮೂರ್ತಿ, ಕೀರ್ತಿನಾಥ ಕುರ್ತಕೋಟಿ, ಕೆ.ವಿ.ನಾರಾಯಣ, ಎಚ್.ಎಸ್.ರಾಘವೇಂದ್ರರಾವ್, ಡಿ.ಆರ್.ನಾಗರಾಜರವರಂಥ ಪ್ರಮುಖ ವಿಮರ್ಶಕರು ಮಾಸ್ತಿಯವರ ಒಟ್ಟು ಕಥೆಗಳ ಹಿನ್ನೆಲೆಯಲ್ಲಿ ಚರ್ಚಿಸಿದರೂ ಅದು ಸಮಗ್ರವಾಗಿಲ್ಲ. ಹಾಗಾಗಿ ಮಾಸ್ತಿಯವರ ಕಥೆಗಳಲ್ಲಿ ರೂಪುಗೊಂಡ ಭಾರತೀಯ ಸಂಸ್ಕೃತಿ,ಭಾರತೀಯರ ಪರಂಪರೆಯ ಅನೇಕ ಮೌಲ್ಯಗಳು ಕಥೆಗಳ ಉದ್ದಕ್ಕೂ ಹೇಗೆ ರೂಪು ತಳೆಯುತ್ತ ಹೋಗುತ್ತದೆ ಎನ್ನುವುದನ್ನು ಅವರ ಒಟ್ಟು ಕಥೆಗಳ ಹಿನ್ನೆಲೆಯಲ್ಲಿ ಚರ್ಚೆ ಮಾಡಲಾಗಿದೆ.

ಸಂಸ್ಕೃತಿ ಎನ್ನುವ ಮಾತನ್ನು ಸರಳೀಕರಿಸಿಕೊಂಡಿದ್ದೇನೆ. ಭಾರತೀಯ:ಕರ್ನಾಟಕದ ಸಂಸ್ಕೃತಿಗೆ ಸಂಬಂಧಿಸಿದಂತೆ ನಮ್ಮ ಸಮಾಜದ ಜನರಲ್ಲಿ ಮಾನಸಿಕ ಮತ್ತು ಬಾಹ್ಯ ಆಚಾರ–ವಿಚಾರಗಳು, ಆತನ ಕ್ರಿಯೆ–ಯೋಚನೆಗಳಲ್ಲಿ ಗೋಚರವಾಗುವ ಅಂಶಗಳೇ ಸಂಸ್ಕೃತಿ ಎಂದು ಪರಿಗಣಿಸಿದ್ದೇನೆ. ಇನ್ನಷ್ಟು ವಿವರಣೆ ಕೊಡುವುದಾದರೆ ಒಂದು ಸಮಾಜದಲ್ಲಿ ಬದುಕಿರುವ, ಬದುಕುತ್ತಿರುವ ಜನರ ಜೀವನಕ್ಕೆ ಸಂಬಂಧಿಸಿದಂತೆ ಆ ಜನರ ಆಚಾರ–ವಿಚಾರ, ರೂಢಿ, ಸಂಪ್ರದಾಯ, ಜೀವನ ಕ್ರಮ ಹೀಗೆ ಆತನ ಜೀವನದ ಎಲ್ಲ ಮಗ್ಗುಲುಗಳನ್ನು ವಿವರಿಸುವುದು.ಅಷ್ಟೇ ಅಲ್ಲದೆ ಆತನ ಮಾನಸಿಕ ಮತ್ತು ಬಾಹ್ಯ (ದಿನ ನಿತ್ಯದಲ್ಲಿ) ಕ್ರಿಯೆಗಳೆಲ್ಲದರ ಒಟ್ಟು ಮೊತ್ತವೇ ಸಂಸ್ಕೃತಿ ಎಂದು ಪರಿಗಣಿಸಿದ್ದೇನೆ. ಯಾವುದೇ ಒಂದು ಸಮುದಾಯಕ್ಕೆ ತನ್ನದೇ ಆದ ವಿಶಿಷ್ಟವಾದ ಸಂಸ್ಕೃತಿಯ ಹಿನ್ನೆಲೆ ಇರುತ್ತದೆ. ಅಮೇರಿಕದಂಥ ಮುಂದು ವರೆದ ರಾಷ್ಟ್ರದ ಜನರು ಜೀವಿಸುವ ಕ್ರಮ, ಯೋಚಿಸುವ ರೀತಿ ಭಿನ್ನವಾದುದು. ಹಾಗೇಯೆ ಚೀನ ಮುತ್ತಿತರ ದೇಶದ ಜನರ ಜೀವನದ ಬದುಕುವ,ಚಿಂತಿಸುವ ರೀತಿ ಬೇರೆ ದೇಶಕ್ಕಿಂತ ಭಿನ್ನವಾದುವಗಳು. ಹಾಗೆಯೇ ಭಾರತೀಯ ಜನರ ಸಂಸ್ಕೃತಿಗೂ ಸಹ ತನ್ನದೇ ಆದ ಅನೇಕ ವಿಶಿಷ್ಟತೆಗಳು ಇವೆ. ಇಂಥ ವಿಶಿಷ್ಟ ನೆಲೆಗಳನ್ನು ಒಬ್ಬೊಬ್ಬ ಕಲಾವಿದ ಒಂದೊಂದು ಬಗೆಯಲ್ಲಿ ಸೆರೆ ಹಿಡಿಯುತ್ತಾನೆ. ಚಿತ್ರಕಾರ ಬಣ್ಣಗಳಲ್ಲಿ ಸೆರೆ ಹಿಡಿದರೆ, ಶಿಲ್ಪಿ ಕಲ್ಲಲ್ಲಿ ಕೆತ್ತುತ್ತಾನೆ. ಸಂ-ಗೀತಗಾರ ನಾದಗಳಲ್ಲಿ ತೋರಿಸುತ್ತಾನೆ. ಹಾಗೆಯೇ ಒಬ್ಬ ಕವಿ, ಕಾದಂಬರಿಕಾರ,ನಾಟಕಕಾರ, ಕಥೆಗಾರ ತಾನು ಕಂಡ, ಕಾಣುವ ಸಮಾಜವನ್ನು ಮತ್ತು ತನ್ನ ರಕ್ತದಲ್ಲಿ ಅಂತಸ್ಥಗೊಂಡ ಸಂಸ್ಕೃತಿಯನ್ನು ಕವನ, ಕಾದಂಬರಿ, ಕಥೆ ರಚಿಸುವಾಗ ಪ್ರಜ್ಞಾಪೂರ್ವಕವಾಗಿ ಅಪ್ರಜ್ಞಾಪೂರ್ವಕವಾಗಿ ಪ್ರತಿಬಿಂಬಿಸುತ್ತಾನೆ. ಅದು ಒಂದೊಂದು ನೆಲೆಯಲ್ಲಿ ಒಂದೊಂದು

ರೀತಿಯಾಗಿ ರೂಪು ತಳೆಯಬಹುದು. ಒಬ್ಬ ಸಾಹಿತಿಯಲ್ಲಿ ಧರ್ಮದ ಪರಿಕಲ್ಪನೆ ಹೆಚ್ಚಾಗಿ ಅಂತಸ್ಥಗೊಂಡಿರಬಹುದು. ಮತ್ತೊಬ್ಬನಲ್ಲಿ ಮಾನವೀಯತೆಗೆ ಹೆಚ್ಚು ಒತ್ತು ಕೊಡಬಹುದು ಮಗದೊಬ್ಬರಲ್ಲಿ ಮನುಷ್ಯ ಸಂಬಂಧಗಳನ್ನು ಹೆಚ್ಚು ಹೆಚ್ಚು ಚಿತ್ರಿಸುತ್ತ ಹೋಗಬಹುದು. ಹೀಗೆ ಮೇಲು ನೋಟಕ್ಕೆ ಬೇರೆ ಬೇರೆ ಕಂಡರೂ ಈ ಎಲ್ಲ ಬಗೆಯ ಕೃತಿಗಳಲ್ಲಿ ಸಂಸ್ಕಾರ ಪಡೆದ ತನ್ನ ಸಮಾಜದ ಸಂಸ್ಕೃತಿಯ ಅನೇಕ ಮುಖಗಳು ಲೀನವಾಗಿರುತ್ತವೆ. ಅವುಗಳನ್ನು ಸೂಕ್ಷ್ಮವಾಗಿ ಬಿಡಿಸಿದರೆ ಮಾತ್ರ ಆ ಸಂಸ್ಕೃತಿಯ ಅಂತರಂಗದ ಪದರುಗಳ ಮೇಲೆ ಬೆಳಕು ಬಲ್ಲುತ್ತದೆ.

ಮಾಸ್ತಿ ವೆಂಕಟೇಶ ಅಯ್ಯಂಗಾರರವರ ಮೇಲೆ ಪ್ರಾಚೀನ ಸಾಹಿತ್ಯದ ಪ್ರಭಾವ ಇದೆ ಎಂದು ಎಂ.ಜಿ.ಕೃಷ್ಣಮೂರ್ತಿ ಹೇಳುತ್ತಾರೆ. ಈ ಮಾತಿಗೂ ಮತ್ತು ಸ್ವತ: ಮಾಸ್ತಿಯವರೇ ತಮ್ಮ ಆತ್ಮಕಥನವಾದ 'ಭಾವ' ದಲ್ಲಿ ಮತ್ತು ಅನೇಕರಿಗೆ ನೀಡಿದ ಸಂದರ್ಶನದಲ್ಲಿ ತಮ್ಮ ಕಥೆಗಳಿಗೆ 'ಸ್ಟ್ರಂಡ ಮ್ಯಾಗಝಿನ್‌ನಲ್ಲಿ ಬರುವ ಕಥೆಗಳು ಪ್ರಭಾವ ಬೀರಿವೆ. '' ಇಂಗ್ಲೀಷನಲ್ಲಿ ಡಿಕನ್ಸ ಕೃತಿಗಳನ್ನು 'ಓದೋಕೆ ಪ್ರಾರಂಭಿಸಿದ ದಿನಗಳಲ್ಲಿ ಸಣ್ಣ ಕಥೆಗಳು ಕಣ್ಣಿಗೆ ಬಿದ್ದುವು. ಚೆನ್ನಾಗಿ ಕಂಡವು, ಆಗ ಬಿ.ಎ.ಕ್ಲಾಸಿನಲ್ಲಿದ್ದಾಗ ಈ Strand Magazine ನೋಡಿದೆ. ಅದರಲ್ಲಿ ಕಥೆಗಳು ಅನೇಕವಾಗಿ ಕಥೆಗಳು ಬರೋವು. ಆಗಿನ ದಿವಸಕ್ಕೆ ನಮ್ಮ ಜನಕ್ಕೂ ಇಂಥ ಕಥೆಗಳಿದ್ದರೆ ಚೆನ್ನಾಗಿದ್ದಿತ್ತಲ್ಲ ಅಂತ ಅನ್ನಿಸ್ತು ನನಗೆ. ಅದರಿಂದ ಒಲವು''. (ವಿ.ಸೀತಾರಾಮಯ್ಯ — ಮಾಸ್ತಿ ಸಂದರ್ಶನಗಳು — ಪು-1) ಎನ್ನುವ ಮಾತು ಭಿನ್ನವಾಗಿರುವಂತಿದೆ. ಆದರೆ ಮಾಸ್ತಿಯವರು ಈ ಎರಡೂ ಮಾದರಿಗಳನ್ನು ಜೀರ್ಣಿಸಿಕೊಂಡು ಕಥೆಗಳನ್ನು ರಚಿಸಿದ್ದಾರೆ. ಕಥೆಯ ಮಾದರಿ, ಕಥೆಗಳಲ್ಲಿ ಅಂತಸ್ಥಗೊಂಡ ಜಗತ್ತು, ಪಾತ್ರಗಳು, ಸಂಪೂರ್ಣವಾಗಿ ಭಾರತೀಯ : ಕರ್ನಾಟಕ ಸಮಾಜಕ್ಕೆ ಸಂಬಂಧಿಸಿದಂತಿವೆ. ಕಥೆಯ ತಂತ್ರ, ಕಥೆಗಳ ಮೂಲಕ ಹೇಳುವ ನೀತಿ ಮಾತುಗಳು ಈ ಹೊತ್ತಿಗೆ ಸಂಸ್ಕೃತದಿಂದ ಭಾರತೀಯ ಭಾಷೆಗಳಿಗೆ ಪರಿಚಿತವಾಗಿದ್ದುವು. ಪಂಚತಂತ್ರ, ವಡ್ಡಾರಾಧನೆಯಂಥ ಕಥೆಗಳು, ಅವುಗಳಿಗಿಂತ ಹೆಚ್ಚಾಗಿ ಅಜ್ಜ ಹೇಳುವ ಕಥೆಗಳು ಮನುಷ್ಯ ನಾಗರಿಕನಾಗುತ್ತ ನಡೆದಂತೆಲ್ಲ ಕಥೆಯ ವಸ್ತು, ತಂತ್ರಗಳೆಲ್ಲ ಬದಲಾವಣೆ ಪಡೆಯುತ್ತ ಬಂತು. ಈ ಪ್ರಕ್ರಿಯೆ ಎಲ್ಲ ಜನಾಂಗದಲೂ ನಡೆದೇ ಇದೆ. ಹಾಗಾಗಿ ಕಥೆಯ ತಂತ್ರ, ಶೈಲಿ, ನಿರೂಪಿಸುವ ವಸ್ತು (ನೀತಿ ಬೋಧನೆ) ಭಾರತೀಯ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗವೇ ಆಗಿದ್ದವು. ಅದು ಹೆಚ್ಚಾಗಿ ಕಥೆಯ ರೂಪ ಪಡೆದಿರಲಿಲ್ಲ. ಅಷ್ಟೆ. ಮಾಸ್ತಿ ಕಥೆ ಬರೆಯಲು Strand Magazine ಎಷ್ಟು ಸ್ಫೂರ್ತಿದಾಯಕವಾಯಿತೋ ಭಾರತೀಯ : ಕರ್ನಾಟಕ ಸಾಂಸ್ಕೃತಿಕ ಒತ್ತಡ ಸಹ ಅಷ್ಟೇ ಪ್ರಬಲವಾದ ಕಾರಣ.

ಮಾಸ್ತಿಯವರು ಸಮಾಜದಲ್ಲಿನ ಜನರ ಜೀವನದ ಅನೇಕ ಘಟನೆಗಳನ್ನು ಕಲಾತ್ಮಕವಾಗಿ ಕಥೆಯ ಚೌಕಟ್ಟಿನಲ್ಲಿ ಹೇಳುತ್ತಾರೆ. ಈಗಲೂ ನಮ್ಮ ಸಮುದಾಯದಲ್ಲಿ ತಳುಕು ಹಾಕಿಕೊಂಡ ಆಚರಣೆಗಳು, ನಂಬಿಕೆಗಳು ಜೀವಂತವಾಗಿರುವುದನ್ನು ಭಾರತೀಯ ಸಂಪ್ರದಾಯ ಮೌಲ್ಯಗಳ ಮತ್ತು ವೈಚಾರಿಕ ಹಿನ್ನೆಲೆಯಲ್ಲಿ ಕಲಾಕೃತಿ ಸರಳವಾಗಿ,ಕಲಾತ್ಮಕವಾಗಿ ಬಿಡಿಸುತ್ತಾ ಹೋಗುತ್ತಾರೆ. ಮೇಲು ನೋಟಕ್ಕೆ ಭಾರತೀಯ ಸಂಪ್ರದಾಯಬದ್ಧ ಮೌಲ್ಯಗಳನ್ನು ಮಾತ್ರ ಮಾಸ್ತಿ ನಂಬುತ್ತಾರೆ ಎಂದೆನಿಸಿದರೂ ಕಥೆಗಳನ್ನು ಒರೆಗಲ್ಲಿಗೆ ಹಚ್ಚುತ್ತ ನಡೆದಂತೆ ಮನುಷ್ಯ ಸಂಬಂಧಗಳು, ಅವನ ಅಂತರಾಳದ ಮನಸ್ಸು ಚಿತ್ರಿಸುವುದು. ಕಥೆಗಳ ಆಶಯ ಜೀವನದ ಸಾರ್ಥಕತೆ ಕಂಡುಕೊಳ್ಳುವ ಕಡೆಗೆ ಮುಖ ಮಾಡುವುದು ಗೋಚರವಾಗುತ್ತ ಹೋಗುತ್ತದೆ.

ತಮ್ಮ ಕಥೆಗಳ ಬಗೆಗೆ ಮಾಸ್ತಿ ಅವರು ಒಂದೆಡೆ ಹೇಳುವ ಹಾಗೆ ವಾಸ್ತವದಲ್ಲಿ ಜೀವನ ಹೇಗಿದೆಯೋ ಹಾಗೆ ಚಿತ್ರಿಸಿದ್ದೇನೆ ಎನ್ನುತ್ತಾರೆ. ''ಜೀವನದಲ್ಲಿ ಹೇಗಿದೆಯೋ ಹಾಗೇ ಬರೆದಿದ್ದೇನೆ. ಅದು ನನ್ನ ತಿಳುವಳಿಕೆ ಅದು ಸಹಜವಾಗಿ ಇದ್ದರೆ ಚಿತ್ರ ಸರಿಯಾದ ಚಿತ್ರ. ಅದರ ಯಾವುದೋ ಒಂದು ಭಾಗ ಮುಖ್ಯವಾಗಿ ಕಾಣಬಹುದು. ಇನ್ನೊಂದು ಭಾಗ ಅಷ್ಟೊಂದು ಮುಖ್ಯವಾಗಿ ಕಾಣದೇ ಇರಬಹುದು. ನನ್ನ ಮುಖ್ಯ ಉದ್ದೇಶ ಜೀವನದ ಚಿತ್ರ ಕೊಡುವುದು'' (ಕೆ.ವಿ.ನಾರಾಯಣ – ಮಾಸ್ತಿ ಸಂದರ್ಶನಗಳು – ಪು–30) ಹೀಗೆ ಭಾರತೀಯ ಸಂಸ್ಕೃತಿಯಲ್ಲಿ ಸಂಸ್ಕಾರಗೊಂಡ ಕಥೆಗಾರರು ಜನರ ಜೀವನದ ಚಿತ್ರಣವನ್ನು ಕಲಾತ್ಮಕವಾಗಿ ಭಾವನಾತ್ಮಕವಾಗಿ 'ಓದುಗನಿಗೆ ಕಥಾ ರೂಪದಲ್ಲಿ ನೀಡುವರು. ಮೇಲು ನೋಟಕ್ಕೆ ಕಲಾತ್ಮಕ reporter ರೀತಿಯಲ್ಲಿ ಕಂಡರೂ ಅವುಗಳಲ್ಲಿ ತಮ್ಮದೇ ಆದ ತಾವು ನಂಬಿದ, ಆಶಿಸುವ ಜಗತ್ತಿನ ಮೌಲ್ಯಗಳನ್ನು ತುಂಬಿದ್ದಾರೆ.

ಕಥೆಗಳಲ್ಲಿ ಸಮಾಜದಲ್ಲಿ ಕಾಣುವ ಎಲ್ಲ ಬಗೆಯ ಜನರನ್ನು, ವಿವಿಧ ರೀತಿಯ ಸಂಬಂಧಗಳನ್ನು ಚಿತ್ರಿಸುವ ಪಾತ್ರಗಳಿವೆ. ಮೇಲುವರ್ಗ, ಕೆಳವರ್ಗ, ಹೆಣ್ಣು–ಗಂಡು, ಅವರ ನಡುವಿನ ಸಂಬಂಧ, ಅವರು ಬದುಕುವ ಸಮಾಜ ಇದೆ. ಆ ಸಮಾಜದ ಮತ್ತು ಅಸಮಾಜದಲ್ಲಿ ಬದುಕುತ್ತಿರುವ ಮನುಷ್ಯನ ಇತಿಮಿತಿ ಸೂಕ್ಷ್ಮತೆಗಳನ್ನು ಚಿತ್ರಿಸಿದ್ದಾರೆ.

ಮಾಸ್ತಿಯವರ ಮೊದಲ ಕಥೆಯಾದ 'ರಂಗನ ಮದುವೆ' ಯಿಂದ ಕೊನೆಯ ಕಥೆ ಮಾಯಣ್ಣನ ಕನ್ನಡಿಯವರೆಗೆ ಎಲ್ಲ ಕಥೆಗಳಲ್ಲೂ (ಕೆಲವು ಕಥೆಗಳು ಅಪವಾದ) ಭಾರತೀಯ : ಕರ್ನಾಟಕದ ಸಂಸ್ಕೃತಿಯ ಚಿತ್ರಣದೊಂದಿಗೆ ತಾವು ನಂಬಿದ ಸಂಪ್ರದಾಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಕಥೆಗಳಾಗಿವೆ. ಆ ಸಮಾಜಕ್ಕೆ ಕಟ್ಟುಪಾಡುಗಳಾಗಬಹುದು. ನಂಬಿಕೆ– ದೈವ–

ಪುರಾಣಗಳಾಗಬಹುದು, ಸಾಹಿತ್ಯ ಪರಿಕಲ್ಪನೆಯಾಗಬಹುದು ಅಥವಾ ಕುಟುಂಬ ವ್ಯವಸ್ಥೆಯೋ ಆಗಬಹುದು. ಇವುಗಳನ್ನು ಬಿಡಿ ಬಿಡಿಯಾಗಿ ವಿವರದೊಂದಿಗೆ ಚರ್ಚಿಸುವುದರ ಮೂಲಕ ವ್ಯಕ್ತವಾಗುವ ಸಂಸ್ಕೃತಿಯನ್ನು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ ಸಂಸ್ಕೃತಿಯನ್ನು ಬೇರೆ ಬೇರೆ ಅಧ್ಯಾಯಗಳ ಮೂಲಕ ನೋಡಲಾಗಿದೆ.

ಅಧ್ಯಾಯ : 2

ಮಾಸ್ತಿಯವರ ಸಣ್ಣ ಕಥೆಗಳಲ್ಲಿ ಕಾಣುವ ಸಮಾಜ

ಮಾಸ್ತಿಯವರ ಸಣ್ಣ ಕಥೆಗಳಲ್ಲಿ ಕಾಣುವ ಸಮಾಜ

ಮಾಸ್ತಿಯವರ ಕಥೆಗಳಲ್ಲಿನ ಸಮಾಜ ವಾಸ್ತವದ ಸಮಾಜದಂತಿದ್ದರೂ ವಾಸ್ತವದ್ದಲ್ಲ. ಅದೊಂದು ಆದರ್ಶ ಸಮಾಜ, ಭಾರತೀಯ ಪಾರಂಪರಿಕ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಸಮಾಜ. ಎಂ ಜಿ.ಕೆ.ಯವರು ಹೇಳುವ ಹಾಗೆ '' ನಮ್ಮ ಚರಿತ್ರೆಯ ಒಂದು ಘಟ್ಟದಲ್ಲಿ ಅಸ್ತಿತ್ವದಲ್ಲಿದ್ದ ಸಾಮಾಜಿಕ ಚೌಕಟ್ಟಿಗೂ ಮಾಸ್ತಿಯವರ ಸಂವೇದನಾಶೀಲತೆಗೂ ಇರುವ ಅತಿನಿಕಟ ಸಂಬಂಧದಿಂದಾಗಿ ನಮ್ಮ ಸಂವೇದನಾ ಶೀಲತೆ ಬದಲಾದಂತೆ ಈ ಪ್ರಭಾವ ಕಡಿಮೆಯಾಗುವುದಲ್ಲದೆ ಹೆಚ್ಚಾಗುವುದು ಸಾಧ್ಯವಿಲ್ಲ'' (ಎಂ.ಜಿ.ಕೃಷ್ಣಮೂರ್ತಿ: ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು ಪು-   ) ಈ ಕಾರಣದಿಂದಲೇ ಬಹುಶ: ಮಾಸ್ತಿ ಪ್ರಸ್ತುತ ಜಗತ್ತಿನಿಂದ ದೂರ ನಿಲ್ಲುತ್ತಾರೆ. ಭಾರತೀಯ ಪಾರಂಪರಿಕ ಸಂಸ್ಕೃತಿಯನ್ನು ಹಿಡಿಯುತ್ತ ಹೋಗುತ್ತಾರೆ. - ಏಕೆಂದರೆ ಮಾಸ್ತಿಯವರಿಗೆ ತಾವು ನಂಬಿದ ಭಾರತೀಯ ಸಂಪ್ರದಾಯ ಮೌಲ್ಯಗಳ ಬಗೆಗೆ ಅಪಾರವಾದ ನಂಬಿಕೆ, ಪ್ರೀತಿ ಮತ್ತು ಕಳಕಳಿ ಇದೆ. ನಮ್ಮ ಸಂಸ್ಕೃತಿ, ನಮ್ಮ ಮೌಲ್ಯಗಳು ಕ್ರಮೇಣ ಹದಗೆಡುತ್ತಿರುವುದರ ಬಗೆಗಿನ ಅನುಕಂಪ ಇದೆ. ಉದಾಹರಣೆಗೆ ಮಾಸ್ತಿಯವರ ಪ್ರಮುಖ ಕಥೆಗಳಲ್ಲೊಂದಾದ 'ಮಸುಮತ್ತಿ' ಯಲ್ಲಿ ಭಾರತೀಯ ಕಲೆ, ಶಿಲ್ಪ, ಬಾಳಿ ಹೋದ ನಮ್ಮ ಶ್ರೀಮಂತ ಸಂಸ್ಕೃತಿಯ ಬಗ್ಗೆ ಒಲವಿರುವುದು ಕಾಣುತ್ತದೆ. ಈ ಕಥೆಯ ಮುಖ್ಯ ಪಾತ್ರವಾದ 'ಎಮಿಲಿ' ಸಂಪೂರ್ಣವಾಗಿ ಬಿಳಿಚರ್ಮ ತೊಟ್ಟ ಭಾರತೀಯ ಮನಸ್ಸುಳ್ಳವಳು. ಅವಳಿಗಿರುವ ಭಾರತೀಯ ಸಂಸ್ಕೃತಿ ಬಗೆಗಿನ ಅಂತ:ಕರಣ ಮಾಸ್ತಿಯವರದು. 'ಮಸು ಮತ್ತಿ' ಊರಿನ ಹಳೆಯ ಶಿಲ್ಪಕಲೆಯಾಗಲೀ, ಅಜಂತಾ ಗುಹೆಗಳಲ್ಲಿನ ಚಿತ್ರಗಳಾಗಲೀ, ಅದಕ್ಕಿಂತ ಮುಖ್ಯವಾಗಿ ಮಸುಮತ್ತಿ ಊರಿನ ಕೃಷ್ಣಯ್ಯನ ಅಜ್ಜ ಬರೆದ ಚಿತ್ರಪಟವಾಗಲೀ, ಭಾರತೀಯರ ಕಲಾಕೌಶಲ್ಯವನ್ನು ಎತ್ತಿ ಹಿಡಿಯುತ್ತವೆ. ಇದು ಪಾಶ್ಚಿಮಾತ್ಯರಿಗಿಂತ ಯಾವುದರಲ್ಲೂ ಕಡಿಮೆ ಇಲ್ಲ ಎನ್ನುವುದನ್ನು ಸೂಚಿಸುವಂತಿದೆ. 'ಕೃಷ್ಣನ' ಅದ್ಭುತ ಚಿತ್ರದಂತಿದ್ದ ನಮ್ಮ ಸಂಸ್ಕೃತಿ ಮೌಲ್ಯಗಳು ಇಂದು ಬೆಲೆ ಇಲ್ಲದಂತಾಗಿವೆ ನಿಜ. ಆದರೆ ಕೃಷ್ಣಯ್ಯನ ಮಗಳ ಮಗ ಚಿತ್ರಪಟ ಮುಗಿಸಲು ಪಟ್ಟುಕೊಂಡಂತೆ ಮತ್ತೆ ನಮ್ಮ ಸಂಸ್ಕೃತಿ ಪುನ:ನಿರ್ಮಾಣವಾಗಬೇಕು ಮತ್ತು ಆಗುತ್ತದೆ ಎನ್ನುವ ಆಶಯದ ಎಳೆಗಳು ಕಾಣುತ್ತವೆ.

'ರಂಗನ ಹಳ್ಳಿಯ ರಾಮು' ನ ಕಥೆಯಲ್ಲೂ ಕೂಡ ಇದೇ ಬಗೆಯ ಆಶಯ ವ್ಯಕ್ತವಾಗುತ್ತದೆ. ಊರ ಪಕ್ಕದಲ್ಲಿನ ರಂಗನಾಥ ದೇವಾಲಯದ ಹಿಂದಿನ ಸಣ್ಣ ಗುಡ್ಡದ ಅಡಿಯಲ್ಲಿ

ಇರುವಂತೆ ನಮ್ಮ ಸಂಸ್ಕೃತಿ ಮೌಲ್ಯಗಳು ನಮ್ಮಲ್ಲೇ ಆಳದಲ್ಲಿ ಅಡಗಿವೆ. ಒಬ್ಬ ಹಾಡುಗಾರನ ಹಾಡಿನಲ್ಲಿ ಈ ರಾಮನ ವಿವರಣೆ ಸಿಗುತ್ತದೆ. ಅದರಂತೆ ಫುರುಕ್ಕರವ ರಂಗನಾಥ ದೇವಾಲಯದ ಹಿಂದಿನ ಗುಡ್ಡವನ್ನು ಅಗೆಯಲು ಹೇಳುತ್ತಾನೆ. ಗುಡ್ಡವನ್ನು ಹತ್ತಿದರೇನೆ ಕಾರವ ನರಕಕ್ಕೆ ಹೋಗುತ್ತಾರೆ ಎನ್ನುವ ಅಲ್ಲಿನ ಹಿರಿಯರ ಮಾತಿನ ಹಿಂದಿನ ಸತ್ಯ ಯಾರಿಗೂ ತಿಳಿದಿಲ್ಲ. ಸತ್ಯ ಇರುವುದಂತೂ ಖಂಡಿತ. ಆ ಸತ್ಯ ಹುಡುಕಲು 'ಫುರುಕ್ಕರ' ನಂಥವರನ್ನು ಬರಿಸುತ್ತಾರೆ. ಗುಡ್ಡ ಅಗೆದಾಗ ಸಿಗುವ ರಾಮನ ವಿಗ್ರಹದಂತೆ ನಮ್ಮ ಪರಂಪರೆ ಮೌಲ್ಯಗಳು ದೊರೆಯುತ್ತವೆ ಎನ್ನುವುದನ್ನು ಈ ಕಥೆ ಧ್ವನಿಸುತ್ತದೆ.

'ವಸುಮತ್ತಿ' ಕಥೆಯಲ್ಲಿ ಬರುವ ಸುಂದರವಾದ ಪುಷ್ಕರಣಿಯ ಕಲ್ಲು ಯಾರೋ ಕಿತ್ತುಕೊಂಡು ಹೋಗಿರುವುದನ್ನು ನೋಡಿ 'ಎಮಿರಿ' ಅಣ್ಣ 'ಫುರುಕ್ಕರ' ವನಿಗೆ ಹೇಳುವ ಮಾತನ್ನು ಗಮನಿಸಬೇಕು. ''ಅಣ್ಣ ಅವರು ಮಾಡಿದ ಕೆಲಸವನ್ನೇ ನಾವು ಮಾಡಬೇಕೆಂದಿದ್ದೇವಲ್ಲಾ, ನೋಡು ಈಗ ಇದರಲ್ಲಿ ನೀರಿಲ್ಲ, ಹೋಗಲಿ ಚನ್ನಾಗಿದೆ. ಸೊಪ್ಪು ಸದೆ ತೆಗೆದು ಹಾಕಿ ಸರಿಯಾಗಿ ನೋಡಿಕೊಂಡರೆ ನೀರು ಇಂದಿಲ್ಲದಿದ್ದರೆ ನಾಲ್ಕು ವರುಷದ ಮೇಲೆ ಬಂದಾಗ್ಯೇ ಇದು ಒಳ್ಳೆಯ ಕೊಳ'' (ಸಣ್ಣ ಕಥೆಗಳು ಸಂಪುಟ-1-ಪು-22) ಭಾರತೀಯ ಸಂಸ್ಕೃತಿ, ಸಂಪ್ರದಾಯ, ಕಲೆಯ ಬಗೆಗಿನ 'ಎಮಿರಿ' ಯ (ರಂಗನಹಳ್ಳಿ ರಾಮ'ದಲ್ಲಿ ಫುರುಕ್ಕರವನ ಮನಸ್ಸು) ಮನಸ್ಸು ಭಾರತೀಯದು: (ಮಾಸ್ತಿಯವರದು) ಪುಷ್ಕರಣಿಯನ್ನು, ಚಿತ್ರಪಟದಲ್ಲಿರುವ ಶ್ರೇಷ್ಠ ಕಲೆಯನ್ನು, ಗುಡ್ಡದಡಿಯಲ್ಲಿ ಮುಚ್ಚಲ್ಪಟ್ಟ ರಾಮನನ್ನು ಕಾಪಾಡಿಕೊಳ್ಳಬೇಕಾದಂತೆ ನಮ್ಮ ಸಂಸ್ಕೃತಿಯನ್ನು ಕಾಪಾಡಿಕೊಳ್ಳಬೇಕು ಎನ್ನುವ ತುಡಿತ ಕತೆಗಾರರದ್ದಾಗಿದೆ. ಇದೇ ರೀತಿಯ ಆಶಯ ಒಂದು ಹಳೆಯ ಕಥೆಯಲ್ಲೂ ನೋಡಬಹುದು. ವ್ಯಾಸ ಗ್ರಂಥದಿಂದ ಒಂದು ಶ್ಲೋಕವನ್ನು ಸಂನ್ಯಾಸಿ ತನ್ನ ಶಿಷ್ಯನಿಗೆ ತಿದ್ದಲು ಹೇಳುತ್ತಾನೆ. ತಾನು ಮಾಡಿದ್ದು ತಪ್ಪೆಂದು ಅರಿವಾದ ಮೇಲೆ ಅದೇ ಶಿಷ್ಯನಿಗೆ ಮುಂಚಿನಂತೆಯೇ ಶ್ಲೋಕವನ್ನು ಸರಿ ಮಾಡಲು ಹೇಳುತ್ತಾನೆ. ''ಯಾವ ವೃದ್ಧನನ್ನೇ ಆಗಲಿ, ಯಾವ ಜ್ಞಾನಿಯನ್ನೇ ಆಗಲೀ ಸ್ತ್ರೀ ರೂಪ ಸೆಳೆಯಬಲ್ಲದು; ಆದರೆ ಸಂನ್ಯಾಸಿಯನ್ನು ಸೆಳೆಯಲಾರದು ಎಂದು ಬರೆ'' ಎಂದು ಹೇಳಿದ ಸಂನ್ಯಾಸಿ ಹೆಣ್ಣಿನಿಂದ ಮೋಹಿತನಾಗಿ ತನ್ನ ತಪ್ಪನ್ನು ಅರಿತು ''ಆ ದಿನ ಮಧ್ಯಾಹ್ನ ಶಿಷ್ಯನಿಗೆ ಪಾಠ ಹೇಳುವಾಗ ಹಿಂದಿನ ವ್ಯಾಸಕೃತ ಗ್ರಂಥದಲ್ಲಿ ಮೊದಲಿದ್ದಂತೆಯೇ ಶ್ಲೋಕವನ್ನು ತಿದ್ದಿಸಿದರು.'' (ಸಣ್ಣ ಕಥೆಗಳು ಮಾಸ್ತಿ — ಸಂ-1-ಪು-54) ಮಾಸ್ತಿಯವರ ಮನಸ್ಸು ಇಲ್ಲಿಯೂ ಕೂಡ ಸಂಸ್ಕೃತಿಯನ್ನು ಬದಲಾಯಿಸುವುದು ಸಂನ್ಯಾಸಿ ಮಾಡುವ ತಪ್ಪಿನಂತೆ ಎನ್ನುವಂತಿದೆ.

ಮೇಲೆ ಹೇಳಿದಂತೆ ಮಾಸ್ತಿಯವರ ಕಥೆಗಳಲ್ಲಿನ ಸಮಾಜ ವಾಸ್ತವದ್ದಲ್ಲ. ಅದೊಂದು ಆಶಯರೂಪಿ ಸಮಾಜ. ಆದರ್ಶ ಸಂಸ್ಕೃತಿ. 'ವೆಂಕಟಿಗನ ಹೆಂಡತಿ' ಕತೆಯ ವೆಂಕಟಿಗನ ತಾಳ್ಮೆ, 'ಬೈಚೆಗೌಡ' ಕಥೆಯ ಬೈಚಗೌಡನ ಸಹನೆ ಕ್ಷಮಾಗುಣ 'ಉಗ್ರಪ್ಪನ ಉಗಾದಿ'ಯ ಉಗ್ರಪ್ಪನ ಹಿರಿತನ ಆದರ್ಶದ್ದು. ಇವರು ಆದರ್ಶಸ್ತರದ ವ್ಯಕ್ತಿಗಳು. ಅಂಥವರನ್ನು ಒಂದು ಸಮಾಜದಲ್ಲಿ ಕಾಣುವುದು ಬಹಳ ಅಪರೂಪ. ಆದರೆ ಅಂಥ ವ್ಯಕ್ತಿಗಳು ರೂಪುಗೊಂಡದ್ದಕ್ಕೆ ಮಾತ್ರ ನಮ್ಮ ಪರಂಪರೆ, ಸಂಸ್ಕೃತಿಯೇ ಕಾರಣ. ಇಂಥ ಆದರ್ಶದ ವ್ಯಕ್ತಿಗಳ ಕಥೆಗಳುದ್ದಕ್ಕೂ ಅನೇಕ.

ಮುದರಂಗಿ ಊರಿನ ಜನರೆಲ್ಲ ತನ್ನ ಮಕ್ಕಳಂತೆ ಕಾಣುವ ಉಗ್ರಪ್ಪ ಸದಾ ಊರಿನ ಹಿತವನ್ನು ಬಯಸುವವ. ಕಂದಾಯ ಕಟ್ಟಿದರೂ ಕಟ್ಟಿಲ್ಲವೆಂದು ವಾದಿಸಿದ ಶಾನುಭೋಗನನ್ನು ಕಷ್ಟಕ್ಕೆ ನೂಕದೆ ತಾನೇ ಊರು ಬಿಡುತ್ತಾನೆ. ಜೈಲಿನಲ್ಲಿ ಕೆಲಸಕ್ಕೆ ಸೇರುತ್ತಾನೆ. ಮತ್ತೇ ಅದೇ ತಪ್ಪು ಮಾಡಿ ಶಾನುಭೋಗ ಜೈಲಿಗೆ ಬಂದಾಗ ಶಾನುಭೋಗನನ್ನು ಪ್ರೀತಿಯಿಂದ ಕಾಣುತ್ತಾನೆ. ಜೊತೆಗೆ ಜೈಲಿನಿಂದ ಹೊರಗೆ ಬರಲು ಸಹಾಯ ಮಾಡುತ್ತಾನೆ. ಇಂಥ ವಿಶಾಲ ಮನೋಭಾವದವನು. ಉಗ್ರಪ್ಪನ ಉಗಾದಿಯಲ್ಲಿ ಬರುವ ಉಗ್ರಪ್ಪನ ಹಿರಿತನ ಹೀಗೆ ಅರ್ಥ ಮಾಡಿಕೊಳ್ಳಬಹುದು. ಈ ಸಾರಿ ಸಾಹೇಬರಿಗೆ (ಮೇಲಿನ ಅಧಿಕಾರಿಗಳಿಗೆ) ಬೆಲ್ಲ ಬೇಕೆಂದಾಗ ಊರ ಪ್ರಮುಖರಾದ ಕೆಲವರಿಂದ (ತನ್ನನ್ನು ಸೇರಿಸಿಕೊಂಡು) ಬೆಲ್ಲದ ವ್ಯವಸ್ಥೆ ಮಾಡುವ ಸಂದರ್ಭದಲ್ಲಿ ಊರಿನ ಒಬ್ಬ ಸಾಮಾನ್ಯ ವ್ಯಕ್ತಿ ಚಿನ್ನಪ್ಪ ಗೌಡನಿಗೆ ಎದುರಾಗುತ್ತಾನೆ. ಕೆಟ್ಟದಾಗಿ ಮಾತನಾಡುತ್ತಾನೆ. ಆದಕ್ಕೆ ಗೌಡ ಸಮಾಧಾನವಾಗಿಯೇ ಸಮಸ್ಯೆಯನ್ನು ಪರಿಹರಿಸುತ್ತಾನೆ. ಇದನ್ನೆಲ್ಲ ಮುಗಿಸಿಕೊಂಡು ಮನೆಗೆ ಬಂದ ಗೌಡನಿಗೆ ಆತನ ಹೆಂಡತಿ ಕೋಪಗೊಂಡು ಹೇಳುವ ಮಾತಿಗೆ ಗೌಡ ಕೊಡುವ ಉತ್ತರ ಹೀಗಿದೆ ''ಎಷ್ಟು ಅವನ ಪೊಗರು,' ಗೌಡನ್ನ ಬೈಯೋಕೆ? ಯಾಕೋ ಕತ್ತೆ ಅಂತ ಪಂಪೆಗೆ ಎರಡು ಕೊಡ ಬೇಕಾಗಿತ್ತು, ಎಂದಳು. ಗೌಡನು ನಮ್ಮಾಗ ನನ್ನ ಕೆನ್ನೆಗೆ ಹೊಡೆದಾಂತ ನಾನು ಬದರಿಗೆ ಹೊಡೆದರೆ ಮಾಗ ತಡದಾತ? ಎಂದನು.'' (ಮಾಸ್ತಿ – ಸಣ್ಣ ಕಥೆಗಳು ಸಂ–1–ಪು–131)

ಇಲ್ಲಿ ಗೌಡ ಮುದರಂಗಿ ಊರಿನ ಜನರೆಲ್ಲ ತನ್ನ ಮಕ್ಕಳಂತೆ ಕಾಣುವ ಮನೋಭಾವ, ಚಿನ್ನಪ್ಪ ಬೈದಾಗಲೂ ಆತನ ಮೇಲೆ ಕೋಪಗೊಳ್ಳದ ಉಗ್ರಪ್ಪನಾಗಲೀ, ಶಾನುಭೋಗ ಕೊಡುವ ಕಷ್ಟ ಗೊತ್ತಿದ್ದರೂ ಅನುಕಂಪ, ಕ್ಷಮಾಗುಣದಿಂದ ಒಂದಲ್ಲ ಅನೇಕ ಸಲ ಕ್ಷಮಿಸುವ ಬೈಚೆಗೌಡನಾಗಲೀ ಅಥವಾ ಪರಪುರುಷರನ್ನು ಲೈಂಗಿಕ ಸಂಬಂಧ ಪಡೆದು, ತಪ್ಪನ್ನು ಅರಿತು ಮತ್ತೆ ಗಂಡನಲ್ಲಿಗೆ ಬಂದು ಸೇರುವ ಹೆಂಡತಿಯನ್ನು ಕ್ಷಮಿಸಿ ದೇವರಿಚ್ಛೆ ಎಂದು ಮೊದಲಿನಂತಿರಲು ಬಯಸುವ ವೆಂಕಟಿಗ, ಮುಂತಾದವರಾಗಲೀ ಕೇವಲ ಆದರ್ಶದ ವ್ಯಕ್ತಿಗಳು.

ಮಾಸ್ತಿಯವರ ಕಥೆಗಳಲ್ಲಿನ ಸಮಾಜದಲ್ಲಿ ಸಂಘರ್ಷ ಏರ್ಪಟ್ಟಾಗ : ಸಂಘರ್ಷದ ನೆಲೆಗೆ ಹೋದಾಗ ಯಾವಾಗಲೂ ಒಂದು ಪಾತ್ರ ಊರು ಬಿಡುತ್ತದೆ. ಇಲ್ಲವೆ ಸಾವನಪ್ಪುತ್ತದೆ. ಸಂಘರ್ಷ ಸಂಸಾರದ : ಕುಟುಂಬದ ಸಂಬಂಧದಲ್ಲಿ 'ಏರ್ಪಟ್ಟಾಗ ಗಂಡಾದರೆ ಊರು ಬಿಡುತ್ತಾನೆ. ಹೆಣ್ಣಾದರೆ ಸಾವನ್ನಪ್ಪುತ್ತಾಳೆ. ವೆಂಕಟಿಗನ ಹೆಂಡತಿಯ ವೆಂಕಟಿಗ, ಪಕ್ಷಿಜಾತಿಯ ಮುಂಡ, ಮುನೇಶ್ವರನ ಮರದ ರಾಜಮ್ಮನ ಗಂಡ, ಒಂದು ಕಾಮನ ಹಬ್ಬದ ಸಾವಿತ್ರಮ್ಮನ ಗಂಡ, ಮೇಲೂರಿನ ಲಕ್ಷ್ಮಮ್ಮನ ಗಂಡ ಹೀಗೆ ಅನೇಕರನ್ನು ಗುರುತಿಸಬಹುದು. ವ್ಯಕ್ತಿ ವ್ಯಕ್ತಿಯ ನಡುವೆ ಪ್ರೀತಿ, ಪ್ರೇಮ ವಿಶ್ವಾಸ ತೊರೆದು ಸಂಘರ್ಷದ ಹಂತಕ್ಕೆ ಬಂದರೆ ಒಂದು ವ್ಯಕ್ತಿ ಊರನ್ನು ತೊರೆಯುತ್ತದೆ. ಇಲ್ಲವೆ ಕ್ಷಮಾಗುಣಿಯಾಗಿ, ಹಿರಿಯನಾಗಿ ಸಂಘರ್ಷ ತಪ್ಪಿಸುತ್ತಾನೆ. ಬೈಚೆಗೌಡ ಈ ನೆಲೆಯಲ್ಲಿ ಊರು ಬಿಡುತ್ತಾನೆ. ಕ್ಷಮಿಸುತ್ತಾನೆ. ಉಗ್ರಪ್ಪ ಹಿರಿಯನಾಗಿ ಸಹಿಸಿಕೊಳ್ಳುತ್ತಾನೆ. ಚಿನ್ನಪ್ಪನನ್ನು ಮಗನಂತೆ ಕಾಣುತ್ತಾನೆ.

ಮೇಲು ನೋಟಕ್ಕೆ ಸಮಾಜದ ಎಲ್ಲ ವಲಯಗಳ ಜೀವನ ಇದ್ದ ಹಾಗೆನೇ ವಿವರಿಸುತ್ತೇನೆ ಎಂದು ಒಂದೆಡೆ ಹೇಳುವ ಮಾಸ್ತಿ ಇಂಥ ಕಡೆಗಳಲ್ಲಿ 'ಓದುಗನನ್ನು ಆದರ್ಶ, ಪರಂಪರೆ, ಮಾನವೀಯತೆ ಎನ್ನುವ ಉತ್ತುಂಗದ ದಿಕ್ಕನ್ನು ತೋರಿಸಿ ವಾಸ್ತವದ ಸ್ಥಿತಿ ಮುಚ್ಚಿಡುತ್ತಾರೆ.

ಮೊದಲಿಂದ ಕೊನೆಯವರೆಗೆ ಕಥೆಗಳುದ್ದಕ್ಕೂ (ಕೆಲವು ಕಥೆಗಳನ್ನು ಬಿಟ್ಟು) ಭಾರತೀಯ ಸಮಾಜದ ಜನಜೀವನದ ಚಿತ್ರಣವಿದೆ. ಈ ಸಮಾಜದಲ್ಲಿ, (ಜನರ ಮನದಲ್ಲಿ) ನೆಲೆಯೂರಿದ ದೇವರು, ನಂಬಿಕೆ, ಆಚರಣೆಗಳು ಇವುಗಳ ವಿವರಗಳೂ ಕಂಡುಬರುತ್ತವೆ. ಸಾಮಾನ್ಯ ಜನರಿಂದ ಹಿಡಿದು ತಾನು ಕಂಡ ತಿಳಿದ ಪಾಶ್ಚಿಮಾತ್ಯ ಜನರ ಜೀವನದವರೆಗೆ ಅವರ ಜೀವನದ ಎಲ್ಲ ಹಂತಗಳಲ್ಲೂ ಸೂಕ್ಷ್ಮವಾದ ಒಳನೋಟಗಳನ್ನು ಕೊಡುತ್ತಾರೆ. ಮುಂಡ, ವೆಂಕಟಿಗ, ವೆಂಕಟಸ್ವಾಮಿಯಂಥ ನೂರಾರು ಸಾಮಾನ್ಯ ಜನರ ಜೀವನದಿಂದ ಶಾಮಣ್ಣ, ಘುರುಕರವ, ಎಮಿಲಿ, ಪಾದ್ರಿಯವರಂಥ ಸಾಹುಕಾರ, ಮುಂದುವರಿದ ಜನರವರೆಗಿನ ಅವರ ಬದುಕು, ಜೀವನದ ಶೈಲಿ, ಯೋಚಿಸುವ ವಿಧಾನ ಚಿತ್ರಿಸುತ್ತಾರೆ. ಭಾರತೀಯ ಸಮಾಜದಲ್ಲಿ ಹುಟ್ಟಿದ ಸಾಮಣ್ಣ(ಪುತ್ರ ಕಾಮೇಷ್ಠಿ) ಸಹಜವಾಗಿಯೇ ದೇವರು, ನಂಬಿಕೆ, ಆಚರಣೆಗಳಲ್ಲಿ ವಿಶ್ವಾಸ ಉಳ್ಳವರಾಗಿದ್ದಾರೆ. ಹಾಗೆಯೇ ದೇವರನ್ನು ಮೆಚ್ಚಿಸಿದರೆ, ಸೇವೆ ಸಲ್ಲಿಸಿದರೆ ತಮಗೆ ಒಬ್ಬ ಮಗ ಖಂಡಿತವಾಗಿಯೂ ಜನಿಸುತ್ತಾನೆ ಎಂಬ ನಂಬಿಕೆಯಿಂದಲೇ ಸಂನ್ಯಾಸಿ ಹೇಳಿದಂತೆ ತಮ್ಮ ಚಿಕ್ಕ ವಯಸ್ಸಿನ ಹೆಂಡತಿಯಿಂದ ಪೂಜೆಗೆ ಅಣಿಗೊಳಿಸುತ್ತಾರೆ. ರಂಗನಹಳ್ಳಿಯ ಪಕ್ಕದಲ್ಲಿದ್ದ ರಂಗನಾಥ ದೇವಾಲಯದ ಹಿಂದಿನ ಗುಡ್ಡದ ಮೇಲೆ ಯಾರೂ ಹತ್ತಬಾರದು, ಹತ್ತಿದರೆ ಕಾರವ ಸರಕಕ್ಕೆ ಹೋಗುತ್ತಾರೆ; ಎನ್ನುವ ರಂಗನಹಳ್ಳಿಯ ಪೂಜಾರಿ ಮಾತು ಊರಿನ ಹಿರಿಯರ

ನಂಬಿಕೆ ಭಾರತೀಯ ಸಂಪ್ರದಾಯಗಳು ಹೇಗೆ ಕೆಲಸ ಮಾಡುತ್ತಿವೆ ಎನ್ನುವುದಕ್ಕೆ ಸಾಂಕೇತಿಕವಾಗಿ ತರುತ್ತಾರೆ. ಭಾರತೀಯ ಸಂಪ್ರದಾಯ ಮೌಲ್ಯಗಳು ಮೌಲ್ಯಾಧಾರಿತವಾದುವುಗಳೇ ಆಗಿವೆ. ಆದರೆ ಇಂದಿನ ದಿನಗಳಲ್ಲಿ ಅದರ ಅರ್ಥ ತಿಳಿಯದೇ ಕೇವಲ ಆಚರಣೆಯಾಗಿ ಉಳಿಸಿಕೊಂಡು ಬರುತ್ತಿದ್ದೇವೆ. ಅದನ್ನು ಒರೆಗಲ್ಲಿಗೆ ಹಚ್ಚಿ ನೋಡಿದರೆ ಅವುಗಳ ಮೌಲ್ಯ ತಿಳಿಯುತ್ತದೆ ಎನ್ನುವ ಧಾಟಿಯದು.

ಭಾರತೀಯ:ಕರ್ನಾಟಕದ ಸಂಪ್ರದಾಯ ಮೌಲ್ಯಗಳನ್ನು ಎತ್ತಿ ಹಿಡಿಯುವುದಷ್ಟೇ ಅಲ್ಲದೆ ಅದರಲ್ಲಿ ಇರುವ ದೋಷಗಳನ್ನು ಮುಚ್ಚಿ ಬಿಡುವುದಿಲ್ಲ. ಅವುಗಳನ್ನು ಕೂಡ ಎತ್ತಿ ತೋರಿಸುತ್ತಾರೆ. 'ಪುತ್ರ ಕಾಮೇಷ್ಟಿ' ಕಥೆಯ ಸಂನ್ಯಾಸಿಯ ಪೊಳ್ಳುತನ ಬಯಲಿಗೆಳೆಯುತ್ತಾರೆ. ಆತನಿಗೆ ಪೋಲೀಸರು ಬಂಧಿಸಿರುವ, ಜೈಲಿಗೆ ಹಾಕಿರುವ ವಿಷಯ ತಿಳಿಸುತ್ತಾರೆ. ಸಂನ್ಯಾಸಿ ಅಲ್ಲದ ಸಂನ್ಯಾಸಿ ಕಥೆಯಲ್ಲಿನ ನರಸಿಂಹಯ್ಯನ ಸಂನ್ಯಾಸತ್ವಕ್ಕಿಂತ ಸರಿಯಾದ ಸಂಸಾರಿಕನಾಗುವುದೆ ಹೆಚ್ಚು ಉತ್ತಮ. ಸಂನ್ಯಾಸಿ ಆಗಿ ಪಡೆಯುವ ಮುಕ್ತಿ ಸಂಸಾರದಲ್ಲಿದ್ದೇ ಪಡೆಯಬಹುದು ಎನ್ನುವುದನ್ನು ಹೇಳುತ್ತಾರೆ. ಮಾಸ್ತಿಯವರು ಸಮಾಜದ ಬಗೆಗೆ ಕಂಡ ಕನಸು 'ಮಂಗಳೋದಯ' ಕಥೆಯ ವಾಮದೇವ ಮಹರ್ಷಿಯಿಂದ ಹೀಗೆ ಹೇಳಿಸುತ್ತಾರೆ. ''ನೆಲವೆಲ್ಲ ಇಂಥ ನಂದನವನ ಆಗಬೇಕು, ಇದರಂತೆ ಒಳಬಾಳು ಸುಂದರ ಸಫಲ ಆಗಬೇಕು'' (ಸಣ್ಣ ಕಥೆಗಳು – ಸಂ – 4 – ಪು – 165)

ಕಥೆಗಳಲ್ಲಿ ಮೇಲುವರ್ಗ ಕೆಳವರ್ಗ, ಬಡವ, ಶ್ರೀಮಂತ, ವೈದಿಕ, ಬ್ರಾಹ್ಮಣ, ದಲಿತ, ಅಧಿಕಾರಿ ಜನರ ಪಾತ್ರಗಳು ಮತ್ತು ಆಟಗಳು, ಆಚರಣೆಗಳು, ನಂಬಿಕೆಗಳು (ಕೋಲಾಟ, ಬಯಲಾಟ, ಹಾಡು, ಕುಣಿತ ಇತ್ಯಾದಿ) ನಮ್ಮ ಸಮಾಜದ ಜನಜೀವನದಲ್ಲಿ ತಳುಕು ಹಾಕಿಕೊಂಡ ಎಲ್ಲ ವಿವರಗಳನ್ನು ಬಿಚ್ಚಿಡುತ್ತಾ ಹೋಗುತ್ತಾರೆ. ಹಳ್ಳಿ, ನಗರ, ಕೆಳಗಿನವರು, ಮೇಲಿನವರು, ಅಲ್ಲಿನ ಆಡಳಿತ, ಭಾಷೆ ಇವುಗಳ ವೈವಿಧ್ಯತೆ ಕಂಡು ಬರಲು ಮಾಸ್ತಿಯವರ ಅಪಾರವಾದ ಅನುಭವವೇ ಕಾರಣ. ಏಕೆಂದರೆ ಮಾಸ್ತಿಯವರು ಅಧಿಕಾರಿಯಾಗಿ, ಸರಕಾರಿ ಮೇಲಾಧಿಕಾರಿಯಾಗಿ ಅನೇಕ ಊರುಗಳನ್ನು ಸುತ್ತಿ ಅಲ್ಲಿನ ಜನರ ಜನಜೀವನದ ಜೊತೆಗೆ ಒಡನಾಟ ನಡೆಸಿದವರು. ನೂರಾರು ರೀತಿಯ ಜನರೊಂದಿಗೆ ಬೆರೆತು ಜೀವ ಸವೆಸಿದವರು. ಆದ್ದರಿಂದ ತಾವು ಕಂಡ ಎಲ್ಲ ಬಗೆಯ ಜನರ ಜೀವನದ ಪ್ರತಿ ಹಂತ ಹಂತದ ಸೂಕ್ಷ್ಮಗಳು ಅರಿತವರು. ಆ ಕಾರಣದಿಂದಲೇ ಮಾಸ್ತಿ ಮನುಷ್ಯನ ಅಂತರಾಳಕ್ಕೆ ಇಳಿದು ಪಾತ್ರದ ಮನಸ್ಸನ್ನು ಚಿತ್ರಿಸಲು ಸಾಧ್ಯ. ಅಂಥ ಅನುಭವಗಳನ್ನು ತಮ್ಮ ಕಥೆಗಳುದ್ದಕ್ಕೂ ತುಂಬುತ್ತ ಅವುಗಳಿಗೆ ಜೀವಂತಿಕೆ ಕೊಟ್ಟಿದ್ದಾರೆ.

'ಉಗ್ರಪ್ಪನ ಉಗಾದಿ' ಕಥೆಯ ಮುದರಂಗಿ ನಾರಿನ ಜೀವನ ಆಗಲೀ 'ದೈಟೆಗಾಡ' ಕಥೆಯ ನಾಸುಭೋಗ ಅಲ್ಲಿನ ಜನರ ಜೀವನವಾಗಲೀ ಅಥವಾ ಮೊಸರಿನ ಮಂಗಮ್ಮನಂಥವರಾಗಲೀ, ನಳಿನಿಯ ಶಾಂತಿಯಂತಯಂಥವರಾಗಲೀ ಕೇವಲ ಪಾತ್ರಗಳಾಗಿ, ಘಟನೆಗಳಾಗಿ ಬರುವುದಿಲ್ಲ. ಮಾಸ್ತಿಯವರೇ ಹೇಳುವ ಹಾಗೆ ತಾವು ಕಂಡ ಲೋಕದ ನಿಜವಾದ ಪಾತ್ರಗಳು. ಅವರ ಬದುಕು, ಜೀವನ, ಯೋಚನೆ, ಆಟ – ಪಾಟ ಪೂಜೆ – ಪುನಸ್ಕಾರ ನಂಬಿಕೆ ಎಲ್ಲಾ ಮಾಸ್ತಿ ಕಂಡ ಸಮಾಜದ ವಿವರಗಳೆ., ಭಾರತೀಯ ಸಮಾಜದ್ದು.

ಕಥೆಗಾರರು ಕಂಡ ಭಾರತೀಯ ಸಮಾಜದಲ್ಲಿ ಬದುಕಿದ ಧರ್ಮಗಳ ಪಾತ್ರ ಕೂಡ ಬಹಳ ವಿಶಿಷ್ಟವಾದುದು. ಈಗಲೂ ಭಾರತದಲ್ಲಿ ಕ್ರೈಸ್ತ, ಮುಸ್ಲಿಂ, ಬೌದ್ಧ, ಜೈನ ಧರ್ಮದ ಜನರು ಹಿಂದೂ ಧರ್ಮದೊಂದಿಗೆ ಬೆರೆತು, ಕಲೆತು (ಕೆಲವೊಮ್ಮೆ ಜಗಳ ಆಡಿ) ಜೀವನ ನಡೆಸುತ್ತಿದ್ದಾರೆ. ಇದು ಮನುಷ್ಯ ಸಮಾಜ ಇರುವೆಡೆಯಲ್ಲೆಲ್ಲ ಸಹಜವಾದದ್ದು. ಕಥೆಗಾರರು ಅದನ್ನು ಚನ್ನಾಗಿ ಅರಿತುಕೊಂಡಿದ್ದರು. ಅದರ ಅನೇಕ ಸೂಕ್ಷ್ಮ ವಿವರಗಳು ಸಹ ಕಥೆಗಳಲ್ಲಿ ದೊರೆಯುತ್ತ ಹೋಗುತ್ತವೆ. ಧರ್ಮಗಳ ಬಗೆಗೆ ಪ್ರತ್ಯೇಕ ಚರ್ಚೆ ಇರುವುದರಿಂದ ಅದರ ವಿವರವಾದ ಚರ್ಚೆ ಇಲ್ಲಿ ಮಾಡಿಲ್ಲ. ನಾವು ಬದುಕಿರುವ, ಬದುಕುತ್ತಿರುವ, ಬದುಕಬಹುದಾದ ಸಮಾಜದ ವಿವರಗಳು, ಆಶಯ ಕಥೆಗಳಲ್ಲಿವೆ. ಅಂಥ ಸಮಾಜದ ಕಲ್ಪನೆ ಕಥೆಗಳಲ್ಲಿ ಹೇಗೆ ಕಲಾತ್ಮಕವಾಗಿ ತರುತ್ತಾರೆ ಎನ್ನುವುದನ್ನು ಮಾತ್ರ ಇಲ್ಲಿ ಚರ್ಚಿಸಿದ್ದೇನೆ.

ಅಧ್ಯಾಯ : 3

ನಂಬಿಕೆ — ದೈವ — ಆಚರಣೆಗಳು

ನಂಬಿಕೆ ದೈವ ಆಚರಣೆಗಳು

ಮಾಸ್ತಿಯವರಿಂದ ಮಹಾದೇವರವರೆಗೆ ಕಥೆಯ ವಸ್ತು, ತಂತ್ರ, ಶೈಲಿ, ಭಾಷೆ ಹೀಗೆ ಹಲವಾರು ರೀತಿಯಲ್ಲಿ ಅನೇಕ ಬದಲಾವಣೆಗಳಾದರೂ ಮಾಸ್ತಿ ಕಥೆಗಳು ಈಗಲೂ ಹೆಚ್ಚು ಪ್ರಿಯವಾಗುವುದು, ಕಥೆಗಳು ಸಂಕೀರ್ಣವಾಗಿರದೇ ಸರಳವಾಗಿದ್ದು ಜೀವನದ ಇಕ್ಕಟ್ಟಿನ ಸಂದರ್ಭವನ್ನು ನೇರವಾಗಿ ಹೇಳುವುದರಿಂದ ಮತ್ತು 'ಓದುಗನಿಗೆ ಮೊದಲ 'ಓದಿನಲ್ಲೇ ಭಾವನಾತ್ಮಕವಾಗಿ ತಟ್ಟುವುದರಿಂದ. ಈ ಹಿನ್ನೆಲೆಯಲ್ಲಿ ಮಾಸ್ತಿಯವರು ತಮ್ಮ ಕಥೆಗಳಲ್ಲಿ ತಾನ್ ನಂಬಿದ ಭಾರತೀಯ ಸಂಪ್ರದಾಯ ಮೌಲ್ಯಗಳಲ್ಲಿನ ನಂಬಿಕೆಗಳು, ದೈವತ್ವ ಮತ್ತು ಭಾರತೀಯರಲ್ಲಿ ಈಗಲೂ ರಕ್ತಗತವಾದ ಅನೇಕ ಆಚರಣೆಗಳನ್ನು ಹೇಗೆ ತರುತ್ತಾರೆ ಎನ್ನುವುದನ್ನು ಚರ್ಚಿಸುವುದು ಇಲ್ಲಿನ ಮುಖ್ಯ ಉದ್ದೇಶ.

ಮಾಸ್ತಿಯವರ ಕಥೆಗಳುದ್ದಕ್ಕೂ ವಿಧಿಯ, ದೈವತ್ವದ ತಾನ್ ನಂಬಿದ ಮೌಲ್ಯಗಳ ಕಲ್ಪನೆ ಶಿಖರಕ್ಕೇರುತ್ತ ಹೋಗುತ್ತದೆ. ಮಾಸ್ತಿಯವರೇ ನೀಡಿದ ಒಂದು ಸಂದರ್ಶನದಲ್ಲಿ ಸ್ವತ: ಅವರೇ ತಮ್ಮ ಕಥೆಗಳ ಬಗೆಗೆ ಹೀಗೆ ಹೇಳುತ್ತಾರೆ. ''ಈ ಬದುಕಿನಲ್ಲಿ ಯಾವುದೂ ಆಕಸ್ಮಿಕವಲ್ಲ. ಪ್ರತಿಯೊಂದರ ಹಿಂದೆ ವಿಧಿಯ ಕೈವಾಡವಿದೆ. ನಮ್ಮ ಜೀವನ ಪ್ರತಿ ಗಳಿಗೆಯಲೂ ನಮ್ಮನ್ನು ಕಾಯುವ ಒಂದು ಶಕ್ತಿ ಇದೆ'' (ಎಲ್.ಎಸ್.ಶೇಷಗಿರಿರಾವ್ — ಮಾಸ್ತಿ ಸಂದರ್ಶನಗಳು—ಪು — 72). ಈ ತತ್ವ ಮಾಸ್ತಿಯವರ ಹೆಚ್ಚು ಕಥೆಗಳ ಮುಖ್ಯ ಕೇಂದ್ರ. ಇದಕ್ಕೆ ಇನ್ನೂ ಸ್ಪಷ್ಟವಾದ ಉದಾಹರಣೆ ಕೊಡಬೇಕೆಂದರೆ ಮಾಸ್ತಿಯವರ ದೈವತ್ವದ ಬಗೆಗಿನ ಒಂದೆರಡು ಘಟನೆಗಳನ್ನು ಗಮನಿಸಬಹುದು. ಏಕೆಂದರೆ ಅದೇ ಮನಸ್ಸು ಅವರ ಅನೇಕ ಕಥೆಗಳಲ್ಲಿ ಇಂಥ ನಂಬಿಕೆ, ದೈವ, ಆಚರಣೆಗಳಿಂದ ಕಥೆಗಳಿಗೆ ಜೀವ ತುಂಬುವ ಕೆಲಸ ಮಾಡುತ್ತವೆ.

ಘಟನೆ — 1:— ಒಂದು ಸಾರಿ ಮಾಸ್ತಿ, ಮತ್ತು ಅವರ ಸಂಬಂಧಿಯಾದ ರಂಗಣ್ಣ ಎನ್ನುವವರು ಇಬ್ಬರೂ ಮಾಸ್ತಿಹಳ್ಳಿಯ ಬಳಿ ಇರುವ ಬಾಳೆಗಾನಹಳ್ಳಿಗೆ ಮದುವೆಯೊಂದಕ್ಕೆ ಹೋಗಿದ್ದರು. ರಾತ್ರಿ ತಡವಾದ ವೇಳೆ ಜಲಶಂಕೆಗಾಗಿ (ಮಲ ಮೂತ್ರ ವಿಸರ್ಜನೆ) ಮಾಸ್ತಿ 'ಬೀಂಯೊಂದರ ಮೂಲಕ ಬಯಲಿಗೆ ಹೊರಟರು. ಇವರ ಜೊತೆಗೆ ರಂಗಣ್ಣನವರೂ

ಬಂದರು. ಊರು ದಾಟಿ ಬಯಲಿನಲ್ಲಿ ಹೊಲದ ಮಧ್ಯ ನಾಲ್ಕು ಹೆಜ್ಜೆ ಹೋದರು ಮಾಸ್ತಿ. ಇನ್ನೂ ಮುಂದೆ ಹೋಗುತ್ತಿದ್ದ ಮಾಸ್ತಿಯವರನ್ನು ತಡೆದ ರಂಗಣ್ಣನವರು ಕತ್ತಲಲ್ಲಿ ಎಷ್ಟು ದೂರ ಹೋಗುತ್ತೀಯಾ? ಅಲ್ಲೇ ಕುಳಿತುಕೋ ಎಂದು ಹೇಳಿದರು. ಮಾಸ್ತಿ ಅಲ್ಲೇ ಕುಳಿತು ಜಲಶಂಕೆ ತೀರಿಸಿಕೊಂಡು ಮನೆಗೆ ಬಂದರು. ಬೆಳಗ್ಗೆ ಅದೇ 'ಓಣಿಯ ಮೂಲಕ ಇಬ್ಬರೂ ಕೆರೆಯ ಕಡೆಗೆ ನಡೆದರು. ರಾತ್ರಿ ಮಾಸ್ತಿ ಕೂತಿರುವ ಕಡೆ ಕೇವಲ ಒಂದೆರಡು ಹೆಜ್ಜೆಯ ಹಿಂದೆ ಆಳವಾದ ಹಾಳು ಬಾವಿ ಇದೆ. ರಾತ್ರಿ ರಂಗಪ್ಪನವರು ತಡೆಯದಿದ್ದರೆ ಮಾಸ್ತಿ ಕಥೆ ಮುಗಿಯುತ್ತಿತ್ತು. ರಂಗಪ್ಪನವರಿಗೆ ಗೊತ್ತಿತ್ತೆ? ಇಲ್ಲ. ಹಾಗಾದರೆ ನನ್ನನ್ನು ಉಳಿಸಿದ್ದು 'ಏನು ? ದೈವ ತಾನೆ ಎನ್ನುತ್ತಾರೆ.

ಘಟನೆ – 2:– ಮಾಸ್ತಿಯವರು ಲೋಯರ್ ಸೆಕಂಡರಿ ಪರೀಕ್ಷೆಗೆಂದು ಮೈಸೂರಿಗೆ ಬಂದಾಗ ಒಂದು ಘಟನೆ ನಡೆಯಿತು. ಅಲ್ಲಿ ಇಲ್ಲಿ ಸುತ್ತುತ್ತ ದೊಡ್ಡ ಮಾರ್ಕೆಟ್ ಬಳಿ ಬಂದ ಮಾಸ್ತಿಯವರಿಗೆ ಮಾರುಕಟ್ಟೆ ಬಳಿ ಕಂಬದ ಮೇಲಿನ ದೊಡ್ಡ ಗಡಿಯಾರ ಕಣ್ಣಿಗೆ ಬಿತ್ತು. ಇನ್ನೇನು ಹತ್ತು ಗಂಟೆಯ ಸಮಯ. ಅಂದೇ ಪರೀಕ್ಷೆಯ ಆರಂಭದ ದಿನ ಎಂದು ತಿಳಿಯಿತು. ಮನೆಗೆ 'ಓಡಿ ಹೋಗಿ ಪ್ರವೇಶ ಪತ್ರ ತೆಗೆದುಕೊಂಡು ಮಹಾರಾಜ ಕಾಲೇಜಿಗೆ 'ಓಡಿ ಸಕಾಲದಲ್ಲಿ ಪರೀಕ್ಷೆಗೆ ಹಾಜರಾದರು. ಐದು ನಿಮಿಷ ಸುಧಾರಿಸಿಕೊಂಡು ಉತ್ತರ ಬರೆದು ಬಂದರು. ಅಕಸ್ಮಾತ್ ಈ ಗಡಿಯಾರ ಕಣ್ಣಿಗೆ ಬೀಳದಿದ್ದರೆ ಆ ದಿನ ನಾನು ಪರೀಕ್ಷೆಗೆ ಹೋಗಲು ಆಗುತ್ತಿರಲಿಲ್ಲ. ಈ ನಿಷ್ಕಾರಣ ದೈವ ವ್ಯಾಪಾರ ಇಲ್ಲದಿದ್ದರೆ ನನ್ನ ಜೀವನ 'ಏನಾಗುತ್ತಿತ್ತೋ ಹೇಳುವಂತಿಲ್ಲ ಎನ್ನುತ್ತಾರೆ ಮಾಸ್ತಿ.

ಈ ರೀತಿಯ ದೈವತ್ವದ ಕಲ್ಪನೆ ಕುರಿತು ಮಾಸ್ತಿ ತಮ್ಮ ಆತ್ಮಕಥನವಾದ 'ಭಾವ' ದಲ್ಲಿ ಅನೇಕ ಸಲ ಪ್ರಸ್ತಾಪಿಸುತ್ತಾರೆ. ತನ್ನ ಜೀವನದ ಪ್ರತಿ ಗಳಿಗೆಯೂ ದೈವತ್ವ ಕೆಲಸ ಮಾಡುತ್ತದೆ ಎನ್ನುವ ಮಾಸ್ತಿ ಪ್ರತಿ ಮನುಷ್ಯನ ಜೀವನದ ಕ್ಷಣ ಕ್ಷಣ ಕೂಡ ದೈವತ್ವದ ಕೈಯಲ್ಲಿರಿಸುತ್ತಾರೆ.

'ಈ ಮೇಲಿನ ಘಟನೆಗಳಿಂದ ಒದಗಬಹುದಾದ ಅಪಾಯವನ್ನು ತಪ್ಪಿಸಿದ್ದು ವಿಧಿರೂಪದ ಶಕ್ತಿಯೇ ಹೊರತು ಬೇರಾರೂ ಅಲ್ಲ ಎಂದೇ ನಂಬುತ್ತಾರೆ ಮಾಸ್ತಿ. ದೈವತ್ವ, ನಂಬಿಕೆಗಳ ಕುರಿತು ಮಾಸ್ತಿ ಮನಸ್ಸು (ಕಥೆಗಾರರ ಮನಸ್ಸು) ಹೇಗೆ ಕೆಲಸ ಮಾಡುತ್ತದೆ ಎನ್ನುವುದನ್ನು ತಿ.ತಾ. ಶರ್ಮರು ಮಾಸ್ತಿ ಬಗ್ಗೆ '' ನಿಮಿತ್ತ ಮಾತ್ರಂ ಭವ ಸವ್ಯಸಾಚಿ'' ಎಂದು ನಂಬಿದವರು ಎನ್ನುತ್ತಾರೆ . (ತಿ.ತಾ.ಶರ್ಮ – ಸಂ.ಹೆಚ್.ಕೆ.ರಂಗನಾಥ್ – ಶ್ರೀನಿವಾಸ – ಪು –19) ಮಾಸ್ತಿಯವರ ಈ ಮನಸ್ಸು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಕೆಲಸಾದೆಮ್ಮ

ಪ್ರಜ್ಞಾಪೂರ್ವಕವಾಗಿ ಕೆಲವೊಮ್ಮೆ ಅಪ್ರಜ್ಞಾಪೂರ್ವಕವಾಗಿ ಇತರ ಎಲ್ಲ ಕಥೆಗಳಲ್ಲೂ ಹರಡಿದೆ.

ಅಷ್ಟೇ ಅಲ್ಲದೆ ಮನುಷ್ಯನ 'ಏಳು ಬೀಳುಗಳಿಗೆ ತಾನೇ ಕಾರಣ ಎನ್ನುವ ಮಾಸ್ತಿಯವರು ಮನುಷ್ಯನ ನಸೀಬನ್ನು ವಿಧಿಯಾಟ, ದೈವತ್ವಗಳ ಭಯ – ಅಭಯಗಳ ಮೂಲಕ ನೈತಿಕಕಾರಣವಾಗಿಸುತ್ತಾರೆ. ಉದಾಹರಣೆಗೆ ' ವೆಂಕಟಿಗನ ಹೆಂಡತಿ' ಕಥೆಯಲ್ಲಿ ವೆಂಕಟಿಗ ಹೇಳುವ ಮಾತುಗಳು ಆತನ ದೌರ್ಬಲ್ಯವಾಗದೇ ತನ್ನ ಬದುಕನ್ನು ಬೆಳೆಸುವುದೇ ಆಗುತ್ತದೆ. ಹಾಗೆಯೆ ' ಪಕ್ಷಿ ಜಾತಿ' ಕಥೆಯು ಮಂಚನನ್ನು ದೊಡ್ಡಸ್ತಿಕೆಗೆ 'ಏರಿಸುತ್ತಾರೆ. ನಿರೂಪಕ ಅಕಸ್ಮಾತ್ ವೆಂಕಟಿಗನನ್ನು ಕಂಡಾಗ '' ಪಾಪ ನಿನಗೆ ಚಿಕ್ಕ ವಯಸ್ಸಿನಲ್ಲಿ ಇಂಥ ಕಷ್ಟ ಬಂತಲ್ಲಪ್ಪ'' ಎಂದಿದ್ದಕ್ಕೆ ವೆಂಕಟಿಗ ಹೇಳುವ ಮಾತು '' ಬೆಟ್ಟದ ದೇವರ ಇಷ್ಟ ಸ್ವಾಮಿ. ಅವನು ಬಡಿಸಿದ್ದನ್ನು ಉಣ್ಣಬೇಕು '' ಅನ್ನುತ್ತಾನೆ. ಸಾಹುಕಾರನಿಂದ ಒಂದು ಮಗು ಪಡೆದು ವೆಂಕಟಿಗನ ಹೆಂಡತಿ ಮತ್ತೆ ವೆಂಕಟಿಗನಲ್ಲಿಗೆ ಬಂದಾಗ ಅದೂ ಸಹ ದೇವರ ಚಿತ್ತ ಎಂದು ಒಪ್ಪಿಕೊಳ್ಳುತ್ತಾನೆ ನಿಜ. ಆದರೆ ನಂಬಿಕೆ, ನೈತಿಕತೆ ಎಲ್ಲವೂ ಕೊನೆಗೆ ವೆಂಕಟಿಗನೇ ಆಗಿದ್ದಾನೆ.

' ಸಾರಿಪುತ್ರನ ಕೊನೆಯ ದಿನಗಳು' ಕಥೆಯು ಸಾರಿಪುತ್ರ, ಬೌದ್ಧ ಭಿಕ್ಷು – ಗುರುವನ್ನು ಕೇಳುವ ಪ್ರಶ್ನೆ ಕೂಡ ಈ ಹಿನ್ನೆಲೆಯಲ್ಲೇ ಚರ್ಚಿಸಬಹುದು.

ಸಾರಿಪುತ್ರ: '' ನಾನ್ ದೇವರ ಒಂಬತ್ತನೆಯ ಅವತಾರವೇ ತಿಳಿಸಬೇಕೆಂ'' ಎಂದನು '' ನೀನು ಬ್ರಾಹ್ಮಣ ಕುಲದಲ್ಲಿ ಜನಿಸಿದವನು. ನಿನಗೆ ಇನ್ನೂ ಈ ರೀತಿಯ ನಂಬುಗೆ ಹೋಗಲಿಲ್ಲ.''

'' ಮೊದಲು ಸ್ವಲ್ಪ ಅಸ್ಥಿರವಾಗಿತ್ತು. ನಿಮ್ಮನ್ನು ನೋಡಿದ ಮೇಲೆ ಸ್ಥಿರವಾಗುತ್ತ ಬಂದಿದೆ''

'' ದೇವರು ಎನ್ನದಿದ್ದರೆ ನಿನಗೆ ತೃಪ್ತಿಯಿಲ್ಲವೋ? ''

'' ಇಲ್ಲ. ''

'' ಹಾಗಾದರೆ ನಿನಗೊಬ್ಬ ದೇವರು ಬೇಕು''.

'' ಹೌದು. ''

'' ನನ್ನನ್ನು ದೇವರೆಂದು ಪೂಜಿಸುವುದು ಸಾಧ್ಯವೋ ? ''

'' ಸಾಧ್ಯ. ''

'' ಹಾಗಾದರೆ ಪೂಜಿಸು. ''

ಸಾರಿಪುತ್ರನು '' ನಾನು ಧನ್ಯ'' ಎಂದು ಅವನಿಗೆ ನಮಸ್ಕರಿಸಿದನು. (ಮಾಸ್ತಿ – ಸಣ್ಣ ಕಥೆಗಳು – ಸಂಪುಟ 7 ಪು –58)

ಈ ಪ್ರಸಂಗ ಸಂಪೂರ್ಣವಾಗಿ ಪರಂಪರಾಗತ ಭಾರತೀಯ ನಂಬಿಕೆಯ ನೆಲೆಯದು.

ಸಾರಿಪುತ್ರ ತನ್ನನ್ನು ಬೌದ್ಧಭಿಕ್ಷುವಾಗಿ ರೂಪಗಿಸಿಕೊಂಡರೂ ತನ್ನ ಮನೋಗತ ಸಮೂಧಾನವಾದ ಪಾರಂಪರಿಕ ನಂಬಿಕೆಗಳನ್ನು ಕಳೆದುಕೊಳ್ಳುವುದಿಲ್ಲ. ಅದು ಚನ್ನಾಗಿ ಇಲ್ಲಿ ನಿರೂಪಿತವಾಗುತ್ತದೆ.

ಹಾಗೆಯೇ 'ಗುಡ್ಡದ ದೇವರು' ಕಥೆಯಲ್ಲಿ ಕೂಡ ದೇವರ ಬಗೆಗಿನ ನಂಬಿಕ ಉಳಿಸಿಕೊಂಡ ಮನಸ್ಸುಗಳು ಕಾಣುತ್ತೇವೆ. ಹಿರಿಯರು ಒಪ್ಪಿಕೊಂಡ ರೀತಿ, ನೀತಿಗಳ ಮನಸ್ಸನ್ನು ಈ ಕೆಳಗಿನ ಮಾತುಗಳು ವ್ಯಕ್ತಪಡಿಸುತ್ತವೆ. ನಿರೂಪಕ ದಾರಿಯಲ್ಲಿ ನಡೆಯುತ್ತಿದ್ದಾಗ ಗಾಜಿನ ಚೂರನ್ನು ಕಂಡು ಅದನ್ನು ಎತ್ತಿ ದಾರಿಯಿಂದ ದೂರಕ್ಕೆ ಹಾಕುವುದನ್ನು ಕಂಡ ಮುದುಕಿ ಹೇಳುವ ಮಾತುಗಳು: ''ಏನು ಸ್ವಾಮಿ ಎತ್ತಿದ್ದು ಗಾಜಿನ ಚೂರಾ? ನಾನು ಹಿಂತಿರುಗಿ ನೋಡಿ ಹೌದು ತಾಯಿ ಎಂದೆ. ಆಕೆ, ನೀವು ಪುಣ್ಯಾತ್ಮರು. ನಮ್ಮ ಹಿರೇರು ಹೀಗೆ ಬಾಳಿದರು. ಈಗ ಹೇಳೋ ಹಿರೇರಿಲ್ಲ. ಕೇಳೋ ಕಿರೇರಿಲ್ಲ'' ಎನ್ನುವ ಇಲ್ಲಿನ ಮುದುಕಿಯ ಮಾತಿನ ಧಾಟಿ ಒಂದೆಡೆ ಬದಲಾಗುತ್ತಿರುವ ಜೀವನ ಕ್ರಮ, ಸ್ವಾರ್ಥವನ್ನು ವಿರೋಧಿಸುವುದು, ಅದಕ್ಕಿಂತ ಹೆಚ್ಚಾಗಿ ತಮ್ಮ ಹಿರಿಯರು ನಂಬಿದ ನಂಬಿಕೆಗಳ ಮೂಲಕ ಮಾನವೀಯತೆಯನ್ನು ಪ್ರಕಟಗೊಳಿಸುತ್ತದೆ. ಬದುಕನ್ನು ಸಮಾಧಾನದಿಂದ ಕಾಣುವ ಇಂಥ ನಂಬಿಕೆಗಳಲ್ಲೇ ಮಾಸ್ತಿಯವರಿಗೆ ಹೆಚ್ಚು ಆಸಕ್ತಿ ಇರುವುದನ್ನು ಅವರ ಕಥೆಗಳು ವ್ಯಕ್ತಪಡಿಸುತ್ತವೆ.

ನಂಬಿಕೆ, ದೈವ, ಆಚಾರಗಳು ಮೂರೂ ಒಂದಕ್ಕೊಂದು ಹೆಣೆದುಕೊಂಡು ಒಂದು ಮತ್ತೊಂದನ್ನು ಅವಲಂಬಿಸಿಯೇ ಇರುತ್ತವೆ. ನಮ್ಮ ಜನರಲ್ಲಿ ಗಟ್ಟಿಯಾಗಿ ನಿಂತಿರುವ ದೈವ ಕಲ್ಪನೆ ಅದರ ಬಗೆಗಿನ ನಂಬಿಕೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಈಗಲೂ ರೂಢಿಯಲ್ಲಿರುವ ಆಚರಣೆಗಳು ಮಾಸ್ತಿಯವರ ಕಥೆಗಳುದ್ದಕ್ಕೂ ಬರುತ್ತವೆ. ಇಲ್ಲಿ ಸಾಂಪ್ರದಾಯಿಕ ಮೌಲ್ಯಗಳಲ್ಲೇ ಒಂದು ಬಗೆಯ ವೈಚಾರಿಕತೆಯನ್ನು ನಮ್ಮ ಸಮಾಜದ ಏಳಿಗೆಗೆ ಮತ್ತು ಅದರ ನೆಮ್ಮದಿಯನ್ನು ಕಥೆಗಾರರು ಕಂಡುಕೊಳ್ಳುತ್ತಾರೆ. ಹಾಗೆಂದ ಮಾತ್ರಕ್ಕೆ ಸಾರಾಸಗಟಾಗಿ ಎಲ್ಲವನ್ನು ಒಪ್ಪಿಕೊಳ್ಳುವುದಿಲ್ಲ. 'ನಳಿನಿಯ ತಂದೆ' ಕಥೆಯ ನಳಿನಿಯ ತಾಯಿ ತನ್ನ ಗಂಡನನ್ನು ದೂರ ಇಡುವುದು, 'ದುರದೃಷ್ಟದ ಹೆಣ್ಣು' ಕಥೆಯ ಹೆಣ್ಣು(ತರುಣಿ) ನಪುಂಸಕ ಗಂಡನಿಂದ ದೂರ ಸರಿಯಲು ಪ್ರಯತ್ನಿಸುವುದು, 'ಮಂತ್ರೋದಯ' ಕಥೆಯ ಕಳ್ಳ ಸಂನ್ಯಾಸಿಯನ್ನು ಚಿತ್ರಿಸುವುದು (ಕಳ್ಳ ಸಂನ್ಯಾಸಿ ಜೈಲಿಗೆ ಹೋದದ್ದೂ ಕೂಡ ಹೇಳುತ್ತಾರೆ) ಇಂಥ ವೈಚಾರಿಕ ಮನಸ್ಸೇ.

ನಮ್ಮ ಸಂಸ್ಕೃತಿಯಲ್ಲಿ ಮಿಳಿತವಾಗಿರುವ ಅನೇಕ ಬಗೆಯ ಆಟ, ಹಾಡು, ನೃತ್ಯ, ಊಟದ ವಿವರ ಹೇಗೆ ಮನುಷ್ಯನ ದಿನನಿತ್ಯ ಜೀವನದ ಅನೇಕ ಆಚರಣೆಗಳು ಬದುಕುವ ಕ್ರಮ, ಯೋಚಿಸುವ ವಿಧಾನ ಬಿಂಬಿಸುತ್ತ ಹೋಗುತ್ತಾರೆ. 'ರಂಗನಹಳ್ಳಿ ರಾಮು' ಕಥೆಯಲ್ಲಿ ಹಳ್ಳಿ ಜನರ ಕೋಲಾಟ, ಹಾಡು ಹಾಪಿನ ಮೂಲಕ ಧ್ವನಿಸುವ ಅನೇಕ ವಿವರಗಳನ್ನು ಚಿತ್ರಿಸುತ್ತಾರೆ. ಜಡೆ ನಂಜುಂಡೇಶ್ವರ ಕಥೆಯಲ್ಲಿ ನಮ್ಮ ಪರಂಪರೆ : ಇತಿಹಾಸದಲ್ಲಿ ರಾಜರ ಸಮಕ್ಷಮದಲ್ಲಿ ನಡೆವ ನೃತ್ಯದ ವಿವರಣೆ ಬರುತ್ತದೆ. 'ಕಾಮನ ಹಬ್ಬದ ಒಂದು ಕಥೆ' ಯಲ್ಲಿ ಸಾವಿತ್ರಮ್ಮ ಗಂಡನ ಬರುವಿಗಾಗಿ ನಡೆಸುವ ಕಠಿಣ ವ್ರತ ಆಚರಿಸುತ್ತಾಳೆ. (ಹೋಳಿ ಹುಣ್ಣಿಮೆ ದಿವಸ ಹುಡುಗರಿಂದ ಬೂದಿ ಎರಚಿಸಿಕೊಂಡರೆ ಹೋದ ಗಂಡ ಮರಳಿ ಬರುತ್ತಾನೆ ಎಂಬ ನಂಬಿಕೆ). 'ಕಲ್ಲು ಕೋಳಿ' ಕಥೆಯಲ್ಲಿ ಈಗಲೂ ಕೇಳುವ ಕೋಣನ ಬಲಿಯ ಆಚರಣೆ, ಅದರ ಹಿಂದಿನ ನಂಬಿಕೆಗಳನ್ನು ಕಾಣುತ್ತೇವೆ. ಹೀಗೆ ಕಥೆಗಾರರು ನಮ್ಮ ಸಂಸ್ಕೃತಿಯ ಆಚಾರ, ವಿಚಾರ, ಆದರ್ಶಗಳನ್ನು ವಿವರಗಳನ್ನು ಬಿಚ್ಚುತ್ತ ಹೋಗುವ ಕೆಲಸವನ್ನು ಸಹ ಇವರ ಕಥೆಗಳಲ್ಲಿ ಮಾಡುತ್ತಾರೆ.

ಕಥೆಗಳಲ್ಲಿ ಬರುವ ಬಹುಪಾಲು ಪಾತ್ರಗಳು ಭಾರತೀಯ ಸಾಂಪ್ರದಾಯಿಕ ಮೌಲ್ಯಗಳನ್ನು ನಂಬುತ್ತವೆ. (ಪಾಶ್ಚಾತ್ಯ ಪಾತ್ರಗಳು ಇದಕ್ಕೆ ಅಪವಾದ) ಮತ್ತು 'ಒಡುಗನನ್ನು ಆ ದಾರಿಯಲ್ಲಿ ಕರೆದೊಯ್ಯಲು ಪ್ರೇರೇಪಿಸುತ್ತವೆ. ದೇವರು ಮಹಾತ್ಮ, ಮಾನವ ಆತನ ಸೇವಕ. ಆತ ಆಡಿಸಿದಂತೆ ನಾನು ಆಡಬೇಕು ಎನ್ನುವ ಕಥೆಗಾರರ ಕಲ್ಪನೆ ಮನುಷ್ಯನನ್ನು ಸೂತ್ರದ ಬೊಂಬೆಯಾಗಿ, ದೇವರನ್ನು ಸೂತ್ರಧಾರನನ್ನಾಗಿ ಚಿತ್ರಿಸುತ್ತವೆ. 'ಮಾಯಾವಿನ ಕನ್ನಡಿ' ಕಥೆಯಲ್ಲಿ ಸ್ವಾಮೀಜಿ ತೋರಿಸುವ 'ಗೊಂಬೆಗಳು' ಇಂದಿನ ಸಮಾಜದಲ್ಲಿನ ಸಮುದಾಯಗಳ ಸಂಘರ್ಷದ ಅತಿರೇಕವನ್ನು ಚಿತ್ರಿಸಿದರೂ ಅವು ಕೇವಲ ಗೊಂಬೆಗಳು. ಅವುಗಳನ್ನು ಆಡಿಸುವಾತ ಒಬ್ಬನಿದ್ದಾನೆ; ಎನ್ನುವುದೇ ಇದರ ಹಿಂದಿನ ನಿಲುವು. ಕನ್ನಡಿಯಲ್ಲಿ ಒಂದು ಕಡೆ ರೂಜ್ವೆಲ್ಟ, ಚರ್ಚಿಲ ಮುಂತಾದವರು ನಿಂತರೆ ಮತ್ತೊಂದೆಡೆ ಹಿಟ್ಲರ, ಮುಸೊಲಿನಿ ತರ ಕಂಡರೂ ಅವರು ಮೇಲು ನೋಟಕ್ಕೆ ಬೇರೆ ದೇಶದ ವ್ಯಕ್ತಿಗಳಾದರೂ ಅಂಥವರು ಎಲ್ಲ ಸಮಾಜದಲ್ಲೂ ಉಂಟು ಎನ್ನುವುದನ್ನು ಹೇಳಲು ಕಥೆಗಾರರು ಈ ತಂತ್ರ ಬಳಸಿದ್ದಾರೆ.

ಮಾಸ್ತಿಯವರ ಕಥೆಗಳಲ್ಲಿನ ಪಾತ್ರಗಳ ನಂಬಿಕೆ ಸಮುದಾಯದ ನಂಬಿಕೆ. ಭಾರತೀಯ: ಕರ್ನಾಟಕದ ಸಂಪ್ರದಾಯ ಬದ್ಧ ಮೌಲ್ಯಗಳ ನಂಬಿಕೆ. 'ಏಕೆಂದರೆ ಕಥೆಯಲ್ಲಿ ಬರುವ ಯಾವುದೇ ಹೆಣ್ಣು ಗಂಡನನ್ನೇ ಸರ್ವಸ್ವ ಎಂದು ತಿಳಿದವಳು. ತನ್ನ ಶೀಲ ಸೌಭಾಗ್ಯದಲ್ಲಿನ

ನಂಬಿಕೆಗಳಿಗಾಗಿ ಎಂಥ ತ್ಯಾಗಕ್ಕೂ ಸಿದ್ಧವಾಗುವಂಥವಳು. ಉದಾಹರಣೆಗೆ 'ಚಿಕ್ಕವ್ವ' ಕಥೆಯಲ್ಲಿನ ಚಿಕ್ಕವ್ವ ಗಂಡನಿಗೆ ದೈಹಿಕವಾಗಿ ತೃಪ್ತಿ ಕೊಡದಿದ್ದರೂ ಶೀಲಗೆಡಲು ಒಪ್ಪುವುದಿಲ್ಲ. 'ಪುತ್ರ-ಕಾಮೇಷ್ಟಿ'ಯಲ್ಲಿನ ಶಾಮಣ್ಣನವರ ಚಿಕ್ಕ ಹೆಂಡತಿ ಕೂಡ ಮಕ್ಕಳಾಗದಿದ್ದರೂ ಪರವಾಗಿಲ್ಲ. ಆ ಕಳ್ಳ ಸಂನ್ಯಾಸಿ ಹತ್ತಿರ ವ್ರತ ಹಿಡಿಸಲಾರೆ ಎನ್ನುತ್ತಾಳೆ. ಹಾಗೆಯೇ ಪತಿಯೆ ಪರದೈವವೆಂದು, ಮನೆ ಬಿಟ್ಟು ಹೋದ ಗಂಡಂದಿರಗಾಗಿ ಕಾಯುವ ಅನೇಕ ಮಹಿಳೆಯರು (ಸಂನ್ಯಾಸಿ ಅಲ್ಲದ ಸಂನ್ಯಾಸಿಯ, ನರಸಮ್ಮ, ವೇಲೂರಿನ ಲಕ್ಷ್ಮಮ್ಮ, ಒಂದು ಕಾಮನ ಹಬ್ಬದ ಕತೆಯ ಸಾವಿತ್ರಮ್ಮ, ಸಾರಿಪುತ್ರ (ನರಸಿಂಹಶರ್ಮ)ನ ಹೆಂಡತಿ ಅನೇಕರು) ಶೀಲಕ್ಕಾಗಿ ಬಲಿಯಾಗುವ ಗಿರಿಜವ್ವ, ಗಂಡ ತೀರಿದ ನೆಂದು ತಿಳಿದು ತಾನೂ ಆತ್ಮಹತ್ಯೆ ಮಾಡಿಕೊಳ್ಳುವ ಕೃಷ್ಣಮೂರ್ತಿಯ ಹೆಂಡತಿಯಂಥ ಹೆಣ್ಣಿನ ಪಾತ್ರಗಳು ಅನೇಕ. ಇಲ್ಲಿನ ಮಹಿಳೆಯರು ತಾವು ನಂಬಿದ ತಮ್ಮ ಸಂಪ್ರದಾಯ, ಸಂಸ್ಕೃತಿ ಮೌಲ್ಯಗಳನ್ನು ನಂಬಿ ಅದನ್ನು ಅಕ್ಷರಶಃ ಆಚರಿಸುತ್ತವೆ.

ಭಾರತೀಯ ಸಮಾಜದ ಒಳಗಡೆ ಅಂತರ್ಗತವಾದ ದೈವದ ಬಗೆಗೆ, ಜನರ ನಂಬಿಕೆಗಳ ಬಗೆಗೆ, ದೇವರು, ಧರ್ಮ, ರೀತಿ ನೀತಿ ಗೌರವ ಮರ್ಯಾದೆಗಳ ಬಗೆಗೆ, ಪತಿವ್ರತೆ, ಶೀಲ, ಹಿರಿತನ, ಉದಾರಿತನ ಹೀಗೆ ಹಲವು ಬಗೆಗಳಲ್ಲಿ ನಮ್ಮ ಸಮಾಜದ 'ಏಳಿಗೆಗಾಗಿ ಹಿಂದೆ (ಇತಿಹಾಸದಲ್ಲಿ) ಹುಟ್ಟಿಕೊಂಡ ಆಚರಣೆಗಳನ್ನು ನಂಬಿಕೆಗಳನ್ನು ಕಥೆಗಳುದ್ದಕ್ಕೂ ತರುತ್ತಾರೆ. ಅಷ್ಟೇ ಅಲ್ಲದೆ ಜನರು ಜೀವಿಸುವ ಜೀವನ ಕ್ರಮದಲ್ಲಿ ಹೆಣಿಗೆ ಹಾಕಿಕೊಂಡ ಅನೇಕ ಆಚರಣೆಗಳನ್ನು (ಪೂಜೆ, ಬಲಿ, ವ್ರತ, ನೃತ್ಯ, ಹಾಡು, ಊಟದ ರೀತಿ, ಇತ್ಯಾದಿ) ನೇರವಾಗಿ ತಾವು ಕಂಡುಂಡ ಅನುಭವದ, ಆಲೋಚನೆಯ ಹಿನ್ನೆಲೆಯಲ್ಲಿ ಸಾಧಾರವಾಗಿ ಕಥೆಗಳ ಮೂಲಕ 'ಓದುಗನಿಗೆ ನೀಡುತ್ತಾರೆ.

ಮಾಸ್ತಿಯವರು ತಮ್ಮ ಎಲ್ಲ ಕಥೆಗಳಲ್ಲಿ (ಕೆಲವು ಅಪವಾದ) ತಾವು ನಂಬಿದ ದೈವದ ಬಗ್ಗೆ, ಭಾರತೀಯ ಸಂಪ್ರದಾಯಬದ್ಧ ಮೌಲ್ಯಗಳ ಬಗ್ಗೆ, ಆಚರಣೆಗಳ ಬಗ್ಗೆ ತೋರುವ ನಿಲುವು ವಿಶಿಷ್ಟವಾದುದು. ಅದು ಭಾರತೀಯ ಸಂದರ್ಭವನ್ನು ನಂಬಿದ ಮನಸ್ಸು. ಇಲ್ಲಿನ ಸಂಪ್ರದಾಯ ಮೌಲ್ಯಗಳನ್ನು ನಂಬಿದ ಮನಸ್ಸು. ಮತ್ತು ಅವುಗಳನ್ನು ಎತ್ತಿ ಹಿಡಿಯುವ ಮನಸ್ಸಾಗಿದೆ ಎಂದು ಹೇಳುವುದಕ್ಕೆ ಸೀಮಿತವಾಗದೆ ಯಾವುದೇ ಸಂದರ್ಭದ ಬದುಕನ್ನು ಹಸನಾಗಿಸಿಕೊಳ್ಳಲು ದಿಕ್ಕು ತಪ್ಪಬಹುದಾದ ನೆಲೆಗಳಲ್ಲಿ ಸಮಾಧಾನಿಸಿಕೊಳ್ಳಲು ದೈವವನ್ನು ಅಥವಾ-ನಂಬಿಕೆಗಳನ್ನು ಉದಾರವಾದಿತನದಿಂದ ಸ್ವೀಕರಿಸುವುದು ಮಾಸ್ತಿಯವರ ಕಥೆಗಳ ಪರಿಪೂರ್ಣ ಗುಣಗಳು ಆಗಿವೆ.

అధ్యాయము : 4

ధార్మిక వ్యవస్థ

ಧಾರ್ಮಿಕ ವ್ಯವಸ್ಥೆ

ಮಾಸ್ತಿಯವರ ಕಥೆಗಳಲ್ಲಿರುವ ಧರ್ಮದ ನಂಬಿಕೆಯನ್ನು ಡಿ.ಎಸ್.ನಾಗಭೂಷಣರವರ ಮಾತಿನೊಂದಿಗೆ ಪ್ರಾರಂಭಿಸಬಹುದು. ''ಮಾಸ್ತಿಯವರ ಪ್ರಕಾರ ಕಥೆಗಾರಿಕೆಯ ಆತ್ಯಂತಿಕ ಸಾರ್ಥಕತೆ ಇರುವುದು ಜೀವ ಜಗತ್ತಿನ ಅನ್ಯೋನ್ಯತೆಯ ಮೂಲಕ 'ಏಕತೆ'ಯನ್ನು ಕಲ್ಪಿಸುವಲ್ಲಿ ಧರ್ಮದ ಮೂಲ ಪ್ರೇರಣೆಯೂ ಇದೇ ಆಗಿರುವುದರಿಂದ ಮಾಸ್ತಿ ಕಥೆ ಬರೆಯುವುದೇ ಒಂದು ಧಾರ್ಮಿಕ ಆಚರಣೆಯಾಗಿದೆ ಎಂದು ಹೇಳಬಹುದು.'' (ಡಿ.ಎಸ್.ನಾಗಭೂಷಣ — ಮಾಸ್ತಿ ವಿಶೇಷ ಸಂಚಿಕೆ (ಸಂವಾದ) — ಪು — 41) ಈ ಮೇಲಿನ ಕಲ್ಪನೆಯಾದ ಅನ್ಯೋನ್ಯತೆಯ ಮೂಲಕ 'ಏಕತೆ'ಯನ್ನು ಕಲ್ಪಿಸುವುದು ಇಲ್ಲಿನ ಅನೇಕ ಕಥೆಗಳ ಮುಖ್ಯ ವಸ್ತುವಾಗಿದೆ. ಭಾರತೀಯ ಸಮಾಜದಲ್ಲಿ ಹಿಂದು, ಮುಸ್ಲಿಂ, ಬೌದ್ಧ ಮತ್ತು ಕ್ರೈಸ್ತ ಧರ್ಮಗಳು ಒಟ್ಟೊಟ್ಟಿಗೆ ಸಹಜೀವನ ನಡೆಸುತ್ತಿವೆ. (ಬೌದ್ಧ ಧರ್ಮ ಈಗ ಅಪರೂಪ) ದಿನನಿತ್ಯದ ಜೀವನದಲ್ಲಿ ಈ ಮೂರೂ ಧರ್ಮದವರು ಒಂದಿಲ್ಲ ಒಂದು ಕಾರಣದಿಂದ ಜೊತೆಯಾಗಿ ಬಾಳಬೇಕಾಗಿದೆ. ಮತ್ತೆ ಆ ಮಾರ್ಗದಲ್ಲೇ ಬಾಳುತ್ತಿವೆ. (ಕೆಲವು ರಾಜಕೀಯ ಕಾರಣಗಳಿಗಾಗಿ ಇತ್ತೀಚಿನ ದಿನಗಳಲ್ಲಿ ಈ ಸಂಬಂಧ ಹಾಳಾಗುತ್ತಿದೆ.)

ಧರ್ಮ ಧರ್ಮಗಳ ನಡುವಿನ ಸಾಮರಸ್ಯ, ಪರಸ್ಪರ ಮನುಷ್ಯರಾಗಿ, ಪ್ರೀತಿ ವಿಶ್ವಾಸದಿಂದ ಸಹೋದರರಂತೆ ಜೀವನ ನಡೆಸುವ ಪಾತ್ರಗಳು ಕಥೆಗಳಲ್ಲಿ ಅನೇಕ. 'ಟಾಂಗಾ ಹುಸೇನ' ನಂತಹ ಮುಸ್ಲಿಂನು ಹಿಂದೂ ಧರ್ಮದಲ್ಲಿ, ಹಿಂದೂ ಧರ್ಮದವರೊಂದಿಗೆ ಸಹೋದರನಂತೆ ಬಾಳುವೆ ಮಾಡಿದವನು. ಜೀವನದಲ್ಲಿ ಯಾವ ಕಾಲಕ್ಕೂ ಯಾರೊಡನೆಯೂ ವಿರೋಧ ಕಟ್ಟಿಕೊಂಡವನಲ್ಲ. ಬದಲಾಗಿ ಜೀವನದ ಕೊನೆಗಳಿಗೆವರೆಗೂ ಸಹಬಾಳ್ವೆಯಿಂದ ತುಂಬು ಜೀವನ ನಡೆಸುವವನಾಗುತ್ತಾನೆ. ಹಾಗೆಯೇ 'ಹೂವುವಂತ ಅಯ್ಯಂಗಾರು' ಕಥೆಯಲ್ಲಿನ

ಸುಶೀಲೆ ಕೂಡ ಹಿಂದೂ ಧರ್ಮದ ಸಂಪ್ರದಾಯಸ್ಥ ಅಯ್ಯಂಗಾರ್ರನ್ನು ತನ್ನ ಗಂಡನಂತೆ ಕಂಡವಳು. ಮಾಲತಿ: ಕ್ರೈಸ್ತ ಧರ್ಮಕ್ಕೆ ಸೇರಿದವಳಾಗಿದ್ದರೂ ಹಿಂದೂ ಧರ್ಮದ ಅಯ್ಯಂ-ಗಾರರ ಜೊತೆ ಅನ್ಯೋನ್ಯ ಹೆಂಡತಿಯಾಗುತ್ತಾಳೆ. ಅಯ್ಯಂಗಾರರು ಸತ್ತಾಗ ಅವರ ಆಸೆಯಂತೆ (ತನ್ನ ಧರ್ಮಕ್ಕಿಂತ ಭಿನ್ನವಾಗಿದ್ದರೂ) ಚಾಚೂ ತಪ್ಪದೆ ವಿಧಿಕ್ರಮಗಳನ್ನು ಮಾಡುತ್ತಾಳೆ. ಅಯ್ಯಂಗಾರರು ಇರುವ ತನಕ ಹಿಂದೂ ಸಂಪ್ರದಾಯದ ದಂಪತಿಗಳಂತೆ ಜೀವನ ನಡೆಸಿದವರು. ಎಲ್ಲಿಯೂ ಕೂಡ ನನ್ನ ಧರ್ಮ ನಿನ್ನ ಧರ್ಮ ಎಂದು ಕಚ್ಚಾಡುವುದಿಲ್ಲ. ಪರಸ್ಪರ ಅರ್ಥಮಾಡಿಕೊಂಡು ಬದುಕಿದವರು.

ಧರ್ಮಗಳ ನಡುವಿನ ಸಂಘರ್ಷ

ಮೇಲಿನದು ಒಂದು ಮಾದರಿಯಾದರೆ ಅನೇಕ ಕಡೆ ಧರ್ಮಗಳ ಮಧ್ಯ ಸಹಜವಾಗಿಯೇ ಘರ್ಷಣೆ ಉಂಟಾಗುತ್ತದೆ. ಕಥೆಗಳಲ್ಲಿ ನಾಲ್ಕು ಧರ್ಮ (ಹಿಂದೂ, ಮುಸ್ಲಿಂ, ಕ್ರೈಸ್ತ, ಬೌದ್ಧ)ಗಳ ನಡುವಿನ ಸಂಘರ್ಷ ಕಾಣುತ್ತೇವೆ. 'ಡೂಬಾಯಿ ಪಾದ್ರಿಯ ಒಂದು ಪತ್ರ' ದಲ್ಲಿ ಮುಸ್ಲಿಂರು ಒತ್ತಾಯವಾಗಿ ಹಿಂದೂ ಧರ್ಮದವರನ್ನು ತಮ್ಮ ಮತಕ್ಕೆ ಸೇರಿಸಿಕೊಂಡರೆ 'ಇಲ್ಲಿಯ ತೀರ್ಪು' ಕಥೆಯಲ್ಲಿ ವಿದೇಶಿ ನ್ಯಾಯಮೂರ್ತಿ(ಜೆನ್ರಿ ಸಾಹೇಬರು) ಬೋಯಿಗಳನ್ನು ಕ್ರೈಸ್ತ ಮತಕ್ಕೆ ಮತಾಂತರಿಸಲು ಒಲವು ಮತ್ತು ಅದಕ್ಕಾಗಿ ಅವರಿಗೆ ಆಸೆ ತೋರಿಸುತ್ತಾರೆ. 'ಒಬ್ಬ ತಾಯಿ ಮಗ' ಕಥೆಯಲ್ಲಿ ನಿರೂಪಕ ಮತ್ತು ಕ್ರೈಸ್ತ ಧರ್ಮದ ಪ್ರಚಾರಕನಿಗೂ ನೇರವಾದ ವಾದ – ವಿವಾದ ಬಹಳ ನವಿರಾಗಿ ಬಂದಿದೆ. ಮೇಲು ನೋಟಕ್ಕೆ ಇಲ್ಲಿ ನವಿರಾದ ಮಾತುಗಳು ಕಂಡರೂ ಒಳ ಅಂತರ್ಯದಲ್ಲಿ ಗಡುಸಾದ ವಾದವೇ ಇದೆ. ಅಥವಾ ಹಿಂದೂ ಧರ್ಮಕ್ಕಿಂತ ಅದೇನೂ ಒಳ್ಳೆಯದಲ್ಲ ಎಂಬ ಧಾಟಿ ಇದೆ.

'ಡೂಬಾಯಿ ಪಾದ್ರಿಯ ಒಂದು ಪತ್ರ' ದಲ್ಲಿ ಬ್ರಾಹ್ಮಣನಾದ ನರಸಿಂಹನನ್ನು ಮಹಮ್ಮದ ಅಬ್ಬಾಸನನ್ನಾಗಿ ಬಲವಂತವಾಗಿ ಮತ ಪರಿವರ್ತನೆ ಮಾಡುವುದು, ಇಂಥ ಘಟನೆಗಳು ಇತಿಹಾಸದುದ್ದಕ್ಕೂ ಅನೇಕವಾಗಿ ನಡೆದಿವೆ. ಎರಡು ಧರ್ಮಗಳ ನಡುವೆ ಈ ಬಗೆಯ ಸಂಘರ್ಷ ಸಾರ್ವಕಾಲಿಕವಾದದ್ದು. ಕಾಲ ಕಾಲಕ್ಕೆ ಅದರ ರೂಪ ಬದಲಾಯಿಸುತ್ತಿರುತ್ತದೆ. ಧಾರ್ಮಿಕ, ರಾಜಕೀಯ, ಕಾರಣಕ್ಕಾಗಿ ನಡೆದ, ನಡೆವ ಸಂಘರ್ಷಕ್ಕೆ ಅನೇಕ ದಾಖಲೆಗಳು ಸಿಗುತ್ತವೆ. ಈಗಲೂ ನಡೆಯುತ್ತಿರುವ ಸಂಘರ್ಷ ಕೂಡ ಅದೇ ರೀತಿಯದು(ರಾಮಜನ್ಮಭೂಮಿ – ಬಾಬರಿ ಮಸೀದಿ ಜಗಳ).

'ಇಲ್ಲಿಯ ತೀರ್ಪು' ಕಥೆಯಲ್ಲಿ ನ್ಯಾಯಮೂರ್ತಿ ಹೆನ್ರಿ ಸಾಹೇಬರು ಹಿಂದುಗಳಾದ ಬೋಯಿಗಳನ್ನು ಕ್ರೈಸ್ತ ಮತಕ್ಕೆ ಮತಾಂತರಿಸಲು, ಅವರಲ್ಲಿ ಕ್ರೈಸ್ತ ಧರ್ಮದ ಬಗ್ಗೆ ಪ್ರೀತಿ ಹುಟ್ಟಲು ಆಸೆ ತೋರಿಸುತ್ತಾರೆ. ಹಿಂದೂ ಧರ್ಮಗಲ್ಲಿ ಸತ್ವವಿಲ್ಲ ಎನ್ನುವುದನ್ನು ರಾಮಬೋಯಿ, ತಿಮ್ಮಬೋಯಿಯರಲ್ಲಿ ನಂಬಿಕೆ ಹುಟ್ಟಿಸಲು ಪ್ರಯತ್ನಿಸುತ್ತಾನೆ. ಅವರನ್ನು ಚರ್ಚಿಗೆ ಕರೆಸುತ್ತಾನೆ. ಬೋಯಿಗಳಿಗೆ ಹಿಂದೂ ಧರ್ಮದ ನಂಬಿಕೆಗಳು ಬಿಡಲಾಗದೆ ಎರಡೂ ಧರ್ಮಗಳ ನಡುವೆ ಸಂಘರ್ಷ ಏರ್ಪಡುತ್ತದೆ.

ಮಾಸ್ತಿಯವರ ಧಾರ್ಮಿಕ ದೃಷ್ಟಿ ವಿಶಿಷ್ಟವಾದುದು. ಅದನ್ನು ಕುರಿತು ಅರಳು ಮಲ್ಲಿಗೆ ಪಾರ್ಥಸಾರಥಿ ಹೀಗೆ ಹೇಳುತ್ತಾರೆ. '' ಮಾಸ್ತಿಯವರ ಧಾರ್ಮಿಕ ದೃಷ್ಟಿ ಅನನ್ಯವಾದದ್ದು. ಭಾರತೀಯ ಸಂಸ್ಕೃತಿ ಬಗ್ಗೆ ವಿಶಿಷ್ಟವಾದ ಶ್ರದ್ಧೆ, ಅಧ್ಯಯನ ಗೌರವಗಳಿದ್ದ ಮಾಸ್ತಿಯವರಿಗೆ ಭಾರತೀಯ ಧರ್ಮ, ಸಂಸ್ಕೃತಿಗಳನ್ನು ತಮ್ಮ ಬದುಕಿನ ಮೂಲ ತುಡಿತದ ಮಟ್ಟದಲ್ಲಿ ಪ್ರತಿಸ್ಪಂದಿಸಿ ಸಾಹಿತ್ಯದ ಭಾಷೆಯಲ್ಲಿ ಧಾರ್ಮಿಕ ವಿವರಣೆಗಳನ್ನು ನೀಡುತ್ತ ನಡೆಯುವ, ಆ ಮೂಲಕ ಕಲಾತ್ಮಕ ಚಿತ್ರಣವನ್ನು ಸಾಧ್ಯವಾಗಿಸುವ, ಇಷ್ಟಾಗಿಯೂ ವಾಸ್ತವಿಕ ಅಂಶಗಳಿಗೆ ಎಲ್ಲೂ ಮುಕ್ಕಾಗದಂತೆ ನೋಡಿಕೊಳ್ಳಬಲ್ಲ ಜಾಣ್ಮೆ ಸಿದ್ಧಿಸಿದೆ.'' (ಅರಳು ಮಲ್ಲಿಗೆ ಪಾರ್ಥಸಾರಥಿ — ಶ್ರೀನಿವಾಸ — ಸಂಪಾದಕ — ಮೂವಿನಕೆರೆ ರಂಗನಾಥ— ಪು —461) ಈ ದೃಷ್ಟಿಕೋನ ಮತ್ತು ಅವರ ವೈಯಕ್ತಿಕ ಪ್ರತಿಭೆ ಅವರ ಎಲ್ಲ ಧಾರ್ಮಿಕ ಕಥೆಗಳಲ್ಲಿ ಕಂಡು ಬರುತ್ತದೆ. 'ಸಾರಿ ಪುತ್ರನ ಕೊನೆಯ ದಿನಗಳು' ಕಥೆಯಲ್ಲಿ ಸಾರಿ ಪುತ್ರನಿಗೆ (ನರಸಿಂಹ ಶರ್ಮ) ಬೌದ್ಧ ಧರ್ಮದ ಬಗೆಗೆ ಶ್ರದ್ಧೆ, ಗೌರವಾದರ, ನಂಬಿಕೆ ಇದೆ. ಆದ್ದರಿಂದಲೇ ನರಸಿಂಹಶರ್ಮ ಬೌದ್ಧನಾಗಲು ಹೊರಟಿದ್ದು. ಆದರೆ ಈತ ಹುಟ್ಟಿ ಬೆಳೆದದ್ದು ಹಿಂದೂ ಧರ್ಮದ ಪರಿಸರದಲ್ಲಿ ಹಾಗಾಗಿ ಈತನಿಗೆ ಹಿಂದು ಧರ್ಮದ ಕೆಲವು ಮೂಲಭೂತ ಕಲ್ಪನೆಗಳಲ್ಲಿರುವ ನಂಬಿಕೆ ಅಷ್ಟು ಸುಲಭವಾಗಿ ಹೋಗಲಾರವು. ಆದ್ದರಿಂದಲೇ ಸಾರಿಪುತ್ರ ಬೌದ್ಧ ಗುರುವಿನ ಹತ್ತಿರ ಕೂಡ ದೇವರ ಮಾತನ್ನು ಎತ್ತುತ್ತಾನೆ. 'ಏಕೆಂದರೆ ಆತನ ಮುಕ್ತಿಗೆ ದಾರಿ ತೋರಿಸಲು ಒಬ್ಬ ಗುರು ಬೇಕು. ಅವನೇ ದೇವರು ಎನ್ನುವ ಕಲ್ಪನೆ ಭಾರತೀಯ ಸಂಸ್ಕೃತಿಯ ಸಂದರ್ಭದ್ದು.

ಹಿಂದೂ ಧರ್ಮದ ಚೌಕಟ್ಟಿನೊಳಗೆ ಬೆಳೆದ (ರೂಪುಗೊಂಡ) ಕಥೆಗಾರರು ಎಲ್ಲೂ ಹಿಂದೂ ಧರ್ಮವನ್ನು ಬಿಟ್ಟುಕೊಡಲು ಆಗುವುದೇ ಇಲ್ಲ. 'ಡೂಬಾಯಿ ಪಾದ್ರಿಯ ಒಂದು ಪತ್ರ'ದಲ್ಲಿ ಹಿಂದೂ ಧರ್ಮ ನಿಷ್ಕ್ರಿಯಗೊಂಡಿದೆ. ಅದರ ಉದ್ಧಾರಕ್ಕೆ ನಮ್ಮ (ಕ್ರೈಸ್ತ)

ಧರ್ಮದ ಅಗತ್ಯ ಇದೆ ಎಂದು ಪಾದ್ರಿ ಪತ್ರ ಬರೆದರೂ, ಅದು ಪಾಶ್ಚಿಮಾತ್ಯರು ಹೀಗೆ ತಿಳಿದ ಕೊಂಡಿದ್ದಾರೆ ಎಂದು ಕಥೆಗಾರ ಕಲ್ಪನೆಯೇ, (ಸೂಕ್ಷ್ಮವಾಗಿ ಗ್ರಹಿಸಿ ಹೇಳಿರಲೂ ಸಾಧ್ಯ) ಹೊರತು ಎರಡು ಧರ್ಮಗಳ ಮಧ್ಯ ಈ ವಾದ ಬಂದಾಗ ಕಥೆಗಾರರು ಸಂಪೂರ್ಣವಾಗಿ ಹಿಂದೂ ಧರ್ಮಪರವಾಗಿ ನಿಲ್ಲುತ್ತಾರೆ. ಇದು ಕೆಲವು ಸಲ ಅವರ ಮಿತಿ ಎಂದು ಅರ್ಥೈಸಿಕೊಳ್ಳಲು ಸಾಧ್ಯತೆ ಇದೆ. 'ಒಬ್ಬ ತಾಯಿಯ ಮಗ' ಕಥೆಯಲ್ಲಿ ಮಾಸ್ತಿ ಪ್ರವಾಸ ಮಾಡುತ್ತಿದ್ದ ರೈಲಿನಲ್ಲಿ ಆಕಸ್ಮಾತ್ ಎದುರಾದ (ಪರಿಚಯವಾದ) ಕ್ರೈಸ್ತ ಮತ ಪ್ರಚಾರಕನ ಜೊತೆಗಿನ ಸಂಭಾಷಣೆಯನ್ನು ಗಮನಿಸಿದರೆ ಇದು ಸ್ಪಷ್ಟವಾಗಿ ಗೊತ್ತಾಗುತ್ತದೆ.. ಸ್ತ್ರೀಯರ ಸ್ಥಿತಿಗತಿಯನ್ನು ಕುರಿತು ಮಾತನಾಡುತ್ತಿದ್ದಾಗ ಪ್ರಚಾರಕ: '' ಹಿಂದೂ ಸಮಾಜ ಸ್ತ್ರೀಯರಿಗೆ ತಕ್ಕ ಗೌರವವನ್ನು ಕೊಡುವುದಿಲ್ಲ'' ಎಂದರು. ನಾನು '' ಈಗ ನೀವು ನೋಡುವ ಜನರ ಸಮುದಾಯಗಳಲ್ಲಿ ಕಾಣುವ ಸಂಗತಿಯನ್ನು ವರ್ಣಿಸುತ್ತಿದ್ದೀರಿ. ನೀವು ಕಾಣುತ್ತಿರುವುದು ಹಿಂದೂ ಸಮಾಜದ ಒಂದು ಭಾಗ ಮಾತ್ರ. ಸ್ವಲ್ಪವಾದರೂ ನಯ ಬೆಳೆದಿರುವ ನಮ್ಮ ಸಮುದಾಯಗಳಲ್ಲಿ ಸ್ತ್ರೀಯರ ಸ್ಥಿತಿ ಹೇಗಿದೆ ಎನ್ನುವುದನ್ನು ನೀವು ಕಾಣಿರಿ.'' (ಮಾಸ್ತಿ — ಸಣ್ಣ ಕಥೆಗಳು — ಸಂ — 5 — ಪು — 219)

ಕ್ರೈಸ್ತ, ಮುಸ್ಲಿಂ ಧರ್ಮಗಳ ಜೊತೆಗೆ ಸಂಘರ್ಷ ಏರ್ಪಟ್ಟಾಗ ಮೇಲಿನಂತೆ ಒಂದು ಧರ್ಮದ ಪರವಾಗಿ ನಿಂತು ತಮ್ಮ ಧರ್ಮವನ್ನು ಎತ್ತಿ ಹಿಡಿಯುವ ಧಾಟಿ ಕಾಣುತ್ತದೆ. ಜೈನ, ಬೌದ್ಧ ಧರ್ಮಗಳ ಜೊತೆಗಿನ ಹಿಂದೂ ಧರ್ಮದ ಆದರ್ಶ, ಒಳಿತುಗಳನ್ನು ಮೆಚ್ಚಿಕೊಂಡು ಅದರೆಡೆಗೆ ನಡೆಯುತ್ತಾರೆ ಎಂದರೂ ಕೂಡ ಕಥೆಗಾರರು ಅಂತಿಮವಾಗಿ ಹಿಂದೂ ಧರ್ಮದ ಪರವಾಗಿಯೇ ನಿಲ್ಲುತ್ತಾರೆ. ಇದನ್ನು ಮಾಸ್ತಿಯವರೇ ತಮ್ಮ 'ಕರ್ನಾಟಕ ಜನತೆಯ ಸಂಸ್ಕೃತಿ' ಪುಸ್ತಕದಲ್ಲಿ ಬೌದ್ಧ ಜೈನ ಧರ್ಮಗಳು ಹಿಂದೂ ಧರ್ಮದಲ್ಲೇ ಬೆರೆತು ಹೋಗಿವೆ. ಮತ್ತು ಹಿಂದೂ ಧರ್ಮದ ಭಾಗಗಳೇ ಎಂದು ಹೇಳುವುದರ ಮುಖಾಂತರ ಹಿಂದೂ ಧರ್ಮದ ವಿಶಾಲತೆಯನ್ನು ಗುರುತಿಸುತ್ತಾರೆ. '' ಶ್ರೀ ಶಂಕರಾಚಾರ್ಯರು ಸನಾತನ ಧರ್ಮ ಸ್ಥಾಪನಾ ಕಾರ್ಯದಲ್ಲಿ ವಿಮತ ಖಂಡ ಮಾಡುತ್ತ ಯಾವುದಾದರೂ ಒಳ್ಳೆಯ ಅಂಶಗಳು ಜನರಲ್ಲಿ ಹಾರಿದ್ದರೆ ಅವುಗಳನ್ನು ಬಿಡದಂತೆ ಮುಖ್ಯ ಧರ್ಮಕ್ಕೆ ಅವನ್ನು ಸಮನ್ವಯ ಮಾಡಿ ಬೌದ್ಧ ಮತವು ಬೇರೆಯ ಮತವಾಗಿ ಜನರಲ್ಲಿ ನಿಲ್ಲಬೇಕಾದ ಅವಶ್ಯಕತೆಯನ್ನು ಕಳೆದರು. ಬೌದ್ಧ ಪಂಥದ ಉಪಯುಕ್ತ ತತ್ವಗಳು ಪಲವು ಹೀಗೆ ಸನಾತನ ಧರ್ಮದಲ್ಲಿ ಬೆರೆತು ಹೋಗಿರಬೇಕು'' (ಮಾಸ್ತಿ — ಕರ್ನಾಟಕ ಜನತೆಯ ಸಂಸ್ಕೃತಿ — ಪು — 15)

ಕಥೆಗಾರರಿಗೆ ಧರ್ಮದ ಬಗ್ಗೆ ಅಪಾರವಾದ ನಂಬಿಕೆ ಇದೆ. ಅದನ್ನು ಬಿಟ್ಟು ಬದುಕಲು ಸಾಧ್ಯವಿಲ್ಲ ಎಂಬ ಮನರಿಕೆ ಆದಂತಿದೆ. '' ಧರ್ಮಕ್ಕೆ ಸರಿಯಾಗಿ ನಡೆಯದೇ ಹೋದರೆ ಮನುಷ್ಯನು ತನ್ನ ನಿಜವಾದ ಸ್ವಭಾವಕ್ಕೆ ವಿರೋಧವಾಗಿ ಆಚರಿಸಿ ತನ್ನ ಜನ್ಮವನ್ನು ತಾನೇ ವ್ಯರ್ಥ ಮಾಡಿಕೊಳ್ಳುತ್ತಾನೆ; ಅದಕ್ಕೆ ಬೇರೆ ಶಿಕ್ಷೆ ಅವಶ್ಯಕವಿಲ್ಲ; ಇಲ್ಲಿ ಕರ್ಮದಲ್ಲಿಯೇ ಶಿಕ್ಷೆ ಅಡಗಿದೆ'' (ಮಾಸ್ತಿ – ಕರ್ನಾಟಕ ಜನತೆಯ ಸಂಸ್ಕೃತಿ – ಪು –59)

ಧರ್ಮ ಧರ್ಮಗಳ ನಡುವಿನ ಸಂಘರ್ಷ, ಸಾಮರಸ್ಯ, ದ್ವಂದ್ವಗಳನ್ನು ಬಹಳ ಸೂಕ್ಷ್ಮವಾಗಿ ಮಾನವೀಯ ಧರ್ಮದ ಹಿನ್ನೆಲೆಯಲ್ಲಿ ಮಾಸ್ತಿ ಕಥೆಗಳನ್ನು ವಿವರಿಸಬಹುದು. ಅವುಗಳ ಅಂತರಾಳದಲ್ಲಿ ಇರುವುದೇ ಮಾನವೀಯ ಧರ್ಮ, ಮೇಲ್ಪದರಲ್ಲಿ ವೈದಿಕ ಧರ್ಮದ ಪರವಾಗಿರುವಂತೆ ಕಥೆಗಾರರ ನಿಲುವು ಇದೆ ಎಂದೆನಿಸಿದರೂ ಯಾವ ಧರ್ಮದ ಪರವಾಗಿರದೇ ಮನುಷ್ಯ ಧರ್ಮದ ಪರವಾಗಿದೆ.

ಅಧ್ಯಾಯ : 5

ನ್ಯಾಯದ ಪರಿಕಲ್ಪನೆ

ನ್ಯಾಯದ ಪರಿಕಲ್ಪನೆ

ಭಾರತೀಯ ಸಾಂಸ್ಕೃತಿಕ ಜಗತ್ತಿನ ಅನೇಕ ಮುಗ್ಗುಲುಗಳನ್ನು ಚಿತ್ರಿಸುವಾಗ ಸಮಾಜದಲ್ಲಿನ ನ್ಯಾಯ, ತೀರ್ಪುಗಳ ಬಗ್ಗೆ ಸಹಜವಾಗಿಯೇ ಬರುತ್ತವೆ. ಅಂಥ ಕಥೆಗಳಲ್ಲಿ ನ್ಯಾಯ, ತೀರ್ಪುಗಳ ಕಲ್ಪನೆ ವಿಶಿಷ್ಟವಾಗಿ ರೂಪುಗೊಳ್ಳುತ್ತ ಹೋಗುತ್ತದೆ. ಮತ್ತು ಅವುಗಳಲ್ಲಿ ಸಾಮಾನ್ಯವಾಗಿ ಭಾರತೀಯ ಪರಂಪರಾಗತ ನಿಲುವುಗಳಿದಿರುತ್ತವೆ. ಜೊತೆಗೆ ಮಾನವೀಯ ಹಿನ್ನೆಲೆಯಲ್ಲಿ ಸತ್ಯದ ಹುಡುಕಾಟ ನಡೆಸುತ್ತವೆ. ಇದು ಇವರ ಕಥೆಗಳಲ್ಲಿ ವಿಶೇಷವಾಗಿ ಗಮನಾರ್ಹವಾದುದು.

‘ಜೋಗ್ಯೋರ ಅಂಜಪ್ಪನ ಕೋಳಿ ಕಥೆ’ ‘ಬಾದಷಹನ ದಂಡನೆ’, ‘ಇಲ್ಲಿಯ ತೀರ್ಪು’, ದೂಬಾಯಿ ಪಾದ್ರಿಯ ಒಂದು ಪತ್ರ’, ‘ಧರ್ಮ ಕಿಂಕರರ ಫಿಟ್ಸ ಸಿಚ್ಯುಷನ್’, ‘ದುರದೃಷ್ಟದ ಹೆಣ್ಣು’ ಹೀಗೆ ಅನೇಕ ಕಥೆಗಳಲ್ಲಿ ನ್ಯಾಯ, ತೀರ್ಪುಗಳ ವಿವರಗಳು ಬರುತ್ತವೆ. ಈ ಕಥೆಗಳ ಹಿನ್ನೆಲೆಯಲ್ಲಿ ಮಾಸ್ತಿಯವರ ಒಟ್ಟು ಕಥೆಗಳಲ್ಲಿ ರೂಪು ತಳೆವ ನ್ಯಾಯ ಪರಿಕಲ್ಪನೆ ಕುರಿತು ಚರ್ಚೆ ಮಾಡಲಾಗಿದೆ.

ಮಾಸ್ತಿಯವರ ಕಥೆಗಳಲ್ಲಿ ಬರುವ ಪಾತ್ರಗಳು ನಮ್ಮ (ಭಾರತೀಯ) ಸಂಪ್ರದಾಯ ಮೌಲ್ಯಗಳನ್ನೇ ನಂಬಿದಂಥವುಗಳು. ಇಲ್ಲಿನ ಪಾತ್ರಗಳು ಆಧುನೀಕರಣದ ಇಂದಿನ ನ್ಯಾಯ ವ್ಯವಸ್ಥೆಯ ಪರಿಕಲ್ಪನೆ ಒಪ್ಪಿಕೊಳ್ಳಲಾರವು. ‘ಜೋಗ್ಯೋರ ಅಂಜಪ್ಪನ ಕೋಳಿ’ ಕಥೆಯಲ್ಲಿನ ಅಂಜಪ್ಪನಿಗೆ ವಸಾಹತೀಕರಣದಿಂದ ಹುಟ್ಟಿಕೊಂಡ ಆಧುನಿಕ ನ್ಯಾಯ ತೀರ್ಪಿನಲ್ಲಿ ನಂಬಿಕೆ ಇಲ್ಲ. ಅದು ಅನೇಕ ಸಾರಿ ಸತ್ಯವನ್ನು ಮರೆಸಿ ಸಾಕ್ಷಿಗೆ ಪ್ರಾಮುಖ್ಯತೆ ಕೊಡುವಂಥದು. ಆದ್ದರಿಂದ ರಂಗಪ್ಪನಿಗೆ ಮುದುಕ ಅಂಜಪ್ಪ ಹೇಳುವುದು ನೀನು ಸತ್ಯವನ್ನು ಮರೆಸಬಲ್ಲ, ಸಾಕ್ಷಿಗಳಿಗೆ ಪ್ರಾಮುಖ್ಯತೆ ನೀಡುವ ನ್ಯಾಯಕಲ್ಪನೆಯಂತೆ ನಡೆಯದೆ ಸತ್ಯ ಏನು ಎನ್ನುವುದನ್ನು ಕಂಡುಕೊಳ್ಳುವ ಪ್ರಯತ್ನ ಮಾಡು ಎನ್ನುತ್ತಾನೆ. ಈ ಪ್ರಯತ್ನ

'ಬಾದಷಹನ ನ್ಯಾಯ' ಮತ್ತು 'ಬಾದಷಹನ ದಂಡನೆ' ಯಲ್ಲಿ ಹೆಚ್ಚು ಅಧಿಕೃತವಾಗಿ ಕಂಡು ಬರುತ್ತದೆ. 'ಬಾದಷಹನ ನ್ಯಾಯ' ಕಥೆಯಲ್ಲಿ ಉಸಾಫಖಾನ ಮತ್ತು ಯೋಹಾನೆಮುತಿಯ ನಡುವಿನ ಜಗಳವನ್ನು ಬಾದಷಹ ಪರಿಹರಿಸುವುದು ಮತ್ತು ನಿಜವಾದ ಅಪರಾಧಿಯನ್ನು ಪತ್ತೆ ಹಚ್ಚು ವುದು ಇಂದಿನ ನ್ಯಾಯ ಕಲ್ಪನೆಗಿಂತ ಸೂಕ್ತ ಎನ್ನುವಂತಿದೆ.

ಇದೇ ಮಾದರಿಯ 'ಬಾದಷಹನ ದಂಡನೆ' ಕಥೆಯಲ್ಲಿ ನ್ಯಾಯ ಪರಿಹರಿಸುವಾಗ ಅಪರಾಧಿ ತನ್ನ ಮಗನಾದರೂ ಸರಿಯೇ ತಪ್ಪಿಗೆ ಶಿಕ್ಷೆ ಆಗಲೇಬೇಕು ಎಂಬ ಧೃಢ ಮನಸ್ಸುಳ್ಳ ಬಾದಷಹ ಅಪರಾಧಿಯನ್ನು ಮುಖ ನೋಡದೇನೆ ದಂಡನೆ ನೀಡುತ್ತಾನೆ. ತಪ್ಪಿಗೆ ಶಿಕ್ಷೆ ಆಗಲೇ ಬೇಕು. (ತಪ್ಪಿಗೆ ಶಿಕ್ಷೆ ನೀಡುತ್ತಿದ್ದರು) ಎನ್ನುವ ನಮ್ಮ ನಮ್ಮ ರಾಜರ ನೀತಿಯಂತೆ ಕಾಣು ತ್ತವೆ. ಇದನ್ನು ಒಪ್ಪಿಕೊಂಡೇ ಕಥೆಗಾರರು ಈ ಬಗೆಯ ನ್ಯಾಯವನ್ನು ಒಪ್ಪಿಕೊಳ್ಳು ತ್ತಾರೆ ಎನಿಸುತ್ತದೆ.

ಹಾಗೆಯೇ 'ಧರ್ಮಕಿಂಕರದ ಫಿಟ್ಸ ಸ್ಟಿಫನ್' ಕಥೆಯಲ್ಲಿ ತನ್ನ ಮಗನನ್ನು ಗಲ್ಲಿಗೇರಿ ಸುವುದನ್ನು ಕಾಣಬಹುದು. 'ದುರದೃಷ್ಟದ ಹೆಣ್ಣು' ಕಥೆಯಲ್ಲಿ ಒಂದು ಪ್ರೇಮದ ನಡುವೆ ಆಗುವ ಕೊಲೆಯಂತೆ ಇಲ್ಲಿಯೂ ಕೂಡ ಒಂದು ಹೆಣ್ಣನ್ನು ಇಬ್ಬರು ಸ್ನೇಹಿತರು ಪ್ರೇಮಿಸಿ ಕೊಲೆಯಲ್ಲಿ ಪರ್ಯಾವಸಾನಗೊಳ್ಳುತ್ತವೆ. ಊರಿನ ಹಿರಿಯ ನಗರಾಧ್ಯಕ್ಷನಾದ ಲಿಂಚ್ ಫಿಟ್ಸ ಸ್ಟಿಫನನ ಮಗ ಫಿಟ್ಸ ಸ್ಟೀಫನ ಪ್ರೇಮದ ಸಂಬಂಧದಲ್ಲಿ (ಇಬ್ಬರೂ ಒಬ್ಬಳನ್ನೇ ಪ್ರೀತಿ ಸುತ್ತಿದ್ದರು) ತರುಣ ಸ್ನೇಹಿತನನ್ನು ಕೊಲೆ ಮಾಡುತ್ತಾನೆ. ನಗರಾಧ್ಯಕ್ಷನಾದ ಲಿಂಚ್ ಫಿಟ್ಸ ಸ್ಟೀಫನ ತೀರ್ಪು ಕೊಡಬೇಕು. ಲಿಂಚ್ ಫಿಟ್ಸ ಸ್ಟೀಫನ ಮಗ ಎಂಬ ವ್ಯಾಮೋಹಕ್ಕೊಳ ಗಾಗದೇ ನ್ಯಾಯವೇ ಮುಖ್ಯ ಎಂದು ಮಗನಿಗೆ ಗಲ್ಲು ಶಿಕ್ಷೆ ವಿಧಿಸುತ್ತಾನೆ. ಕೆಲವು ದಿನ ಕಳೆದ ಮೇಲೆ ಫಿಟ್ಸ ಸ್ಟೀಫನಗೆ ಗಲ್ಲಿಗೇರಿಸಬೇಕು. ಈತ ಊರಿನ ಹಲವಾರು ಜನರಿಗೆ ಬೇಕಾದವ ನಾಗಿದ್ದರಿಂದ ಕೆಲವು ಕಟ್ಟುಪಾಡುಗಳನ್ನು ಹಾಕಿ ಕ್ಷಮಿಸಬೇಕು ಎನ್ನುತ್ತಾರೆ. ಮಗನೆಂಬ ವ್ಯಾಮೋಹ ಎಲ್ಲಿ ಕಾಡುತ್ತದೋ ಎಂದು ಬೇರೆಯವರಿಗಿಂತ ಗಲ್ಲಿಗೆ ಏರಿಸಲು ಕೇಳಿಕೊಳ್ಳು ತ್ತಾನೆ. ಯಾರೂ ಒಪ್ಪದಿದ್ದಾಗ ತಾನೇ ಮಗನನ್ನು ಗಲ್ಲಿಗೆ ಏರಿಸುತ್ತಾನೆ. ಈ ಹಿನ್ನೆಲೆ ಯಲ್ಲಿ ಸಂಬಂಧಗಳಿಗಿಂತ ನ್ಯಾಯವೇ ಮುಖ್ಯವಾಗಿ ಕೆಲಸ ಮಾಡುತ್ತದೆ ಅನೇಕ ಕಥೆಗಳಲ್ಲಿ.

'ಇಲ್ಲಿಯ ತೀರ್ಪು' ಕಥೆಯಲ್ಲೂ ಸಹ ಭಾರತೀಯ ಸಂಪ್ರದಾಯದಲ್ಲಿ ಬೆಳದ ಬೋಯಿಗಳು ಕಳ್ಳತನ ಮಾಡಲು ನ್ಯಾಯಮೂರ್ತಿ ಪೆನ್ರಿ ಸಾಹೇಬರೂ ಸಹ ಕಾರಣ ಎಂಬ

ಮಾತಿನ ಹಿಂದಿನ ತರ್ಕ ಕೂಡ ಭಾರತೀಯ ಸಂಪ್ರದಾಯ ಮೌಲ್ಯಗಳನ್ನು ನಂಬಿದ ಮನಸ್ಸು. 'ಏಕೆಂದರೆ ಬೋಯಿಗಳನ್ನು ಮತಾಂತರ ಮಾಡಲು ಪ್ರಯತ್ನಿಸಿದ ಹೆನ್ರಿ ಸಾಹೇಬರು ಇಲ್ಲಿನ ದೇವರು ಕಲ್ಲು ಮೂರ್ತಿ ಎಂದು ಅದರಲ್ಲಿ ಏನೂ ಸತ್ವ ಇಲ್ಲ ಎಂದು ತೋರಿಸುವುದಕ್ಕೆ ಪ್ರಯತ್ನಿಸಿ ಬೋಯಿಗಳು ಬೆಳ್ಳಿ ಪಾತ್ರೆಗಳಿರುವ ಇರುವ ಜಾಗಕ್ಕೆ ಬರುವ ಹಾಗೆ ಮಾಡಿರು-ವುದು ಕೂಡ ಹೆನ್ರಿ ಸಾಹೇಬರೇ. ಆದ್ದರಿಂದ ಇದರಲ್ಲಿ ಅವರದೂ ಅರ್ಥ ತಪ್ಪಿದೆ ಎನ್ನುವ ತೀರ್ಮಾನಕ್ಕೆ ಬರುವ ನಿರೂಪಕವನ್ನು ಕಾಣಬಹುದು." ನಾನು ಬೋಯಿಗಳಿಗೆ ಶಿಕ್ಷೆ ಮಾಡಿದೆನು. ನಾನು ಇಲ್ಲಿ ಇನ್ನೇನೂ ಮಾಡುವ ಹಾಗಿಲ್ಲ. ಆದರೆ ಈ ಕಳ್ಳತನದ ತಪ್ಪು ಅರ್ಥ-ವಾದರೂ ಹೆನ್ರಿ ಸಾಹೇಬರದೆಂದು ನನಗೆ ಈಗಲೂ ತೋರುತ್ತದೆ. ಅದನ್ನು ದೇವ ದೇವನು ನಿವಾರಿಸಿಕೊಳ್ಳಬೇಕು" (ಸಣ್ಣ ಕಥೆಗಳು — ಮಾಸ್ತಿ — ಸಂ — 1 — ಪು —13).

'ಮಾಸ್ತಿಯವರ ಕಥೆಗಳ ಹಿನ್ನೆಲೆಯಲ್ಲಿ ನ್ಯಾಯ ಪರಿಕಲ್ಪನೆಯನ್ನು ಎರಡು ಬಗೆಯಲ್ಲಿ ನೋಡಲು ಸಾಧ್ಯ. 1. ತಮ್ಮ ಧರ್ಮ, ಜಾತಿ ಮತ್ತು ಜನಸಾಮಾನ್ಯರ ನಡುವೆ ನಡೆವ ನ್ಯಾಯ, ತೀರ್ಪುಗಳು. ಇದು ತುಂಬ ನ್ಯಾಯಬದ್ಧವಾಗಿರುತ್ತವೆ. ಇಲ್ಲಿ ಸಾಮಾ-ನ್ಯವಾಗಿ ಸತ್ಯಕ್ಕೆ ಶಿಕ್ಷೆ ಆಗುವುದೇ ಇಲ್ಲ. ಬಾದಷಹನ ನ್ಯಾಯ, ಬಾದಷಹನ ದಂಡನೆ, ಧರ್ಮ ಕಿಂಕರ ಫಿಟ್ಸ್ ಸ್ಟೀಫನ್, ಮುಂತಾದವು. 2. ಎರಡು ಧರ್ಮಗಳ ನಡುವೆ ನಡೆವ ನ್ಯಾಯ ತೀರ್ಮಾನ. ಇವು ಸಾಮಾನ್ಯವಾಗಿ ತಮ್ಮ ಧರ್ಮಕ್ಕೆ ಬದ್ಧವಾಗಿರುತ್ತವೆ. ಒಂದು ಧರ್ಮದ ಪ್ರಕಾರ ಬೇರೆ ಧರ್ಮಕ್ಕೆ ತೊಂದರೆಯಾದರೂ ಪರವಾಗಿಲ್ಲ ತಮ್ಮ ಧರ್ಮ ಪರವಾಗಿಯೇ ನಿಲ್ಲುತ್ತವೆ. 'ಡಾಬಾಯಿ ಪಾದ್ರಿಯ ಒಂದು ಪತ್ರ', ಇಲ್ಲಿನ ತೀರ್ಪು ಇದಕ್ಕೆ ಸರಿಯಾದ ಉದಾಹರಣೆ.. ಡಾಬಾಯಿ ಪಾದ್ರಿಯ ಒಂದು ಪತ್ರದಲ್ಲಿ ಟೀಪು ಸುಲ್ತಾನ ನೀಡುವ ತೀರ್ಮಾನ ತಮ್ಮ ಧರ್ಮಕ್ಕೆ ವಿರೋಧವಾಗಿ ಬೇಡ ನ್ಯಾಯಬದ್ಧವಾಗಿಯೂ ಇರುವುದಿಲ್ಲ. ತಮ್ಮ ಧರ್ಮದವರು ಹಿಂದೂಗಳನ್ನು ಬಲವಂತವಾಗಿ ತಮ್ಮ ಮತಕ್ಕೆ ಸೇರಿಸಿಕೊಂಡರೂ ಅವರಿಗೆ ಶಿಕ್ಷೆ ಕೊಡದೆ ಹಾರಿಕೆಯ ತೀರ್ಪು ಕೊಡುತ್ತಾನೆ. ಇನ್ನು ಮುಂದೆ ನೀವು ಹೀಗೆ ಮಾಡ-ಬಾರದೆಂದು ಹೇಳಿ ಮುಗಿಸುತ್ತಾನೆ. ಹಾಗೆಯೇ ' ಇಲ್ಲಿಯ ತೀರ್ಪು ' ಕಥೆಯಲ್ಲಿ ಕೂಡ ಬೋಯಿಗಳನ್ನು ಕ್ರೈಸ್ತ ಧರ್ಮಕ್ಕೆ ಸೇರಿಸುವ ಉದ್ದೇಶ ಹೊಂದಿದ ಹೆನ್ರಿ ಸಾಹೇಬರ ತೀರ್ಮಾನ ಕೂಡ ಅದೇ ಆಗಿದೆ. ಆ ನ್ಯಾಯದ ತೀರ್ಪು ನೀಡುವ ನಿರೂಪಕನ ಮನಸ್ಸು ಮಾತ್ರ ಹಿಂದೂ ಸಂಪ್ರದಾಯದಲ್ಲಿ ಮೂಲದ್ದು ಎನ್ನುವುದು ಸ್ಪಷ್ಟವಾಗಿ ಕಾಣುತ್ತದೆ.

ಈ ಮೇಲಿನ ಎರಡು ಬಗೆಯ ತೀರ್ಪುಗಳು ಒಂದೆಡೆಯಾದರೆ ಇವೆರಡನ್ನು ಸಮಾನವಾಗಿ ಕಾಣುವ ನ್ಯಾಯ, ತೀರ್ಮಾನಗಳು ಕೂಡ ಕಂಡು ಬರುತ್ತವೆ. ಇಲ್ಲಿ ಕೇವಲ ಮನುಷ್ಯರ ನಡುವಿನ ನ್ಯಾಯ ತೀರ್ಮಾನದಂತೆ ವ್ಯಕ್ತವಾಗುತ್ತವೆ. ಈ ಬಗೆಯ ನ್ಯಾಯ ತೀರ್ಮಾನ ಹಳ್ಳಿಗಳಲ್ಲಿ ತನ್ನ ತಮ್ಮಲ್ಲೇ ಊರಿನ ಹಿರಿಯರ ಸಮಕ್ಷಮದಲ್ಲಿ ನಡೆಯುವಾಗ ಮಾತ್ರ ನೋಡುತ್ತೇವೆ. ಯಾವ ಧರ್ಮ, ಜಾತಿ, ಯಾವುದನ್ನೂ ನೋಡದೆ ಸರಿಯಾದ ತೀರ್ಪನ್ನು ಕೊಡುವಲ್ಲಿ ಸಫಲವಾಗುತ್ತವೆ. ಇಲ್ಲಿ ಮೇಲಿನಂತೆ ಒಂದು ಧರ್ಮದ ಪರವಾಗಿ ಕೊಡುವ ತೀರ್ಮಾನದಂತೆ ಕಠಿಣ ಶಿಕ್ಷೆ ಕೊಡಲಾರರು. ಅಥವಾ ತಮ್ಮ ಧರ್ಮದವರೆಂಬ ಕಾರಣದಿಂದ ಅವರನ್ನು ಕಾಪಾಡುವ ಕೆಲಸಕ್ಕೂ ಕೈ ಹಾಕಲಾರರು. ಹಾಗಾಗಿ ಈ ಎರಡೂ ತೀರ್ಪು, ನ್ಯಾಯ ಕಲ್ಪನೆಯ ಮಧ್ಯ ಇರುವ ಸತ್ಯ ಕಂಡುಕೊಳ್ಳುವಂಥವರು. ಮನುಷ್ಯ ತಪ್ಪು ಮಾಡುವುದು ಸಹಜ. ಅದನ್ನು ತಿದ್ದಿಕೊಳ್ಳಲು ಆತನಿಗೆ ಅವಕಾಶ ಮಾಡಿಕೊಡಬೇಕು ಎನ್ನುವ ಮನೋಭಾವ ಉಳ್ಳವರು. 'ಪಕ್ಷಿಜಾತಿ' ಕಥೆಯಲ್ಲಿ ಮುದ್ದಪ್ಪ ಮತ್ತು ಆತನ ತಂಗಿ ಈರಿ ಲೈಂಗಿಕವಾಗಿ ಒಂದಾಗುತ್ತಾರೆ. (ಉದ್ರೇಕ ಕ್ಷಣದಲ್ಲಿ) ಇದು ಊರ ಜನರಿಗೆ ಗೊತ್ತಾಗುತ್ತದೆ. ಮುದ್ದಪ್ಪ ಮತ್ತು ಈರಿ ತಪ್ಪನ್ನು ಒಪ್ಪಿಕೊಳ್ಳುತ್ತಾರೆ. ಮುಂದೆ ಹೀಗೆ ತಪ್ಪು ಮಾಡದೆ ಸರಿಯಾಗಿ ನಡೆದುಕೊಳ್ಳುತ್ತೇವೆ ಎನ್ನುತ್ತಾರೆ. ಇದಕ್ಕೆ ಊರಿನ ಹಿರಿಯರು ಕಠಿಣ ಶಿಕ್ಷೆ ಕೊಡದೆ ಸ್ವಲ್ಪ ದಂಡ ಹಾಕಿ ಮುಂದಿನ ಜೀವನ ಹಸನುಮಾಡಿಕೊಳ್ಳಲು ಅವಕಾಶ ಕೊಡುತ್ತಾರೆ. ಇಲ್ಲಿ ಮಾಸ್ತಿಗೆ ನ್ಯಾಯಕ್ಕಿಂತ ಮನುಷ್ಯನ ಬದುಕು ಮುಖ್ಯವಾಗುತ್ತದೆ.

ಇಂಥ ನ್ಯಾಯ, ತೀರ್ಮಾನದಲ್ಲಿ ಸ್ವಾರ್ಥ ಇರುವುದಿಲ್ಲ. ಯಾವುದೇ ಒಂದು ಧರ್ಮದ ಪರವಾದ ಭಾವನೆ ಕಂಡು ಬರುವುದಿಲ್ಲ. ಕಠಿಣವಾದ ಶಿಕ್ಷೆ ವಿಧಿಸುವುದಿಲ್ಲ. ಬದಲಾಗಿ ತಪ್ಪು ಮಾಡಿದವರಿಗೆ ತಿದ್ದಿಕೊಳ್ಳಲು ಅವಕಾಶ ಕಲ್ಪಿಸಿಕೊಡಲಾಗುತ್ತದೆ. ಬಹುಶಃ ಕಥೆಗಾರರು ಇಂಥ ನ್ಯಾಯ ಪರಿಕಲ್ಪನೆಯನ್ನು ಒಪ್ಪಿಕೊಂಡಿದ್ದಾರೆ ಎನಿಸುತ್ತದೆ. ಏಕೆಂದರೆ ಮನುಷ್ಯ ಮನುಷ್ಯರ ನಡುವೆ, ಸಮುದಾಯಗಳ ನಡುವೆ, ಧರ್ಮಗಳ ನಡುವೆ ಸದಾಕಾಲ ಒಂದಲ್ಲ ಒಂದು ರೀತಿಯಲ್ಲಿ ಸಂಘರ್ಷ ನಡದೇ ಇರುತ್ತದೆ. ಈ ಸಂಘರ್ಷ ಅತಿರೇಕಕ್ಕೆ ಹೋದಾಗ ಅನೇಕ ತಪ್ಪುಗಳು ನಡೆಯುತ್ತವೆ. ಮಾನವೀಯ ದೃಷ್ಟಿಯಿಂದ ತೀರ್ಪು ನೀಡಬೇಕು ಎಂಬುದು ಕಥೆಗಾರರ ಆಶಯವೂ ಆಗಿದೆ ಎನಿಸುತ್ತದೆ. 'ದುರದೃಷ್ಟದ ಹೆಣ್ಣು' ಕಥೆಯಲ್ಲಿ ನಿರೂಪಕ ನ್ಯಾಯಾಧೀಶನಾದಾಗ ಕೊಡುವ ತೀರ್ಪು ಈ ಮಾರ್ಗದ್ದು. ಆದರೆ ಆಧುನೀಕರಣದ ನ್ಯಾಯ ಕಲ್ಪನೆಯಲ್ಲಿ ಸಾಕ್ಷಿಯೇ ಮುಖ್ಯವಾದ ಕಾರಣ ದುರದೃಷ್ಟದ ಹೆಣ್ಣು ಮತ್ತು ಅವಳ ಪ್ರೇಯಸಿಗೆ ಕೊಡುವ ಶಿಕ್ಷೆ ಈ ರೀತಿಯದು. ಇಲ್ಲಿ ಇವರ ಆಂತರಿಕ

ನೋವಿಗೆ ಬೆಲೆಯೇ ಇಲ್ಲದಂತಾಗುತ್ತದೆ. ನಿರೂಪಕ, ನ್ಯಾಯಾಧೀಶ ಸರಕಾರಿ ಅಧಿಕಾರದವನಾಗಿರುವುದರಿಂದ ಶಿಕ್ಷೆ ಅನಿವಾರ್ಯವಾಗುತ್ತದೆ. ಆದರೆ ಆತನ ಮನಸ್ಸು ಆ ಯುವ ಪ್ರೇಮಿಗಳ ಕಡೆಗೇನೆ ಇರುತ್ತದೆ. '' ಸೆಷನ್ ಕೋರ್ಟಿನಲ್ಲಿ ಇದೇ ಮಾತು ಪ್ರಮಾಣವಾಯಿತು. ಅಪರಾಧಿ ಪರದ ಲಾಯರು' ಇದು ಕೊಲೆ ಆಗುವುದಿಲ್ಲ, ಉದ್ದೇಶವಿಲ್ಲದೆ ನಡೆದ ಸಾವು ಆಗುತ್ತದೆ. ಸಂದರ್ಭವನ್ನು ಗಮನಿಸಿದರೆ ತೀರ ಕಡಿಮೆ ಶಿಕ್ಷೆಯನ್ನು ಕೊಡಬೇಕು ಎಂದು ಕೋರ್ಟ್ ಸನ್ನಿಧಾನಕ್ಕೆ ತೋರಬೇಕು. ಇದನ್ನು ನಾನು ಹೇಳಬೇಕಾಗಿಲ್ಲ' ಎಂದು ವಿಜ್ಞಾಪನೆ ಮಾಡಿದರು.

ಜಡ್ಜರು ಎಷ್ಟು ಶಿಕ್ಷೆ ಕೊಟ್ಟರೋ ನನಗೆ ನೆನಪಿಲ್ಲ. ಅದು ಕೊಲೆಗೆ ಕೊಡುವ ಶಿಕ್ಷೆ ಅಲ್ಲ. ಹುಡುಗ ಒಂದು ವರ್ಷವೋ ಎರಡು ವರ್ಷವೋ ಜೈಲಿಗೆ ಹೋಗಬೇಕಾಯಿತು.

ಸೆರೆಯಿಂದ ಬಂದ ಇವನು ಆ ಹುಡುಗಿಯನ್ನು ಮದುವೆಯಾದನೆ ನನಗೆ ತಿಳಿಯದು. ಆಗಿರಬಹುದು. (ಮಾಸ್ತಿ – ಸಣ್ಣ ಕಥೆಗಳು – ಸಂ – 5 – ಪು –41–42)

ಕಥೆಗಳಲ್ಲಿ ಬರುವ ಇಂಥ ಸಂದರ್ಭದಲ್ಲಿ ಕಥೆಗಾರರ ಮನಸ್ಸು ಸಂಪೂರ್ಣವಾಗಿ ಮಾನವೀಯತೆಯ ಕಡೆಗೆ, ಹಸನುಗೊಳಿಸುವ ಜೀವನದ ಕಡೆಗೆ ನಮ್ಮ ನ್ಯಾಯವನ್ನು ವಾಲಿಸುತ್ತಾರೆ. ಇಲ್ಲಿ ಶಿಕ್ಷೆ ಮುಖ್ಯ ಆಗುವುದಿಲ್ಲ. ಸಾಕ್ಷಿಗಳು ಮುಖ್ಯವಾಗುವುದಿಲ್ಲ. ಬದಲಾಗಿ ಮನುಷ್ಯನ ಬದುಕು ಮುಖ್ಯವಾಗುತ್ತದೆ. ಕಥೆಗಳ ಒಳ ಅಂತರ್ಯದಲ್ಲಿ ನ್ಯಾಯದ ಪರಿಕಲ್ಪನೆ ಬಗ್ಗೆ ಈ ನಿಲುವು ಕಂಡು ಬರುತ್ತದೆ. ಹಲವಡೆ ಧರ್ಮ ಪರವಾಗಿ, ಧರ್ಮವಿರೋಧವಾಗಿ ಕಂಡರೂ ಕೂಡ ವಗಳ ಅಂತರಂಗದಲ್ಲೂ ಕೂಡ ಇಂಥ ಸತ್ಯವೇ ಅಡಗಿರುತ್ತವೆ.

ಅಧ್ಯಾಯ : 6

ವಿವಾಹ ಸಂಬಂಧಗಳು

ವಿವಾಹ ಸಂಬಂಧಗಳು

ಮಾಸ್ತಿಯವರು ಮೇಲು ನೋಟಕ್ಕೆ ಭಾರತೀಯ ಪರಂಪರಾ ಬದ್ಧರು. ಅದರಲ್ಲಿ ಅನುಮಾನವಿಲ್ಲ. ಆದರೆ ಕಥೆಗಳ ಆಳಕ್ಕೆ ಓದುಗ ಇಳಿಯುತ್ತ ಹೋದಂತೆ ಎಲ್ಲ ಪರಂಪರೆಗಳನ್ನು ಮೀರಿ ಮಾನವೀಯ ಸಂಬಂಧಗಳನ್ನು ಬಯಸುತ್ತ ಹೋಗುತ್ತಾರೆ.

ರಂಗನ ಮದುವೆಯಿಂದ ಮಾಯಣ್ಣನ ಕನ್ನಡಿಯವರೆಗೆ ಎಲ್ಲ ಕಥೆಗಳಲ್ಲಿ ಸಾಮಾಜಿಕ ಜೀವನದಲ್ಲಿ ರೂಪು ತಳೆದ ವಿವಾಹ ಸಂಬಂಧಗಳ ಅನೇಕ ಮಗ್ಗುಲುಗಳನ್ನು ನೋಡಿದರೆ ಗಂಡು ಹೆಣ್ಣುಗಳ ಸಂಬಂಧಗಳ ಅನೇಕ ಮುಖಗಳು ವಿಭಿನ್ನ ಸ್ವಭಾವಗಳಲ್ಲಿ ಪ್ರಕಟಗೊಳ್ಳುವುದು ಕಾಣುತ್ತೇವೆ. ರಂಗನ ಮದುವೆ, ರಂಗಪ್ಪನ ಕೋರ್ಟ್‌ಷಿಪ್‌ನಂಥ ಅನೇಕ ಕಥೆಗಳಲ್ಲಿ ಗಂಡ ಹೆಂಡತಿಯರು, ಭಾರತೀಯ ಸಂಪ್ರದಾಯ ಮೌಲ್ಯಗಳಲ್ಲಿ ಬೆಳದ ಹೆಣ್ಣು ಗಂಡುಗಳು. ಅವರಲ್ಲಿನ ಪರಸ್ಪರ ಪ್ರೇಮ, ಪ್ರೀತಿ, ಹುಸಿಗೋಪ ಮುನಿಸುಗಳಲ್ಲೇ ಜೀವನದ ನೆಮ್ಮದಿ ಕಂಡುಕೊಳ್ಳುವ ಪಾತ್ರಗಳು.

ಕಥೆಯಲ್ಲಿ ಬರುವ ವಿವಾಹ ಸಂಬಂಧಗಳು ಯಾವುದೇ ಒಂದು ದೃಷ್ಟಿಕೋನದಿಂದ ನೋಡದೆ, ಮನುಷ್ಯತ್ವದ ದೃಷ್ಟಿಯಿಂದ ನೋಡಿದರೆ ಕಥೆಗಳ ಯಶಸ್ಸು ಪಡೆದ ರೀತಿ ಗೊತ್ತಾಗುತ್ತದೆ. ಮುಖ್ಯವಾಗಿ ಕಥೆಗಳಲ್ಲಿ ಎರಡು ರೀತಿಯ(ಮಾರ್ಗದ) ವಿವಾಹ ಸಂಬಂಧಗಳು ಕಂಡು ಬರುತ್ತವೆ.

1. ಭಾರತೀಯ ಸಂಪ್ರದಾಯಗಳಲ್ಲಿ ನಡೆದ, ನಡೆಯುತ್ತಿರುವ, ವಿವಾಹ ಸಂಬಂಧಗಳು. ಪತಿಯೇ ಪರದೈವ ಎಂಬ ಕಲ್ಪನೆಯಲ್ಲಿ ಹೆಣ್ಣು ಬದುಕುವುದು. 'ಮುನೀಶ್ವರನ ಮರದ ರಾಜಮ್ಮ' 'ಒಂದು ಕಾಮನ ಹಬ್ಬದ ಸಾವಿತ್ರಿ', ಮೇಲೂರಿನ ಲಕ್ಷ್ಮಮ್ಮ, 'ಕೃಪಣಮೂರ್ತಿಯ ಹೆಂಡತಿ' ಮುಂತಾದ ಕಥೆಗಳನ್ನು ಈ ನಿಟ್ಟಿನಲ್ಲಿ ಚರ್ಚಿಸಬಹುದು. ಇಲ್ಲಿ ಗಂಡ ಪುರುಷ ಪ್ರಧಾನ ಸಮಾಜದವನು. ಮನೆಯ ಯಜಮಾನ ಈತನೆ. ಈತನೆ ನಿರ್ಧಾರವೆ ಅಂತಿಮ.

ಇಲ್ಲಿ ಹೆಣ್ಣಿಗೆ ಹೆಚ್ಚಿನ ಸ್ವಾತಂತ್ರ್ಯ ಇಲ್ಲ. ಗಂಡನ ದಾಸಿಯಾಗಿ, ಗಂಡನೇ ದೇವರೆಂದು, ಗಂಡನಿಲ್ಲದೆ ತನಗೆ ಜೀವನವೇ ಇಲ್ಲ ಎಂದು ಬದುಕುವವಳು. ಗಂಡ ಊರು ಬಿಟ್ಟು ಹೋದರೆ ಆತನ ಬರುವಿಕೆಗಾಗಿ ಜೀವನ ಪರ್ಯಂತ ಕಾಯುವಳು. ಒಂದು ಕಾಮನ ಹಬ್ಬದ ಸಾವಿತ್ರಿ, ಮುನೇಶ್ವರನ ಮರದ ರಾಜಮ್ಮ, ಸಂನ್ಯಾಸಿ ಇಲ್ಲದ ಸಂನ್ಯಾಸಿಯ ನರಸಮ್ಮ, ವೇಲೂರಿನ ಲಕ್ಷ್ಮಮ್ಮ ತಮ್ಮ ಜೀವನದ ಅನೇಕ ಕಾಮನೆಗಳನ್ನು ಬದಿಗಿಟ್ಟು ಗಂಡನಿಗಾಗಿ ಹಾತೊರೆಯುವ ಹೆಂಡತಿಯರು. ಗಂಡು ಹೇಗೆ ಬೇಕಾದರೂ ಮಾಡಬಹುದು. ಒಂದಲ್ಲ ಅನೇಕ ಸಲ ಮದುವೆ ಆಗಬಹುದು. ಚಿಕ್ಕವ್ವನ ಗಂಡ, ಪುತ್ರಕಾಮೇಷ್ಠಿಯ ಶಾಮಣ್ಣ ತಮಗೆ ವಯಸ್ಸಾದರೂ ಚಿಕ್ಕ ವಯಸ್ಸಿನ (ತಮ್ಮ ಮಕ್ಕಳಿಗಿಂತ ಚಿಕ್ಕವರು) ಹೆಂಡತಿಯನ್ನು ಪಡೆದವರು. ಆದರೆ ಈ ಸ್ವಾತಂತ್ರ್ಯ ಹೆಣ್ಣಿಗಿಲ್ಲ.

2. ಪಾಶ್ಚಾತ್ಯ(ವಸಾಹತೀಕರಣದ) ಹೆಣ್ಣು ಗಂಡುಗಳ ನಡುವಿನ ವಿವಾಹ ಸಂಬಂಧಗಳು. ಇಲ್ಲಿನ ಹೆಣ್ಣು ಭಾರತೀಯ ನಾರಿಯಂತೆ, ಗಂಡನೇ ಸರ್ವಸ್ವ ಎಂದು ಮನೆಯ ಒಳಗಡೆ ಕುಳಿತವಳಲ್ಲ. ಅವಳೂ ಗಂಡಿನಂತೆ ಹೊರಗಡೆ ಬಂದವಳು. ತನ್ನ ಸ್ವಾತಂತ್ರ್ಯಕ್ಕಾಗಿ ಹೋರಾಡುವವಳು. ಪುರುಷ ಪ್ರಧಾನ ಸಮಾಜದಲ್ಲಿ ಪುರುಷ ಹಾಕಿದ ಅನೇಕ ಕಟ್ಟುಪಾಡುಗಳನ್ನು ಧಿಕ್ಕರಿಸಿದವಳು. 'ಹೊಸಪರಿಯ ದಾಂಪತ್ಯ' ಕಥೆಯಲ್ಲಿ ಬರುವ ತರುಣಿ ಲೇಖಕಿ ವಿವಾಹ ಸಂಬಂಧ ಪಡೆದರೂ ಲೈಂಗಿಕವಾಗಿ ವೈಯುಕ್ತಿಕ ಸ್ವಾತಂತ್ರ್ಯ ಇದೆ. ತರುಣಿ ಲೇಖಕಿ ತನಗೆ ಇಷ್ಟವಾದವರ ಜೊತೆ ತನಗೆ ಇಷ್ಟವಾಗುವ ಹಾಗೆ ಗಂಡ ಹೆಂಡಿರ ಸಂಬಂಧದಿಂದ ಅದಕ್ಕಿಂತ ಮುಖ್ಯವಾಗಿ (understanding) ಅರ್ಥಮಾಡಿ ಕೊಳ್ಳುವ ನೆಲೆಯಿಂದ ದೂರ ಸರಿದವಳು. ಅವಳು ತನ್ನ ಕೊನೆಗಾಲದವರೆಗೆ ಹೀಗೆ ಸ್ವತಂತ್ರವಾಗಿ ಬದುಕಿದರೂ ನೆಮ್ಮದಿಯಾಗಿ ಬದುಕಲು ಆಗಲಿಲ್ಲ. (ಸ್ತ್ರೀವಾದಿ ಯೋಚನೆಗಳು ಇದನ್ನು ಒಪ್ಪಿಕೊಳ್ಳುತ್ತವೆ.) ಈ ಬಗೆಯ ಸ್ವಾತಂತ್ರ್ಯ ದಿಂದಲೂ ಹೆಣ್ಣು ನೆಮ್ಮದಿಯಾಗಿ ಬದುಕಲು ಸಾಧ್ಯವಿಲ್ಲ ಎನ್ನುವುದು ಕಥೆಗಾರರ ನಿಲುವು. ಹಾಗೆಯೇ ರಾಣಿ ಹಾಟಷೆಪ್ ಸಿಟೂ ಕೂಡ ತನ್ನ ಗಂಡನಿಗಿಂತ ಬುದ್ಧಿವಂತೆ ಎಂದುಕೊಂಡು, ಗಂಡಸಾಗಿಯೇ ಬಾಳಲು ತನ್ನ ಗಂಡನಿಂದ ದೂರ ಸರಿದು ತನ್ನ ಸಂವೇದನೆಯನ್ನು ಕಳೆದುಕೊಂಡವಳು. ಇವಳೂ ಕೂಡ ಜೀವನಾದ್ಯಂತ ಸುಖಿಯಾಗಿರದೆ ಕೊರಗುತ್ತಾಳೆ. ಇದೇ ನೆಲೆಯಲ್ಲಿ ಯೋಚನೆ ಮಾಡುವ 'ನರ್ತಕಿಯ ಪರಾಭವದ' ನರ್ತಕಿ ತನ್ನ ಸ್ವಾತಂತ್ರ್ಯಕ್ಕೆ ಅಡ್ಡಿ ಬರುತ್ತದೆಂದು ಮದುವೆಯಾಗದೇ ಉಳಿದವಳು.

ಕಥೆಗಾರರು ಈ ಎರಡೂ ಅತಿರೇಕದ ಸಂಬಂಧಗಳನ್ನು ವಿರೋಧಿಸುತ್ತಾರೆ. ಬದಲಾಗಿ ವಿವಾಹ ಸಂಬಂಧ ಮಾಡಿರುವುದು ಗಂಡು ಹೆಣ್ಣು ಪರಸ್ಪರ ಅರಿತು ಬಾಳಲು. ಜೀವನದ ಸಾರ್ಥಕತೆ ಕಂಡುಕೊಳ್ಳಲು. ಭಾರತೀಯರು ಒಂದು ಅತಿರೇಕಕ್ಕೆ ಹೋದರೆ, ಪಾಶ್ಚಾತ್ಯರು ಮತ್ತೊಂದು ಅತಿರೇಕಕ್ಕೆ ಹೋಗಿ ಈ ಸಂಬಂಧದಲ್ಲಿ ಇರುವ ನೆಮ್ಮದಿಯನ್ನು ಹಾಳು ಮಾಡಿಕೊಳ್ಳುತ್ತಾರೆ. ಇವರೆರಡನ್ನು ಒಪ್ಪಿಗೊಳ್ಳದ ಮಾಸ್ತಿ ಇವೆರಡನ್ನು ತಿರಸ್ಕರಿಸದೆ, ಎರಡನ್ನು ಒಪ್ಪಿಕೊಂಡು, ಎರಡರಲ್ಲಿನ ಒಳ್ಳೆಯದನ್ನು ಸಮ್ಮಿಲನಗೊಳಿಸಿ ವಿವಾಹ ಸಂಬಂಧಗಳನ್ನು ಸೃಷ್ಟಿಸುತ್ತಾರೆ. ಗಂಡು ಹೆಣ್ಣು ಪರಸ್ಪರ ವಿರೋಧವಾಗಬಾರದು. ಇಬ್ಬರೂ

ಒಬ್ಬರನ್ನೊಬ್ಬರು ಹೊಂದಿಕೊಂಡು, ಅರಿತುಕೊಂಡು ಆಕಸ್ಮಿಕವಾಗಿ ಆಗುವ ತಪ್ಪುಗಳನ್ನು ಇಬ್ಬರೂ ಸಹಿಸಿಕೊಂಡು ಹೊಂದಾಣಿಕೆಯಿಂದ ಬಾಳಿದಾಗ ಮಾತ್ರ ಅವರ ಬಾಳು ಹಸನಾಗುತ್ತದೆ. ಎನ್ನುವ ಧಾಟಿ ಅನೇಕ ಕಥೆಗಳಲ್ಲಿ ವ್ಯಕ್ತವಾಗುತ್ತದೆ. 'ವೆಂಕಟಿಗನ ಹೆಂಡತಿ' 'ಪಕ್ಷಿಜಾತಿ' ಕಥೆಗಳಲ್ಲಿ ಹೆಣ್ಣು ಆಕಸ್ಮಿಕವಾಗಿ ಎಡುವುತ್ತಾಳೆ. (ಸ್ತ್ರೀವಾದ ದೃಷ್ಟಿಯಲ್ಲಿ ಇದು ತಪ್ಪಲ್ಲ) ಆದರೆ ಅವಳ ಬದುಕಿನ ಸಾರ್ಥಕತೆಯ, ನೆಮ್ಮದಿಯ ನೆಲೆಯಲ್ಲಿ ನೋಡಿದಾಗ ಅದು ತಪ್ಪು. ಏಕೆಂದರೆ ಭಾರತೀಯ ಸಾಂಸ್ಕೃತಿಕ ಸಂದರ್ಭದಲ್ಲಿ ಒಂದು ಹೆಣ್ಣು ಈ ಕೌಟುಂಬಿಕ ವಿವಾಹ ಸಂಬಂಧ ಕಡಿದುಕೊಂಡರೆ ಅವಳ ಬಾಳು ನರಕಯಾತನೆಯದು. (ಇದು ಗಂಡನೇ ಹೆಂಡತಿಯನ್ನು ದೂರ ಮಾಡಿದಾಗಲೂ ಸತ್ಯ. ಹೆಣ್ಣೆ ಅದರಿಂದ ಹೊರ ಬಂದಾಗಲೂ ಸತ್ಯ.) ಕಥೆಗಾರರು ಇಂಥ ಸಂಬಂಧಗಳು ಅಕಸ್ಮಾತ್ ಹರಿದಾಗ ಕರ್ಷಣೆಗೆ ದಾರಿ ಮಾಡಿಕೊಡುತ್ತ ಇಬ್ಬರ ಮುಂದಿನ ಭವಿಷ್ಯ ಹಾಳು ಮಾಡದೆ ಪರಸ್ಪರ ಕ್ಷಮೆ, ಅನುಕಂಪ, ಪ್ರೀತಿಯ ಮೂಲಕ ಈ ಸಂಬಂಧವನ್ನು ಬೆಳೆಯಿಸುತ್ತಾರೆ. ಇಬ್ಬರ ಬಾಳು ಹಾಳಾಗದಂತೆ ಜೀವನದ ಸುಖ ಕಂಡುಕೊಳ್ಳಬೇಕು ಎನ್ನುವ ತುಡಿತ ವ್ಯಕ್ತವಾಗುತ್ತದೆ. ಪರಸ್ಪರ ಈ ಹೊಂದಾಣಿಕೆ ತಪ್ಪಿದರೆ ಏನಾಗುತ್ತದೆ ಎನ್ನುವುದಕ್ಕೆ 'ನರ್ತಕಿಯ ಪರಾಭವ' ದಲ್ಲಿ ಸ್ಟೀನೋಸ್ಲಾನ್ಸ್ಕಿ ನರ್ತಕಿಗೆ ಹೇಳುವ ಮಾತುಗಳು ಹೀಗಿವೆ. ''ನೀವು ಸೂಚಿಸುತ್ತಿರುವ ಸುಧಾರಣೆಯನ್ನು ಒಡನೆಯೇ ಬಳಕೆಗೆ ತಂದರೂ ಅಷ್ಟೇ ಕೋಟಿ ಜೀವ ಕಷ್ಟ ಪಡುತ್ತದೆ. ಈ ಗಂಡ ಹೆಂಡಿರು ಗಂಡ ಒಲ್ಲೆ ಎಂದು ಬೇರೆ ಹೋದರು. ಆ ಗಂಡ ಹೆಂಡಿರು ಹೆಂಡತಿ ಒಲ್ಲೆ ಎಂದಳು ಎಂದು ಬೇರೆ ಹೋದರು. ಆ ಹೆಂಡತಿಗೆ, ಈ ಗಂಡನಿಗೆ ಕಷ್ಟ ಕಟ್ಟಿಟ್ಟದ್ದು. ಆ ಹೆಂಡತಿ ಬೇರೆ ಗಂಡನನ್ನು ಹುಡುಕಬೇಕು. ಆ ಗಂಡ ಬೇರೆ ಹೆಣ್ಣನ್ನು ಹುಡುಕಬೇಕು. ಚಿಕ್ಕವಯಸ್ಸಾದರೆ ಹೇಗೋ ಸ್ವಲ್ಪ ವಯಸ್ಸಾದ ಜನ ಆದರೆ ಇವರಿಗೆ ಜೊತೆ ಸಿಕ್ಕ ಬಹುದೆ? ಹೀಗೆ ಇವರೆಲ್ಲ ಪರದಾಡುತ್ತ ಹೊರಟರೆ ಸಮಾಜ ಏನಾಗುತ್ತದೆ? ಇಷ್ಟಕ್ಕೆ ಮದುವೆ 'ಗಂಡು ಹೆಣ್ಣಿನ ಸುಖ, ಲಾಲನೆ ಅಷ್ಟರ ಸಲುವಾಗಿ ಬೆಳೆದ ಏರ್ಪಾಡಲ್ಲ. ಅದರ ಉದ್ದೇಶ ಸಂಸಾರಗಳನ್ನು ಕಟ್ಟುವುದು

ಅದರಲ್ಲಿ ಗಂಡನ ಹೆಂಡತಿಯ ಸುಖದಷ್ಟೇ ಅವನ ಸಂತಾನದ ಸುಖವೂ ಮುಖ್ಯವಾದ ಸಂಗತಿ." (ನರ್ತಕಿಯ ಪರಾಭವ — ಸಣ್ಣ ಕಥೆಗಳು — ಸಂ — 4 — ಪು —233). ಈ ಮನಸ್ಸು ಮಾಸ್ತಿಯವರ ಅನೇಕ ಕಥೆಗಳಲ್ಲಿ ಅಂತರ್ಗತವಾಗಿದೆ. 'ವೆಂಕಟಿಗನ ಹೆಂಡತಿ' ಕಥೆಯಲ್ಲಿ ಆತನ ಹೆಂಡತಿ ಸಾಹುಕಾರನ ಜೊತೆಗೂಡಿ ಹಿಂದಕ್ಕೆ ಬಂದು ತಪ್ಪಾಯಿತು ಎಂದಾಗ ವೆಂಕಟಿಗ ಅವಳನ್ನು ಕ್ಷಮಿಸಿ , ಅನುಕಂಪದಿಂದ ಮುಂದಿನ ಬಾಳನ್ನು ರೂಪಿಸಿಕೊಳ್ಳುತ್ತಾನೆ. ವೆಂಕಟಿಗ ಒಪ್ಪಿಕೊಳ್ಳದಿದ್ದರೆ ಅಥವಾ ಆತನ ಹೆಂಡತಿ ಹಿಂದಿರುಗದಿದ್ದರೆ ಸ್ಟ್ಯಾನೋಸ್ಲಾವೆಸ್ಕಿ ಹೇಳುವ ಹಾಗೆ ಇಬ್ಬರಿಗೂ ಕೊರಗು ಕಟ್ಟಿಟ್ಟ ಬುತ್ತಿ. ಕಥೆಗಾರರು ಮುಖ್ಯವಾಗಿ ಅದನ್ನು ತಪ್ಪಿಸುತ್ತಾರೆ. 'ಪಕ್ಷಿಜಾತಿ' ಯಲ್ಲಿ ಇದೇ ಸಂದರ್ಭ ಒದಗಿದಾಗ ಸುಲಭವಾಗಿ ಸಮಸ್ಯೆ ಪರಿಹಾರ ಆಗುತ್ತದೆ.

ಸಮಾಜದಲ್ಲಿ ಎಲ್ಲರೂ ಈ ಮನಸ್ಥಿತಿ ಉಳ್ಳವರಾಗಿರುವುದಿಲ್ಲ. ಕಥೆಗಳಲ್ಲಿ ಅನೇಕ ಗಂಡಂದಿರು ಈ ವಿವಾಹ ಸಂಬಂಧ ಬಿಡಿಸಿಕೊಂಡು ಓಡಿಹೋದವರು ಅನೇಕರಿದ್ದಾರೆ. ಮುನೀಶ್ವರನ ಮರದ ರಾಜಮ್ಮನ ಗಂಡ, 'ಒಂದು ಕಾಮನ ಹಬ್ಬ' ದ ಸಾವಿತ್ರಿ ಗಂಡ, ಮೇಲೂರಿನ ಲಕ್ಷಮ್ಮನ ಗಂಡ ಅನೇಕರು. ಇಲ್ಲಿನ ಹೆಣ್ಣುಗಳು ಗಂಡನೇ ದೇವರೆಂದು ನಂಬಿದವರು. ಅದಕ್ಕಾಗಿ ತಮ್ಮ ಪ್ರಾಣವನ್ನು ಬೇಕಾದರೂ ಕೊಡುತ್ತಾರೆ. ಇದು ಭಾರತೀಯ ಸಂಸ್ಕೃತಿಯ ಮೌಲ್ಯ ಎಂದು ನಂಬಿಸುವುದು ಒಂದು ಬಗೆ. ಆದರೆ ಕಥೆಗಳ ಆಳಕ್ಕೆ ಇನ್ನೂ ಇಳಿದರೆ ಕಥೆಗಾರರು ಇದೊಂದು ಮೌಲ್ಯ ಎಂದು ಅರ್ಥೈಸುವ ಬದಲು ಮಾನವೀಯತೆಯ ನೆಲೆಯಲ್ಲಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದರೆ ಕಥೆಗಳ ಅರ್ಥ ಬೇರೆ ರೀತಿಯಾಗಿ ಧ್ವನಿಸುತ್ತವೆ. ಇವರು ಪತಿವ್ರತೆಯರು, ಸಾಧ್ವಿಮಣಿಗಳು ಎಂದು ಹೇಳುವುದು ಸರಿ. ಆದರೆ ಅವರ ಅಂತರಾಳದಲ್ಲಿ ಆದ ನೋವು ಎಷ್ಟು ಎನ್ನುವುದನ್ನು ಅರ್ಥಮಾಡಿಕೊಳ್ಳುತ್ತಾ ಹೋದರೆ ಇಲ್ಲಿನ ಸಾವಿತ್ರಿ, ನರಸಮ್ಮ, ರಾಜಮ್ಮ, ಲಕ್ಷ್ಮಮ್ಮರ ದುಃಖ, ಕೊರಗು, ಮಾನಸಿಕ ಸ್ಥಿತಿ ತಲ್ಲಣಗೊಳಿಸುವಂಥದ್ದು. ಭಾರತೀಯ ಸಾಂಸ್ಕೃತಿಕ ಮೌಲ್ಯಗಳು ಎಂದು ಹೇಳುವ (ಮುಕ್ತಿ ಪಡೆಯಲು ಸಂನ್ಯಾಸತ್ವ ವಹಿಸುವುದು) ಸಂನ್ಯಾಸತ್ವದಿಂದ ಹೆಂಡತಿಯರಿಗೆ ಆದ ನೋವನ್ನು ಚಿತ್ರಿಸುತ್ತಾರೆ. ಏಕೆಂದರೆ ವಿವಾಹ ಸಂಬಂಧವನ್ನು ಮುರಿದು ಹೆಂಡತಿಗೆ ಒಂದು ಬಗೆಯ ಮಾನಸಿಕ ಹಿಂಸೆ ನೀಡುವ ಈ ಗಂಡುಗಳು ಹೇಗೆ ಮುಕ್ತಿ ಪಡೆಯಬಲ್ಲರು? ಎಂಬ ಪ್ರಶ್ನೆ ಏಳುತ್ತದೆ. ಇಲ್ಲಿ ಕಥೆಗಾರರು ವಿವಾಹ ಸಂಬಂಧವನ್ನಷ್ಟೇ ಕುರಿತು ಮಾತಾಡುವುದಿಲ್ಲ. ಅಲ್ಲಿನ ಮನಸ್ಸುಗಳನ್ನು ಸೂಕ್ಷ್ಮ ನೆಲೆಯಲ್ಲಿ ವಿವರಿಸುತ್ತಾರೆ. ಮನುಷ್ಯ ಸಂಬಂಧಗಳನ್ನು ಸೂಕ್ಷ್ಮವಾಗಿ ಅರಿಯಲು ಪ್ರಯತ್ನಿಸುತ್ತಾರೆ. ಆದ್ದರಿಂದಲೇ ಮಾಸ್ತಿ ಕಥೆಗಳು ಸರ್ವಕಾಲಿಕವಾಗಿ ತಮ್ಮ ಸ್ಥಾನವನ್ನು ಸೃಷ್ಟಿಸಿಕೊಳ್ಳಬಲ್ಲವು.

ಈ ಹಿನ್ನೆಲೆಯಲ್ಲಿ ಮಾಸ್ತಿಯವರ ಕಥೆಗಳು ಅರ್ಥೈಸಿಕೊಳ್ಳುತ್ತ ಹೋದರೆ ಸಿಗುವ ಉತ್ತರಗಳು ಭಿನ್ನ ಮಾದರಿಯವುಗಳೆ ಆಗುತ್ತ ಹೋಗುತ್ತವೆ. ಕಥೆಗಾರರ ಉದ್ದೇಶ ಜೀವನವನ್ನು ವ್ಯರ್ಥವಾಗಿ ಹಾಳುಮಾಡಿಕೊಳ್ಳಬಾರದು ಎನ್ನುವುದು, ಅವರ ಎಲ್ಲ ಸಂಬಂಧಗಳಲ್ಲಿನ ಸತ್ವ ಎನಿಸುತ್ತದೆ. ಕೆಳಗಿನ ಉದಾಹರಣೆಯಿಂದ ಇದನ್ನು ಸ್ಪಷ್ಟಪಡಿಸಬಹುದು. 'ದುರದೃಷ್ಟದ ಹೆಣ್ಣು' ಕಥೆಯಲ್ಲಿ ತರುಣಿ ಬೇರೆ ಯುವಕನ ಜೊತೆ ಪ್ರೇಮ ಬೆಳೆಸುವುದಾಗಲೀ, ಗಂಡ ಸತ್ತ ಮೇಲೆ ಕೋರ್ಟಿನಲ್ಲಿ ಹಾಜರಾಗುವಾಗಲೀ ಅವಳ ಮೇಲೆ ಅನುಕಂಪ ಹುಟ್ಟುತ್ತದೆಯೇ ವಿನ: ಬದಲಿಗೆ ಹಾದರದವಳೆಂದು, ಶಿಕ್ಷೆ ಆಗಬೇಕೆಂಬ ಮನಸ್ಸು ಯಾವ ಓದುಗನಿಗೂ ಬರಲಾರದು.

ಹೀಗೆ ವಿವಾಹ ಸಂಬಂಧಗಳಲ್ಲಿ ಉದ್ಭವವಾಗುವ ಸಂಘರ್ಷ, ಅದಕ್ಕೆ ಕಾರಣ ಮತ್ತು ಅವುಗಳನ್ನು ಅರ್ಥಮಾಡಿಕೊಳ್ಳುವ ಪಾತ್ರಗಳು, ಅರ್ಥ ಮಾಡಿಕೊಳ್ಳದೆ ಇರುವಲ್ಲಿನ ಅವರ ದುರಂತ ಬದುಕು ಕಥೆಗಳಲ್ಲಿ ಅನೇಕ.

ಈ ಹಿನ್ನೆಲೆಯಲ್ಲಿ ವಿವಾಹ ಸಂಬಂಧವನ್ನು ಅರ್ಥ ಮಾಡಿಕೊಳ್ಳಲು ಹೊರಟರೆ ಕಥೆಗಾರರು ಹೇಳಲು ಹೊರಟದ್ದು ಮಾನವೀಯ ಸಂಬಂಧಗಳನ್ನು ಎಂದರೂ ತಪ್ಪಾಗಲಾರದು. ಅನೇಕ ಬಾರಿ ದೈವತ್ವ, ವಿಧಿಯ ಕಲ್ಪನೆ ತರುವುದು ಕೂಡ ಕಥೆಗಾರರು ವೈಚಾರಿಕ ನೆಲೆಯಲ್ಲೇ, ಏಕೆಂದರೆ ಮನುಷ್ಯನ ನೆಮ್ಮದಿಗಾಗಿ ಜೀವನದ ಸಾರ್ಥಕತೆಗಾಗಿ ವಿಧಿ, ದೈವತ್ವದ ಕಲ್ಪನೆ ಅಗತ್ಯ ತಂತ್ರವಾಗಿ ಬಳಸಿಕೊಳ್ಳುತ್ತಾರೆ.

ಅಧ್ಯಾಯ : 7

ಆಡಳಿತ ವ್ಯವಸ್ಥೆ

1. ಕುಟುಂಬ
2. ಗ್ರಾಮ
3. ಧರ್ಮ

ಆಡಳಿತ ವ್ಯವಸ್ಥೆ

ಮಾಸ್ತಿಯವರ ಕಥೆಗಳಲ್ಲಿ ವೈವಿಧ್ಯ ಪೂರ್ಣ ಆಡಳಿತ ವ್ಯವಸ್ಥೆ ಇದೆ. ಭಾರತೀಯರು: ತಮ್ಮ ಹಿರಿಯ ತಲೆಮಾರಿನವರು ರೂಢಿಸಿಕೊಂಡು ಬಂದ ಆದರ್ಶದ (ಎಂದು ತಾವು ತಿಳಿದು ಕೊಂಡದ್ದು) ವ್ಯವಸ್ಥೆ ಅವರ ಹಲವಾರು ಕಥೆಗಳಲ್ಲಿ ವ್ಯಕ್ತವಾಗುತ್ತದೆ. ಒಂದು ಸಮಾಜದಲ್ಲಿ ಒಂದು ಕುಟುಂಬದ ಘಟಕದಿಂದ ವಿಶಾಲವಾದ ಧರ್ಮದ ಚೌಕಟ್ಟಿನವರೆಗೆ ಅನೇಕ ಹಂತಗಳಲ್ಲಿ ತಾವು ಬದುಕಿದ ಕಾಲದ ವ್ಯವಸ್ಥೆಗಿಂತ ಹೆಚ್ಚಾಗಿ ತಮ್ಮ ಪರಂಪರೆಯಲ್ಲಿ ಇತ್ತು ಎನ್ನುವ ಆಡಳಿತ ವ್ಯವಸ್ಥೆ ರೂಪಿಸುತ್ತ ಹೋಗುತ್ತಾರೆ.

ಪಾಶ್ಚಾತ್ಯ ರಾಷ್ಟ್ರದ ಸಮಾಜಕ್ಕೆ ಸೇರಿದ ಕಥೆಗಳಂತೆ ಕಾಣುವ ಸಮಾಜದಲ್ಲಿ ಈ ಬಗೆಯ ಆಡಳಿತ ವ್ಯವಸ್ಥೆ ಸಂಪೂರ್ಣ ಭಿನ್ನವಾದದ್ದು. ಅದು ಮಾಸ್ತಿಯವರು ಕೇಳಿ, ಓದಿ, ತಿಳಿದ ವ್ಯವಸ್ಥೆಯೇ ಹೊರತು ತಾವೇ ಅಂಥ ವ್ಯವಸ್ಥೆಯಲ್ಲಿ ಜೀವನ ಮಾಡಿದವರಲ್ಲ. ಆದ್ದರಿಂದಲೇ ಅಲ್ಲಿ ಕಂಡು ಬರುವ ಸಾಂಸ್ಕೃತಿಕ ದಾಖಲೆಗಳು ಮೇಲ್ಪದರ ರೂಪದವುಗಳಾಗುತ್ತವೆ. ಅದು ಕುಟುಂಬ ವ್ಯವಸ್ಥೆಯೇ ಆಗಬಹುದು. ಸಮಾಜ ವ್ಯವಸ್ಥೆಯೆ ಆಗಿರಬಹುದು ಅಥವಾ ಧರ್ಮ ವ್ಯವಸ್ಥೆಯೇ ಆಗಿರಬಹುದು. 'ಏಕೆಂದರೆ ಹೆಚ್ಚು ಎಂದರೆ ಕಥೆಗಾರರು ಪಾಶ್ಚಾತ್ಯರ ಜೀವನ ಕ್ರಮವಾಗಲೀ, ವ್ಯವಸ್ಥೆಯಾಗಲೀ, ಭಾರತದಲ್ಲಿ ತಾವು ಕಂಡ ಪಾಶ್ಚಿಮಾತ್ಯರ ಜೀವನ ಕ್ರಮದ ಹಿನ್ನೆಲೆಯಲ್ಲಿ ಹುಟ್ಟಿಕೊಂಡವುಗಳು.

<u>ಕುಟುಂಬ ವ್ಯವಸ್ಥೆ</u>

ಕುಟುಂಬ ವ್ಯವಸ್ಥೆಯ ಆಡಳಿತ ಕ್ರಮ ವಿಶೇಷವಾದದ್ದು. ಮತ್ತು ಸಂಪ್ರದಾಯ ಬದ್ಧ ವೈಚಾರಿಕ ನೆಲೆಯುಳ್ಳದ್ದು. ಕುಟುಂಬ ವ್ಯವಸ್ಥೆಯ ಆಡಳಿತ ಪುರುಷ ಪ್ರಧಾನವಾದದ್ದಾದರೂ ಹೆಣ್ಣಿಗೆ ಸಾಕಷ್ಟು ಸ್ವಾತಂತ್ರ್ಯ ಇದೆ. (ಆದರೆ ಕೆಲವು ಪರಿಮಿತಿಯ ಒಳಗಡೆ ಇರುವಂಥವುಗಳು) ಒಂದು ಸಮಾಜದ ಭದ್ರತೆಗೆ ಕುಟುಂಬ ವ್ಯವಸ್ಥೆ ಅತ್ಯಗತ್ಯವಾಗಿರುವುದರಿಂದ ಕಥೆಗಾರರು ಇದರಲ್ಲಿ ಸಂಘರ್ಷಕ್ಕೆ ಹೆಚ್ಚು ಅವಕಾಶ ಕೊಡುವುದಿಲ್ಲ. ಮನೆಯ ಅಥವಾ ಕುಟುಂಬದ

ಜವಾಬ್ದಾರಿ ಗಂಡೆ ವಹಿಸಿಕೊಂಡಿದ್ದರೂ ಹೆಣ್ಣನ್ನು ಮೂಲೆಯಲ್ಲಿ ಕೂರಿಸಿಲ್ಲ. ಸಮಾಜದಲ್ಲಿ ಒಂಟಿಯಾಗಿ ಬಾಳಬಲ್ಲಳು, ಬದುಕಬಲ್ಲಳು. ಕುಟುಂಬದ ಜವಾಬ್ದಾರಿ ನಿರ್ವಹಿಸಬಲ್ಲಳು. (ನಳಿನಿಯ ತಾಯಿ) ಆದರೆ 'ಮೊಸರಿನ ಮಂಗಮ್ಮ' ಕಥೆಯಲ್ಲಿ ಇಡೀ ಕುಟುಂಬದ ಜವಾಬ್ದಾರಿ ತಾನೇ ಹೊರಲು (ಯಜಮಾನಿಕೆ ನಡೆಸಲು) ಮುಂದಾಗುವುದು ಕಾಣುತ್ತೇವೆ. ಆದರೆ ಹೆಣ್ಣು ಕುಟುಂಬದ ಆಡಳಿತ ವಹಿಸಿಕೊಂಡರೆ ಕುಟುಂಬದ ಹೊರಗೆ ಸಮಾಜದಲ್ಲಿ ಗಂಡಿನಂತೆ ಇರಲು ಆಗುವುದಿಲ್ಲ ಎನ್ನುವುದು ಈ ಕಥೆಯಲ್ಲಿ ವ್ಯಕ್ತವಾಗುತ್ತದೆ. ಆದರೆ ಮಂಗಮ್ಮ ಅದನ್ನು ಮಾಡಲು ಹೊರಟು ಕುಟುಂಬ ವ್ಯವಸ್ಥೆಯ ಹೊರಗಡೆ ಬದುಕಲು ಪ್ರಾರಂಭಿಸುತ್ತಾಳೆ. ಸಹಜವಾಗಿಯೇ ಅದರಿಂದ ಅನೇಕ ಕಷ್ಟಗಳು ಅನುಭವಿಸಬೇಕಾಗುತ್ತದೆ. ಕುಟುಂಬದೊಳಗಡೆ ಇರುವಾಗ ಸಿಗುವ ನೆಮ್ಮದಿ, ರಕ್ಷಣೆ ಹೊರಗೆ ಬಂದಾಗ ಸಿಗದಾಗುತ್ತವೆ. ಅನೇಕ ಸಮಸ್ಯೆಗಳು ಉದ್ಭವವಾಗುತ್ತ ಹೋಗುತ್ತವೆ. ಕೊನೆಗೆ ನೆಮ್ಮದಿ ಮತ್ತು ರಕ್ಷಣೆ ಕಂಡುಕೊಳ್ಳಲು ಮಂಗಮ್ಮ ಮಗ-ಸೊಸೆಯ ಜೊತೆ Compromise ಮಾಡಿಕೊಳ್ಳುತ್ತಾಳೆ. ಹೀಗೆ Compromise ಮಾಡಿಕೊಳ್ಳುವ ಪಾತ್ರಗಳು ವಿವಿಧ ಕಥೆಗಳಲ್ಲಿ ಸಿಗುತ್ತವೆ. ('ವೆಂಕಟಿಗನ ಹೆಂಡತಿ', 'ಪಕ್ಷಿಜಾತಿ', 'ಸಂನ್ಯಾಸಿ ಅಲ್ಲದ ಸಂನ್ಯಾಸಿ' ಇತ್ಯಾದಿ).

ಈ ಮಾರ್ಗದಲ್ಲಿ Compromise ಮಾಡಿಕೊಳ್ಳದ ಪಾತ್ರಗಳು ಕೂಡ ಕೆಲವು ಕಥೆಗಳಲ್ಲಿ ಬರುತ್ತವೆ. ನಳಿನಿಯ ತಂದೆ, ಒಂದು ಹಾವಿನ ಹಬ್ಬದ ಕಥೆ, ಮುನೀಶ್ವರನ ಮರ ಮುಂತಾದ ಕಥೆಗಳು. ಇದಕ್ಕಿಂತ, ಮುಖ್ಯವಾಗಿ ಪಾಶ್ಚಾತ್ಯ ಕುಟುಂಬದಲ್ಲಿ ಈ ಸಮಸ್ಯೆ ಎದ್ದು ಕಾಣುತ್ತದೆ. 'ಹೊಸಪಗಿಯ ದಾಂಪತ್ಯ,' 'ಕೆಟ್ಟಕಾಲ' 'ರಾಣಿ ಸಾಟೆಷೇಪ್ ಸಿಟಾ,' 'ಸರ್ಪಿಯ ಪರಾಭವ' ಕಥೆಗಳಲ್ಲಿ ಈ ರೀತಿಯ Compromise ಆಗದ ಹೆಣ್ಣನ್ನು ನೋಡುತ್ತೇವೆ. ಬಹುಶಃ ಅದರಿಂದಲೇ ಇಲ್ಲಿನ ಹೆಣ್ಣುಗಳು ಮಾನಸಿಕವಾಗಿ ನರಳುವಂಥವರಾಗುತ್ತಾರೆ. ಕಥೆಗಾರರ ಪ್ರಕಾರ ಮತ್ತು ಕಥೆಗಳಲ್ಲಿ ಧ್ವನಿಸುವುದು ನೆಮ್ಮದಿಯಾಗಿ ಬದುಕಬೇಕಾದರೆ ಪರಸ್ಪರ ಹೊಂದಾಣಿಕೆ ಮತ್ತು Compromise ಬಹಳ ಮುಖ್ಯ.

ಗ್ರಾಮ ವ್ಯವಸ್ಥೆ:

ಗ್ರಾಮಗಳ ಆಡಳಿತ ಕೂಡ ಭಾರತೀಯ ಪರಂಪರೆಯ ವೈಯಂತಿಯಿಂದಲೇ ಹುಟ್ಟಿಕೊಂಡದ್ದು. ಯಾವುದೇ ಒಂದು ರಾಜ್ಯದ, ರಾಜನ ಆಡಳಿತಕ್ಕೆ ಒಳಪಟ್ಟರೂ ಹಳ್ಳಿಗಳು ಸ್ವತಂತ್ರ

ಘಟಕಗಳಂತೆ ಕೆಲಸ ಮಾಡುತ್ತವೆ. ಗ್ರಾಮದ ಎಲ್ಲ ಆಗುಹೋಗುಗಳನ್ನು ಗ್ರಾಮದ ಮುಖಂಡರು ತೀರ್ಮಾನಿಸುತ್ತಾರೆ.

ಕೌಟುಂಬಿಕ, ಆರ್ಥಿಕ, ಆಡಳಿತ ವ್ಯವಸ್ಥೆಯಲ್ಲಿ ಏಳುವ ಸಮಸ್ಯೆಗಳು ಗ್ರಾಮದಲ್ಲಿ ಕಂಡರೂ ಧಾರ್ಮಿಕವಾಗಿ ಯಾವ ಜಗಳ ಏಳುವುದಿಲ್ಲ. ಧಾರ್ಮಿಕ ಸಮಸ್ಯೆಗಳು ಹುಟ್ಟಿಕೊಳ್ಳುವುದು ನಗರದಲ್ಲೇ ಹೊರತು ಗ್ರಾಮಗಳಲ್ಲಲ್ಲ. ಗ್ರಾಮದಲ್ಲಿ ಬೇರೆ ಬೇರೆ ಧರ್ಮದವರು ಇದ್ದರೂ ಕೂಡ ಅವರೆಲ್ಲ ಒಂದೇ ಎನ್ನುವ ಭಾವನೆ ಇದೆ. ಹಾಗಾಗಿ ಇಲ್ಲಿನ ಸ್ಥಳೀಯ ತೀರ್ಮಾನಗಳು, ಜಗಳಗಳನ್ನು ಎಲ್ಲರಿಗೂ ಸಮಾನವಾದ ರೀತಿಯಲ್ಲಿ ಬಗೆಹರಿಸುತ್ತವೆ.

ಗ್ರಾಮಾಡಳಿತ ಸರಕಾರದ ನೇತೃತ್ವದಲ್ಲಿ ನಡೆಯುವುದಕ್ಕೆ ಪುರಾವೆಗಳು ಸಿಗುತ್ತವೆ. ದೈವೆ ಗಾಡದಲ್ಲಿ ಅಮಲ್ದಾರ ಬರುತ್ತಾನೆ. ಆದರೆ ಗ್ರಾಮದ ಏಳಿಗೆಗಾಗಿ, ಉಳಿವಿಗಾಗಿ ಗ್ರಾಮದವರೇ ಶ್ರಮಿಸುವುದು ಕಾಣುತ್ತೇವೆ. 'ಉಗ್ರಪ್ಪನ ಉಗಾದಿ' ಯ ಊರಿನ ಹಿರಿಯ ಉಗ್ರಪ್ಪ (ಗೌಡ) ಊರವರನ್ನು ತನ್ನ ಮಕ್ಕಳಂತೆ ಕಾಣುತ್ತಾನೆ. ಊರಿನ ಹಿತವನ್ನು ಬಯಸುತ್ತಾನೆ. ಚಿನ್ನಪ್ಪ ಬೈದಾಗಲೂ ಪ್ರತಿಯಾಗಿ ಜಗಳಕ್ಕಿಳಿಯದೆ ಆತನನ್ನು ಸಮಾಧಾನಪಡಿಸುತ್ತಾನೆ.

ಕೌಟುಂಬಿಕ ಚೌಕಟ್ಟಿನಲ್ಲಿ ಏಳುವ ಸಮಸ್ಯೆ ಗಳನ್ನು ಸಹ ಊರಿನವರೇ ನಿವಾರಿಸುತ್ತಾರೆ. 'ಪಕ್ಷಿಜಾತಿ' ಯಲ್ಲಿನ ಈರಿ ತನ್ನ ಅಣ್ಣನೊಂದಿಗೆ ಸೇರಿದ್ದಕ್ಕೆ ಊರಿನವರು ದಂಡ ವಿಧಿಸಿದರು. ಅವಳ ಮುಂದಿನ ಭವಿಷ್ಯ ಹಾಳಾಗಬಾರದೆಂದು ಬಯಸುತ್ತಾರೆ. ಗ್ರಾಮಾಡಳಿತದಲ್ಲಿ ಆಧುನೀಕರಣದ ಆಡಳಿತಕ್ಕೆ ಹೆಚ್ಚು ಪ್ರಾಮುಖ್ಯತೆ ಇಲ್ಲ. ಆದರೆ ಕಾಲಗತಿಯಲ್ಲಿ ಅದು ಎಲ್ಲ ಹಳ್ಳಿಗಳಲ್ಲಿ ಪಸರಿಸುತ್ತಿರುವುದು ಕೂಡ ಗಮನಿಸುತ್ತಾರೆ. 'ಬೆಟ್ಟದ ದೇವರು' ಕಥೆಯಲ್ಲಿ ದೇವರ ಪೂಜೆ ಮಾಡುವ ವಿಷಯದಲ್ಲಿ ಎದ್ದ ವಿವಾದ, [illegible] ಸ್ವಾರ್ಥಗಳಾಗಿ ಪರಿಣಮಿಸುತ್ತವೆ. ಇದು ಪೂಜೆ ಮಾಡಲು ಇದ್ದ ಪೂಜಾರಿಗೆ ಕೊಡುವ ಧಾನ್ಯ ಮತ್ತಿತ್ತರ ಸೌಲಭ್ಯಗಳು ನಿಂತಿದ್ದು ಸಹ ಈ ಹಿನ್ನೆಲೆಯಲ್ಲೇ

ನಗರದ ಆಡಳಿತ ಗ್ರಾಮದ ಆಡಳಿತಕ್ಕಿಂತ ಸಂಪೂರ್ಣ ಬೇರೆಯದು. ಗ್ರಾಮದ ಜನರ ಮನಸ್ಸುಗಳು ಇಲ್ಲಿ ಕೂಡ ಇದ್ದರೂ ಆಡಳಿತ ಮಾತ್ರ ಪೂರ್ಣವಾಗಿ ಪಲ್ಲಟಗೊಂಡಿದೆ. ನಸಾ [illegible] ಸಿಲೆಯಲ್ಲಿ ಯಾಂತ್ರೀಕರಣದ ಬಗೆಗೆ ರೂಪು ತಳೆದಂಗಿದೆ.

ಧರ್ಮ ವ್ಯವಸ್ಥೆ

ಕಥೆಗಳ ಚೌಕಟ್ಟಿನೊಳಗಡೆ ಬರುವ ಧರ್ಮಗಳು ತಮ್ಮ ತಮ್ಮ ಸಿದ್ಧಾಂತದ ಮಾರ್ಗದಲ್ಲಿ ಆಡಳಿತ ನಡೆಸುತ್ತವೆ. ಹಿಂದೂ ಧರ್ಮ ತಾನು ರೂಪಿಸಿಕೊಂಡ ತತ್ವಗಳ ಮಾರ್ಗದಲ್ಲಿ ಆಡಳಿತ ನಡೆಸಿದರೆ, ಕ್ರೈಸ್ತ, ಮುಸ್ಲಿಮ ಧರ್ಮಗಳು ಸಹ ತಮ್ಮ ತಮ್ಮ ಮಾರ್ಗದಂತೆ ಆಡಳಿತ ವ್ಯವಸ್ಥೆ ನಡೆಸುತ್ತವೆ. ಇವು ತಮ್ಮ ತಮ್ಮಲ್ಲೇ ಆಡಳಿತ ನಡೆಸುವಾಗ ಯಾವುದೇ ಸಂಘರ್ಷ ಎದುರಾಗುವುದಿಲ್ಲ. ಎರಡು ಧರ್ಮಗಳು ಪರಸ್ಪರದಲ್ಲಿ ತಮ್ಮ ತಮ್ಮ ತತ್ವಗಳನ್ನು ಎತ್ತಿ ಹಿಡಿಯುವಲ್ಲಿ ಮುಂದಾದರೆ ಘರ್ಷಣೆಗೆ ಎಡೆಮಾಡಿಕೊಡುತ್ತವೆ. 'ಡೊಂಬಾಯಿ ಪಾದ್ರಿಯ ಒಂದು ಪತ್ರ' ಇಲ್ಲಿಯ ತೀರ್ಪು ಮುಂತಾದ ಕಥೆಗಳಲ್ಲಿ ಘರ್ಷಣೆ ಉಂಟಾಗುವುದು ಈ ಹಿನ್ನಲೆಯಲ್ಲಿ.

ಕಥೆಗಾರರಿಗೆ ಇಂಥ ಸಂಘರ್ಷದ ಸ್ಥಿತಿ ವಿವರಿಸುವ ಉದ್ದೇಶಕ್ಕಿಂತ ಮನುಷ್ಯನ ಜೀವನ ಮುಖ್ಯವಾಗಿಸಿಕೊಳ್ಳುತ್ತಾರೆ. ಎಲ್ಲ ಧರ್ಮಗಳ ಅಂತಿಮ ಸತ್ಯ ಒಂದೇ ಆಗಿರುವುದರಿಂದ ಅದನ್ನು ಓದುಗನಿಗೆ ತಲುಪಿಸುವ ಹಂಬಲ ಕಾಣುತ್ತದೆ. ಆದ್ದರಿಂದಲೇ 'ಟಾಂಗಾ ಹುಸೇನ', ವಿಚಾರವಂತ ಅಂತ್ಯಂಗಾರರು ಕಥೆಗಳು ಬರೆಯಲು ಸಾಧ್ಯವಾಗಿದೆ.

ಇಲ್ಲಿಯೂ ಕೂಡ ಮನುಷ್ಯ ಸಂಬಂಧಗಳೇ ಮುಖ್ಯವಾಗುತ್ತದೆ. ಧರ್ಮದ ಚೌಕಟ್ಟಿನಲ್ಲಿ ಮನುಷ್ಯ ಮನುಷ್ಯನನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು ಎನ್ನುವ ಆಶಯವೇ ಇದೆ.

ಅಧ್ಯಾಯ : 8

ಸಮಾರೋಪ

ಸಮಾರೋಪ

ಭಾರತೀಯ ಸಾಂಪ್ರದಾಯಿಕ ಮೌಲ್ಯಗಳನ್ನು ಮಾಸ್ತಿಯವರು ಪುನರ್ನಿರ್ಮಿಸಲು ಯತ್ನಿಸುತ್ತಾರೆ ಎಂದ ಮಾತ್ರಕ್ಕೆ ವಸಾಹತುಶಾಹಿಗೆ ಒಳಗಾಗಿಲ್ಲ ಎಂದಲ್ಲ. ಕಿ.ರಂ.ನಾಗರಾಜ ರವರು ಹೇಳುವಂತೆ'' ವಸಾಹತುಶಾಹಿ ಸಂಸ್ಕೃತಿಯ ಅನುಕರಣೆ ಹಾಗೂ ಪ್ರಭಾವಗಳಿಗೆ ಕೆಲ ಸಮಯ ಪ್ರಜ್ಞಾಪೂರ್ವಕವಾಗಿ ಇಲ್ಲವೇ ಅಪ್ರಜ್ಞಾಪೂರ್ವಕವಾಗಿ ಒಳಗಾಗಿ ಬಿಟ್ಟಿದ್ದೇವೆ. ಯಂತ್ರ ಜ್ಞಾನದ ಬೆಳವಣಿಗೆ, ನಮ್ಮ ಶಿಕ್ಷಣ ಪದ್ಧತಿ ಅಧಿಕಾರಶಾಹಿ ನೆಲೆಗಳು ಹಾಗೂ ಇಂಗ್ಲೀಷ್ ಭಾಷೆಯ ವ್ಯಾಮೋಹ ಇವುಗಳಿಂದ ನಮ್ಮತನವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿರುವ ಸಮಕಾಲೀನ ಸಂದರ್ಭದ ಮುಖ್ಯ ಕ್ರಿಯೆಯಾಗಿದೆ. (ಕಿ.ರಂ.ನಾಗರಾಜ್ — ಸಿರಿಗನ್ನಡ — ಪು — 195) ಇದರಿಂದ ಮಾಸ್ತಿಯವರೂ ಸಹ ಹೊರತೇನಲ್ಲ. ಇದಕ್ಕೆ ಅವರ ಕಥೆಗಳಲ್ಲಿ, ಸಂದರ್ಶನಗಳಲ್ಲಿ ಮತ್ತು ತಮ್ಮ ಆತ್ಮಕಥನವಾದ ಭಾವ ಗಳಲ್ಲಿ ಅನೇಕ ಪುರಾವೆಗಳು ಸಿಗುತ್ತವೆ. ಉದಾಹರಣೆಗೆ ಮಾಸ್ತಿಯವರ ಮೊದಲ ಕತೆಯಾದ 'ರಂಗನ ಮದುವೆ' ಯಲ್ಲಿ ರಂಗಪ್ಪ ಹೇಳುವ 'ಫೇಂಜ್' 'ಎಕ್ಸಾಕ್ಟಲಿ' ಆಗಲಿ ಪ್ರೇಮದಿಂದ ಮಾತಾಡಬೇಕಾದರೆ ನಮ್ಮ ಸಾಹೇಬರಂತೆ ಮಯನ್ನಾದ ಹುಡುಗಿಯನ್ನು ಮದುವೆಯಾಗಬೇಕು ಎನ್ನುವ ರಂಗಪ್ಪನ ಮನಸ್ಸು ವಸಾಹತೀಕರಣದಿಂದಲೇ ಪರಿವರ್ತನೆಗೊಂಡದ್ದು. ಇದಕ್ಕೆ ಇನ್ನೊಂದು ಉದಾಹರಣೆ ಕೊಡಬಹುದು. ಮಾಸ್ತಿಯವರನ್ನು ಸಂದರ್ಶಿಸಿದ ಸಂದರ್ಶನಗಳನ್ನು ನೋಡಿದರೆ ಗೊತ್ತಾಗುತ್ತದೆ. ಒಂದು ಸಂದರ್ಶನದಲ್ಲಿ ಸಂದರ್ಶಕರು ನಮ್ಮ ಸಂಸ್ಕೃತಿ ಅಭಿವ್ಯಕ್ತಿಯ ಬಗ್ಗೆ ಪ್ರಶ್ನಿಸಿದಾಗ ಮಾಸ್ತಿಯವರು ಕೊಟ್ಟ ಉತ್ತರ ಹೀಗಿದೆ. ''ಕಥೆ ನಾನು ಹೇಳಿದ್ದಾ ಇಲ್ಲ. ಇವನ್ನು ನನ್ನ ಒಳಗಿನಿಂದ ನನ್ನ ದೇವರು, ನನ್ನ ದೇಶ, ನನ್ನ ಸಂಸ್ಕೃತಿ, ನನ್ನ ಜನ, ನಮ್ಮ ಹಿರಿಯರು, ಋಷಿಗಳು ಅವರು ಹೇಳಬೇಕಾದ್ದನ್ನು ನನ್ನ ಮೂಲಕ ಹೇಳ್ತಾ ಇದ್ದಾರೆ. ಇವತ್ತಿನ ದಿವಸ

I am a teacher, but did not clime. I am one, I am the mouth piece of the gramaphone. The sound is somebody clsis, the voice is coming through me. ನೋಡಿದಿರಾ ? I have to right to speak Expect in the way. It is the sprit of my fore fathers; they are speeking". (ಎಚ್.ಎಸ್.ರಾಘವೇಂದ್ರರಾವ್ – ಮಾಸ್ತಿ ಸಂದರ್ಶನಗಳು – ಪು –50) ಇಲ್ಲಿ ಮಾಸ್ತಿ ಕನ್ನಡದಲ್ಲಿ ಹೇಳುವುದನ್ನೇ ಒತ್ತು ಕೊಡಲು (Impress ಮಾಡಲು) ಇಂಗ್ಲೀಷನಲ್ಲಿ ಹೇಳುವುದನ್ನು ನೋಡುತ್ತೇವೆ.

ಹೀಗೆ ಮಾಸ್ತಿ ಜೀವನಾದ್ಯಂತ ಕಂಡುಂಡ ಅನುಭವಗಳ ಹಿನ್ನೆಲೆಯಲ್ಲಿ ವೇದಾಂತದ ಜ್ಞಾನಿಯಿಂದ ಹಿಡಿದು ಸಾಮಾನ್ಯ ಜೀವನದಲ್ಲಿ ಬೀಳುತ್ತ, ಏಳುತ್ತ ಇರುವ ಸಾಮಾನ್ಯ ಜ್ಞಾನಿಯವರೆಗೆ ಎಲ್ಲ ಮಟ್ಟದ ಸಂಸ್ಕಾರದ ಜೀವನವನ್ನು, ಅವನ ಅಂತರಂಗದ ಸೂಕ್ಷ್ಮಾತಿ ಸೂಕ್ಷ್ಮವನ್ನು ಕಥೆಗಳಲ್ಲಿ ಬಿಚ್ಚಿಡುತ್ತ ಹೋಗುತ್ತಾರೆ.

ಮಾಸ್ತಿ ಮೇಲು ನೋಟಕ್ಕೆ ಅಪ್ಪಟ ಸಂಪ್ರದಾಯಸ್ಥರು. ಅವರ ಸ್ತ್ರೀ ಪಾತ್ರಗಳು ಸಾಮಾನ್ಯವಾಗಿ ಈ ನಿಟ್ಟಿನಲ್ಲಿ ಸೃಷ್ಟಿಯಾಗಿರುವಂಥವುಗಳು. ಅನೇಕ ಕಥೆಗಳಲ್ಲಿ ಹೆಣ್ಣಿನ ಪಾತ್ರಗಳು ಗಮನಿಸಿದರೆ ಅವಳನ್ನು ಸಂಪ್ರದಾಯದ ನೆಲೆಯಲ್ಲಿ ಹೆಂಡತಿಯಾಗಿ, ತಾಯಿಯಾಗಿ ಸಾಧ್ವಿಮಣಿಯಾಗಿ, ಲೋಕಮಾತೆಯಾಗಿ, ಪ್ರೇಯಸಿಯಾಗಿ ಹತ್ತು ಹಲವು ಬಗೆಗಳಲ್ಲಿ ಚಿತ್ರಿಸುತ್ತಾರೆ. ವೈಭವೀಕರಿಸುತ್ತಾರೆ. ಒಂದು ಕಾಮನ ಹಬ್ಬದ ಸಾವಿತ್ರಿ, 'ಸಾಗಿಸುತ್ತಿನ ಕೊನೆಯ ದಿನಗಳು' ವೇದವತಿ, ವೇಲೂರಿನ ಲಕ್ಷ್ಮಮ್ಮ, ಮುನೀಶ್ವರದ ರಾಜಮ್ಮನವರನ್ನು ಮಹಾ ಸತಿಯರನ್ನಾಗಿ ಚಿತ್ರಿಸುತ್ತಾರೆ. ಇವರಿಗೆ ಗಂಡನೇ ಸರ್ವಸ್ವ. ಅವನಿಲ್ಲದ ಬಾಳು ಇವರಿಗೆ ನೀರಸವಾಗುತ್ತದೆ. ಆದ್ದರಿಂದಲೇ ಮುನೀಶ್ವರನ ಮಠದ ರಾಜಮ್ಮ ಗಂಡ ಗುರುತಿಸದಿದ್ದಾಗ ಹುಚ್ಚಿಯಾಗುತ್ತಾಳೆ. ಕೃಷ್ಣಮೂರ್ತಿಯ ಹೆಂಡತಿ ಕತೆಯಲ್ಲಿ, ಕೃಷ್ಣಮೂರ್ತಿ ತೀರಿಕೊಂಡ ಎಂಬ ಸುದ್ದಿ ಕೇಳಿಯೇ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ವೇಲೂರಿನ ಲಕ್ಷ್ಮಮ್ಮ ಗಂಡನ ಹುಡುಕಾಟಕ್ಕಾಗಿ ಕುರುಡಿಯಾದರೂ ಕಾಶಿಗೆ ಹೋಗಲು ಪ್ರಯತ್ನಿಸುತ್ತಾಳೆ. ಈ ಬಗೆಯ ಪಾತ್ರಗಳು ವೈದಿಕ ಧರ್ಮದ ಸಂಪ್ರದಾಯದ ನೆಲೆಯಲ್ಲಿ ಮೂಡುತ್ತ ಹೋಗುತ್ತವೆ.

ಐತಿಹಾಸಿಕ ಪಾತ್ರಗಳು ಸಹ ಇಂಥ ಕೇಂದ್ರವನ್ನು ಮೀರುವುದಿಲ್ಲ. ಅವು ಲೋಕಮಾತೆಯಂತೆ ಚಿತ್ರಿತಗೊಂಡು ಲೋಕದ ಹೆಗ್ಗಳಿಕೆಗೆ ಹೆಸರಾಗುತ್ತವೆ. ನಿಜಗಲ್ಲಿನ ರಾಣಿ

ರಾಜತ್ವದ ಉಳಿವು ಮತ್ತು ತನ್ನ ಶೀಲವನ್ನು ಕಾಪಾಡಿಕೊಳ್ಳಲು ತನ್ನ ತಮ್ಮನನ್ನು ತಳ್ಳಿ ತಾನೂ ಬೆಟ್ಟದಿಂದ ಹಾರಿ ಆತ್ಮಹತ್ಯ ಮಾಡಿಕೊಳ್ಳುತ್ತಾಳೆ. ಪೆನುಕೊಂಡೆಯ ಕೃಷ್ಣಮೂರ್ತಿಯಲ್ಲಿನ ಲಕ್ಷುಮಾಂಬೆ ಸಹ ಈ ಮಾರ್ಗದವಳೆ.

ಪೌರಾಣಿಕ ನೆಲೆಯಲ್ಲಿ ಹುಟ್ಟುವ ಅನೇಕ ಹೆಣ್ಣಿನ ಪಾತ್ರಗಳು ಸಹ ಭಾರತೀಯ ಸಂಪ್ರದಾಯವನ್ನು ಮೀರಲಾರವು. ಇಲ್ಲಿನ ಹೆಣ್ಣು ಲೋಕಮಾತೆಯಾಗಿ, ಜಗದೋದ್ಧಾರಕಿಯಾಗಿ ಮಾಡುತ್ತಾಳೆ. 'ಗೌತಮಿ ಹೇಳಿದ ಕಥೆ' ಯ ಮಾಲಿನಿ ದತ್ತನನ್ನು (ಕಣ್ವನನ್ನು) ಉದ್ಧಾರ ಮಾಡಿದರೆ 'ಒಂದು ಹಳೆಯ ಕಥೆ' ಯ ಹೆಣ್ಣು ಮಹಾಸಂನ್ಯಾಸಿಯ ತಪ್ಪನ್ನು ತಿದ್ದುತ್ತಾಳೆ. ಈ ಬಗೆಯ ಪಾತ್ರಗಳಿಂದ ಕಥೆಗಾರರು ಸಂಪ್ರದಾಯ ಬದ್ಧರು ಎನಿಸುತ್ತದೆ.

ಮಾಸ್ತಿಯವರು ಈ ಬಗೆಯ ಪಾತ್ರಗಳನ್ನಷ್ಟೇ ಸೃಷ್ಟಿಸಿದ್ದರೆ ಅವರನ್ನು ಸಂಪ್ರದಾಯಸ್ಥರು ಎಂದು ಕರೆಯಬಹುದಿತ್ತು. ಆದರೆ ಇದಕ್ಕಿಂತ ಭಿನ್ನವಾದ ಅನೇಕ ಪಾತ್ರಗಳನ್ನು ಸೃಷ್ಟಿಸಿದ್ದಾರೆ. ಉಳಿದ ಅನೇಕ ಕಥೆಗಳಲ್ಲಿ ಸಂಪ್ರದಾಯ ಮುಖ್ಯವೇ ಅಲ್ಲ. ಅಲ್ಲಿ ಮುಖ್ಯವಾಗುವುದು ಆತನ ಜೀವನ. ಅಂಥ ಕಥೆಗಳಲ್ಲಿ ಜಾತಿ, ಧರ್ಮ ಯಾವುದು ಮುಖ್ಯವಾಗುವುದಿಲ್ಲ. ಬದಲಾಗಿ ಮನುಷ್ಯ ಸಂಬಂಧಗಳು ಮುಖ್ಯವಾಗುತ್ತವೆ. ಆ ಸಂಬಂಧ ಉತ್ತಮಗೊಳಿಸಲು ಬೇಕಾದ ಮನಸ್ಥಿತಿಗಳನ್ನು ವಿವರಿಸುತ್ತಾರೆ. ವೆಂಕಟಿಗ, ಮಂಚ ಇಂಥ ಮನಸ್ಸುಳ್ಳವರು.

ಇದೇನೆ - ಆದರೂ ಮಾಸ್ತಿ ಕಥೆಗಳು ಮೊದಲ ಬಾರಿಗೆ ಓದುಗನನ್ನು ಭಾವನಾತ್ಮಕವಾಗಿ ಆಕರ್ಷಿಸಬಲ್ಲ ಕಥೆಗಳಾಗಿವೆ. ಅನೇಕ ಕಥೆಗಳು ಕೆಲವೊಮ್ಮೆ ಆದರ್ಶದ, ನಂಬಿಕೆಯ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಅತಿರೇಕಕ್ಕೆ ಹೋಗಿ ಸೋಲುತ್ತವೆಂದರೂ ಅವುಗಳ ಅಂತರಾಳಕ್ಕಿಳಿದಾಗ ಅವು ಸೋಲುವುದಿಲ್ಲ. ಭಾವನಾತ್ಮಕವಾಗಿ ಸರ್ವಕಾಲಕ್ಕೂ ಸಮನ್ವಯ ಸಾಧಿಸಿಕೊಳ್ಳುತ್ತವೆ. ಏಕೆಂದರೆ ಕಥೆಗಳು ಸಂಪ್ರದಾಯ, ಕಟ್ಟುಪಾಡುಗಳು ಧರ್ಮ, ಎಲ್ಲವನ್ನು ಮೀರಿ ಮನುಷ್ಯ ಸಂಬಂಧಗಳಲ್ಲಿನ ಒಳ್ಳೆಯತನವನ್ನು ಹುಡುಕುತ್ತವೆ. ಆ ಕಾರಣದಿಂದಲೇ ಮಾಸ್ತಿ ದೊಡ್ಡ ಕಥೆಗಾರರಾಗಿ ನಿಲ್ಲುವುದು.

ಕೆಲವು ಅನುಮಾನಗಳು

1. ಮಾಸ್ತಿ ಕಥೆಗಳುದ್ದಕ್ಕೂ ಕುಟುಂಬ ವ್ಯವಸ್ಥೆಯನ್ನು ಮೀರಿ ಲೈಂಗಿಕವಾಗಿ ಹೊರ

ಬರುವುದು ಕೆಳವರ್ಗದ ಜನಾಂಗದವರು ಮಾತ್ರ. ('ವೆಂಕಟಿಗ ಹೆಂಡತಿ' ಯ ವೆಂಕಟಿಗನ ಹೆಂಡತಿ, 'ಪಕ್ಷಿಜಾತಿ'ಯ ಈರಿ ಮುಂತಾದವರು. ಇದನ್ನು ಹಿಂದಿನ ಅಧ್ಯಾಯದಲ್ಲಿ ವರ್ಣಿಸಿದ್ದೇನೆ).

2. ವೈದಿಕ ಧರ್ಮದ ಹೆಣ್ಣನ್ನು ಎಲ್ಲಾ ಯಾವ ಕಾರಣಕ್ಕೂ ಕುಟುಂಬ ವ್ಯವಸ್ಥೆಯಿಂದಾಚೆಗೆ, ಅನೈತಿಕ ಸಂಬಂಧ ಹೊರಗಡೆಯಿಂದ ಪಡೆದಿಲ್ಲ. ಬದಲಾಗಿ ಅಂಥ ಸಂದರ್ಭ ಒದಗಿದಾಗ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಉದಾ:- ಚಿಕ್ಕವ್ವ.

ಈ ರೀತಿಯ ಪಾತ್ರ ಸೃಷ್ಟಿಗೆ ಕಾರಣವೇನು?

3. ಮಾಸ್ತಿ ಸಂಪ್ರದಾಯಬದ್ಧ ಮೌಲ್ಯಗಳನ್ನು ಬಿಡದೆ ವೈಚಾರಿಕತೆ ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ. ಸಂಪ್ರದಾಯ ಮತ್ತು ವಸಾಹತೀಕರಣ ಸಂಕ್ರಮಣ ಸ್ಥಿತಿಯಲ್ಲಿ ಕೆಲವು ಗೊಂದಲಗಳು ಉದ್ಭವವಾಗುತ್ತವೆ.

4. ವಾಸ್ತವದ ಬದುಕು ಹೇಗಿದೆಯೋ ಹಾಗೆ ಬರೆಯುತ್ತೇನೆ ಎನ್ನುವ ಮಾಸ್ತಿ ಸಂಪ್ರದಾಯದ ಮೌಲ್ಯಗಳನ್ನು ಬಿಡದೆ, ಆಧುನಿಕರಣವನ್ನು ಪೂರ್ಣವಾಗಿ ತ್ಯಜಿಸದೆ ಗೊಂದಲವನ್ನು ಉಂಟು ಮಾಡುತ್ತಾರೆ. (ನಳಿನಿಯ ತಾಯಿ ಆರ್ಥಿಕವಾಗಿ, ಕೌಟುಂಬಿಕವಾಗಿ ದೂರವಾಗಿದ್ದರೂ ಎಂದೂ ಗಂಡನನ್ನು ತಿರಸ್ಕರಿಸುವು

5. ವೈದಿಕ ಧರ್ಮದಲ್ಲಿಯೇ ಮೇಲ್ವರ್ಗದ ಪರವಾಗಿ ನಿಲ್ಲುವ ಮಾಸ್ತಿ ಕೆಳವರ್ಗದ ಜನಾಂಗದಲ್ಲಿ ಮಾತ್ರ ಇಂಥ ಅನೈತಿಕ ಸಂಬಂಧವನ್ನು ಸೃಷ್ಟಿಸಲು ಮೂಲಭೂತ ಕಾರಣಗಳೇನು?

ಇದಕ್ಕೆ ಮಾಸ್ತಿ ಬದುಕಿದ ಕಾಲದ, ಜಾತಿ, ವ್ಯವಸ್ಥೆಯ ಸಾಮಾಜಿಕ ಸಂದರ್ಭದಲ್ಲಿ ಉತ್ತರ ಸಿಗಬಹುದೆ ?

ಅಧ್ಯಾಯ : 9

ಗ್ರಂಥ ಸೂಚಿ

1. ಆಕರ ಗ್ರಂಥಗಳು
2. ನಿಯತಕಾಲಿಕಗಳು

:: ಗ್ರಂಥ ಸೂಚಿ ::

1. ಅನಂತಮೂರ್ತಿ.ಯು.ಆರ್.:1992 : ಪ್ರಜ್ಞೆ ಮತ್ತು ಪರಿಸರ : ಹೆಗ್ಗೋಡು ಅಕ್ಷರ ಪ್ರಕಾಶನ.

2. ಅನಂತಮೂರ್ತಿ.ಯು.ಆರ್.:1992 : ಸಮಕ್ಷಮ : ಹೆಗ್ಗೋಡು, ಅಕ್ಷರ ಪ್ರಕಾಶನ.

3. ಇನಾಂದಾರ್ ವಿ.ಎಂ.:1984 : ಶ್ರೀನಿವಾಸರ ಕಾದಂಬರಿಗಳಲ್ಲಿ ಜೀವನ ದರ್ಶನ ಬೆಂಗಳೂರು, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.

4. ಕೀರ್ತಿನಾಥ ಕುರ್ತಕೋಟಿ:1992 : ಬಯಲು ಆಲಯ: ಹಂಪಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

5. ಕೀರ್ತಿನಾಥ ಕುರ್ತಕೋಟಿ: 1983 : ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.

6. ಕೃಷ್ಣರಾಯ ಅ.ನ: 1973 : ಸಜೀವ ಸಾಹಿತ್ಯ : ಮೈಸೂರು, ಗೀತಾ ಬುಕ್ ಹೌಸ್.

6a. ಕೃಷ್ಣಮೂರ್ತಿ.ಎಂ.ಜಿ.1968 : ಆಧುನಿಕ ಭಾರತೀಯ ಸಾಹಿತ್ಯ ಮತ್ತು [illegible]. ಹೆಗ್ಗೋಡು: ಅಕ್ಷರ ಪ್ರಕಾಶನ.

7. ಗುಂಡಪ್ಪ.ಡಿ.ವಿ. : 1985 : ಸಂಸ್ಕೃತಿ. ಬೆಂಗಳೂರು ಕಾವ್ಯಾಲಯ ಪ್ರಕಾಶನ.

8. ಚಕ್ರವರ್ತಿ.ಜಿ.ಎನ್.: 1993 : ಧರ್ಮಚಕ್ರ, ಹೆಗ್ಗೋಡು, ಅಕ್ಷರ ಪ್ರಕಾಶನ.

9. ನಾಗರಾಜ.ಡಿ.ಆರ್. : 1990 : ಅಮೃತ ಮತ್ತು ಗರುಡ : ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.

10. ನಾಯಕ್.ಜಿ.ಹೆಚ್. : 1978 : ಕನ್ನಡ ಸಣ್ಣ ಕತೆಗಳು (ಸಂ) ಹೊಸದೆಹಲಿ ನ್ಯಾಷನಲ್ ಬುಕ್ ಟ್ರಸ್ಟ್.

11. ಪುರುಷೋತ್ತಮ ಬಿಳಿಮಲೆ: 1992 : ಶಿಷ್ಟ ಪರಿಶಿಷ್ಟ, ಮಂಗಳೂರು ಮುಗಿಪು ಪ್ರಕಾಶನ.

12. ಬರಗೂರು ರಾಮಚಂದ್ರಪ್ಪ:1993 : ಉಪ ಸಂಸ್ಕೃತಿ ಅಧ್ಯಯನ ಮಾಲೆ—ಮುನ್ನುಡಿ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

13. ಬಸವರಾಜ ಕಲ್ಗುಡಿ :1993 : ಕನ್ನಡ ವಾರ್ಷಿಕ (ಸಂ) ಹಂಪಿ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.

14. ಮಾವಿನಕೆರೆ ರಂಗನಾಥ :1972 : ಶ್ರೀನಿವಾಸ (ಸಂ) ಬೆಂಗಳೂರು, ಪುರೋಗಾಮಿ ಸಾಹಿತ್ಯ ಸಂಘ.

15. ಮಾಸ್ತಿ ವೆಂಕಟೇಶ ಅಯ್ಯಂಗಾರ್ 1990 : ಭಾವ–1,2,3 ಬೆಂಗಳೂರು, ಮಾಸ್ತಿ ಜೀವನ ಕಾರ್ಯಾಲಯ.

16.1. ಮಾಸ್ತಿ ವೆಂಕಟೇಶ ಅಯ್ಯಂಗಾರ್ : ಸಣ್ಣ ಕಥೆಗಳು ಸಂ–1,2,3,4,5. ಬೆಂಗಳೂರು, ಮಾಸ್ತಿ ಜೀವನ ಕಾರ್ಯಾಲಯ.

17. ಮಾಸ್ತಿ ವೆಂಕಟೇಶ ಅಯ್ಯಂಗಾರ್– 1973. : ಕರ್ನಾಟಕ ಜನತೆಯ ಸಂಸ್ಕೃತಿ, ಬೆಂಗಳೂರು ಜೀವನ ಕಾರ್ಯಾಲಯ.

18. ರಹಮತ್ ತರೀಕೆರೆ : 1993 : ಪ್ರತಿಸಂಸ್ಕೃತಿ, ಬೆಂಗಳೂರು, ಕನ್ನಡ ಸಂಘ ಕ್ರೈಸ್ತ ಕಾಲೇಜ.

19. ರಾಘವೇಂದ್ರರಾವ್ ಹೆಚ್.ಎಸ್:1990 : ಪ್ರಗತಿಶೀಲತೆ, ಬೆಂಗಳೂರು, ಕರ್ನಾಟಕ ಸಾಹಿತ್ಯ ಅಕಾಡೆಮಿ.

20. ರಾಘವೇಂದ್ರರಾವ್ ಹೆಚ್.ಎಸ್.1993 : ಸಿರಿಗನ್ನಡ(ಸಂ) ಹಂಪಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.

21. ರಾಘವೇಂದ್ರರಾವ್ ಹೆಚ್.ಎಸ್. : ನಿಲವು ಬೆಂಗಳೂರು, ಕನ್ನಡ ಸಂಘ, ಕ್ರೈಸ್ತ ಕಾಲೇಜು.

22. ರಾಜೇಂದ್ರ ಚನ್ನಿ :1991 : ಮಾಸ್ತಿಯವರ ಸಣ್ಣ ಕಥೆಗಳು, ಬೆಂಗಳೂರು ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.

23. ರಾಮಚಂದ್ರ.ಎಂ.: 1992 : ಕನ್ನಡದ ಆಸ್ತಿ, ಬೆಂಗಳೂರು, ಮಾಸ್ತಿ ಶತಮಾನೋತ್ಸವ, ಬೆಂಗಳೂರು.

24. ರೂತ್ ಬೆನೆಡಿಕ್ಟ್(ಅನು: ಶಂಕರನಾರಾಯಣ) 1978. : ಸಂಸ್ಕೃತಿಯ ರೂಪಿಕೆಗಳು, ಬೆಂಗಳೂರು ಕನ್ನಡ ಅಧ್ಯಯನ ವಿಭಾಗ, ಕೃಷಿ, ವಿವಿ.

25. ವಿವಿಧ ಸಂದರ್ಶಕರು (ಸಂ) 1983 : ಮಾಸ್ತಿ ಸಂದರ್ಶನಗಳು, ಬೆಂಗಳೂರು ಪಿ. ಪಿ. ಬಳಗ.

26. ಶಿವರುದ್ರಪ್ಪ.ಜಿ.ಎಸ್.(ಸಂ)1986 : ಮಾಸ್ತಿಯವರ ಸಾಹಿತ್ಯ ಒಂದು ಅಧ್ಯಯನ ಬೆಂಗಳೂರು, ಪ್ರಸಾರಾಂಗ, ಬೆಂಗಳೂರು ವಿ.ವಿ.

27. ಶೇಷಗಿರಿರಾವ್. ಎಲ್.ಎಸ್.: 1993 : ಮಾಸ್ತಿ ಜೀವನ ಮತ್ತು ಸಾಹಿತ್ಯ ಬೆಂಗಳೂರು ಮಾಸ್ತಿ ಶತಮಾನೋತ್ಸವ ಸಮಿತಿ.

28. ಸೀತಾರಾಮಯ್ಯ.ವಿ.:1991 : ಮಾಸ್ತಿ ಕುರಿತು ವಿ.ಸಿ. ಬೆಂಗಳೂರು ವಿ.ಸಿ.ಸಂಪದ ಪ್ರಕಾಶನ.

○ ○ ○ ○

:: ನಿಯತಕಾಲಿಕೆಗಳು ::

1. ಚದುರಂಗ 1993 : ಮಾಸ್ತಿ ಬಂದು ಸೃಜನಾತ್ಮಕ ನೆನಪು (ಸಂವಾದ –28) ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ, ಸಂವಾದ ಪ್ರಕಾಶನ.

2. ನಾಗಭೂಷಣ ಡಿ.ಎಸ್.: 1987 : ಮಾಸ್ತಿ ಕತೆಗಳು ಒಂದು ನೋಟ (ಅಂಕಣ) ಸಂ–8, ಸಂ–5, ಬೆಂಗಳೂರು, ಪಿ.ಪಿ.ಬಳಗ.

3. ನಾರಾಯಣ ಕೆ.ವಿ.1991 : ಮಾಸ್ತಿ ಮಾನವನ ಅಂತಸ್ಥ ಜಗತ್ತಿನ ಶೋಧಕ (ಲೇ) ಪ್ರಜಾವಾಣಿ (ಸಾಪ್ತಾಹಿಕ ಪುರವಣಿ) ಬೆಂಗಳೂರು.

4. ನಾರಾಯಣ ಕೆ.ವಿ.: 1983 : ಶ್ರೀನಿವಾಸರ ಕಥಾ ಲೋಕದೊಳಗಿನ ಕಿರು ದಾರಿಗಳು, ಅಂಕಣ–ಸಂ–4, ಸಂ–5, ಬೆಂಗಳೂರು, ಪಿ.ಪಿ.ಬಳಗ.

5. ನಾರಾಯಣ ಕೆ.ವಿ.:1985 : ಸುಬ್ಬಣ್ಣ ಎಷ್ಟು ಅಧಿಕೃತ: ಸಾಹಿತ್ಯ ವಿಮರ್ಶೆ-೧೯೮೪ (ಸಂ) ಎಚ್.ಎಸ್.ರಾಘವೇಂದ್ರರಾವ್, ಕರ್ನಾಟಕ ಸಾಹಿತ್ಯ ಅಕಾಡೆಮಿ.

6. ಬಸವರಾಜು ಜಿ.ಪಿ. 1986 : ಮಾಸ್ತಿ (ಅಂಕಣ) ಸನ–2, ಸಂ–3, ಬೆಂಗಳೂರು ಪಿ. ಪಿ.ಬಳಗ.

6a. ಬಸವರಾಜ ಕಲ್ಗುಡಿ. 1985 : ಮಾಸ್ತಿಯವರ ಕಥೆಗಳಲ್ಲಿ ಪ್ರತ್ಯುತ್ತರ ಒತ್ತಾಯಗಳ ಕ್ರಿಯೆ. (ಅಂಕಣ) ಬೆಂಗಳೂರು: ಪಿ.ಪಿ.ಬಳಗ.

7. ಭಂಡಾರಿ.ಆರ್.ವಿ.: 1993 : ಕನ್ನಡ ಸಣ್ಣಕತೆಗಳ ಸಾಂಸ್ಕೃತಿಕ ಸ್ವರೂಪದ ನೆಲೆಗಳು, (ಪ್ರ[illegible]) ಸಂ–1, ಸಂ–6, ಮೈಸೂರು.

8. ರಾಘವೇಂದ್ರ ಪಾಟೀಲ (ಸಂ) 1992 : ಕನ್ನಡ ಸಣ್ಣಕತೆಗಳ ಸಾಂಸ್ಕೃತಿಕ ಸ್ವರೂಪದ ನೆಲೆಗಳು, (ಪ್ರ[illegible]) ಸಂ–1, ಸಂ–6, ಮೈಸೂರು.

9. ರಾಘವೇಂದ್ರರಾವ್.ಎಚ್.ಎಸ್.:1983 : ಸಂಕಲನ (ಲೇ) ಬೆಂಗಳೂರು. ಪ್ರಿಂಟರ್ಸ್ ಪ್ರಕಾಶನ.

10. ವಸಂತ ಇನಾಂದಾರ: 1951 : ಜಯ ಕರ್ನಾಟಕ ಪತ್ರಿಕೆ, ಸಂ–29, ಸಂ–4.

11. ವೈದೇಹಿ ಡಂಬಳ: 1945 : ಶ್ರೀನಿವಾಸರ ಕಥೆಗಳು (ಜಯಕರ್ನಾಟಕ) ಸಂ–23, ಸಂ–10.

12. ಶಿವರುದ್ರಪ್ಪ.ಜಿ.ಎಸ್.:1983 : ಮಾಸ್ತಿಯವರ ಸಾಹಿತ್ಯ ಕೆಲವು ಮಾತುಗಳು (ಅಂಕಣ) ಸಂ–4, ಸಂ–6, ಬೆಂಗಳೂರು ಪಿ.ಪಿ.ಬಳಗ.

13. ಸತ್ಯನಾರಾಯಣ ಕೆ.: 1987 : ಹೇಮಕೂಟದಿಂದ ಬಂದ ಮೇಲೆ ಮತ್ತು ನವಿಲುಗಳು (ಅಂಕಣ) ಸಂ–8, ಸಂ–6, ಪಿ.ಪಿ.ಬಳಗ. ಬೆಂಗಳೂರು.

o o o o

20374